ಸಂಪುಟ: 06 ಸಂಚಿಕೆ: 223 ಪುಟಗಳು: 08 ಗುರುವಾರ 29 ಅಕ್ಟೋಬರ್ 2026 www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035621249 ₹5

ಉದಯ ವಾಹಿನಿ

UV 'UV' ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಮುಂಜಾನೆ ಮಾತು

ತಪ್ಪುಗಳನ್ನು ಮಾಡುತ್ತಿರುತ್ತೇವೆ ಎಂದು ಗೊತ್ತಿದ್ದೂ ನಮ್ಮೊಡನೆ ಪ್ರೀತಿಯಿಂದ ಇರಬಯಸುವವರನ್ನು ಗೌರವಿಸೋಣ, ಯಾರೂ ಪರಿಪೂರ್ಣರಲ್ಲವಲ್ಲ!

ನಮ್ಮ ಮೆಟ್ರೋದಲ್ಲಿ ರಹಸ್ಯ ವಿಡಿಯೋ ಚಿತ್ರೀಕರಣದ ಆರೋಪ

• ಉದಯವಾಹಿನಿ, ಬೆಂಗಳೂರು

ಮೆಟ್ರೋ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ವೇಳೆ ತನ್ನ ಅನುಮತಿಯಿಲ್ಲದೇ ರಹಸ್ಯವಾಗಿ ವಿಡಿಯೋ ಚಿತ್ರೀಕರಿಸುತ್ತಿದ್ದ ಎಂದು ಆರೋಪಿಸಿ ಸಹ ಪ್ರಯಾಣಿಕನೊಬ್ಬನನ್ನು ಯುವತಿಯೊಬ್ಬರು ತರಾಟೆಗೆ ತೆಗೆದುಕೊಂಡ ಘಟನೆ ಬೆಂಗಳೂರಿನಲ್ಲಿ ನಡೆದಿದೆ.

4.30ರ ವೇಳೆಗೆ ಈ ಘಟನೆ ನಡೆದಿದ್ದು, ತನಗಾದ ಕಹಿ ಅನುಭವದ ವಿಡಿಯೋವನ್ನು ಯುವತಿ ಇನ್‌ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದಾರೆ. ಸದ್ಯ ಈ ವಿಡಿಯೋ ವ್ಯಾಪಕವಾಗಿ ವೈರಲ್ ಆಗಿದ್ದು, ಯುವತಿ ನೀಡಿದ ದೂರಿನ ಆಧಾರದಲ್ಲಿ ಕಾಡುಗೋಡಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ವಿಡಿಯೋದಲ್ಲಿ ಯುವತಿ ಹೇಳಿರುವ ಪ್ರಕಾರ ವೈಟ್‌ಫೀಲ್ಡ್ ಮಾರ್ಗದ ಮೆಟ್ರೋ ರೈಲಿನಲ್ಲಿ ಪ್ರಯಾಣಿಸುತ್ತಿದ್ದಾಗ ಈ ಘಟನೆ ಸಂಭವಿಸಿದೆ. ವ್ಯಕ್ತಿಯೊಬ್ಬ ತಿಳಿಯದಂತೆ ಮೊಬೈಲ್‌ನಲ್ಲಿ ತನ್ನ ವಿಡಿಯೋ ಚಿತ್ರೀಕರಣ ಮಾಡುತ್ತಿರುವುದನ್ನು ಗಮನಿಸಿದ ಯುವತಿ, ತಕ್ಷಣವೇ ಆತನನ್ನು ತಡೆದು ನಿಲ್ಲಿಸಿ ಪ್ರಶ್ನಿಸಿದ್ದಾರೆ. ಆತನ ಮೊಬೈಲ್ ಫೋನ್

ಕಸಿದುಕೊಂಡು ಅನ್‌ಲಾಕ್ ಮಾಡುವಂತೆ ಪಟ್ಟು ಹಿಡಿದಿದ್ದಾರೆ. ಆದರೆ ಆತ ಅನ್‌ಲಾಕ್ ಮಾಡಿಲ್ಲ, ಮೆಟ್ರೋದಿಂದ ಇಳಿದು ಲಿಫ್ಟ್ ಕಡೆಗೆ ಹೋಗುವಾಗಲೂ ಇಬ್ಬರ ನಡುವೆ ತೀವ್ರ ವಾಗ್ವಾದ ಮುಂದುವರಿದಿದ್ದು, ಘಟನೆಯ ದೃಶ್ಯಗಳು ಯುವತಿಯ ಫೋನ್‌ನಲ್ಲಿ ಸೆರೆಯಾಗಿವೆ.

ವಿಡಿಯೋವನ್ನು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುವುದಾಗಿ ಯುವತಿ ಎಚ್ಚರಿಕೆ ನೀಡಿದಾಗ, ಆರೋಪಿ ನನ್ನನ್ನು ಕ್ಷಮಿಸಿ ಎಂದಿದ್ದಾನೆ. ಕ್ಷಮೆ ಕೇಳುತ್ತಿದ್ದೀಯಾ ಎಂದರೆ ವಿಡಿಯೋ ಮಾಡಿದ್ದನ್ನು ಒಪ್ಪಿಕೊಳ್ಳುತ್ತಿದ್ದೀಯಾ? ಎಂದು ಯುವತಿ ಮರುಪ್ರಶ್ನಿಸಿದಾಗ, ಆತ ತಕ್ಷಣವೇ ಇಲ್ಲ ಎಂದು ನುಣುಚಿಕೊಳ್ಳಲು ಯತ್ನಿಸಿದ್ದಾನೆ. ಬಳಿಕ ಮೆಟ್ರೋ ನಿಲ್ದಾಣಕ್ಕೆ ತಲುಪುತ್ತಿದ್ದಂತೆ ಭದ್ರತಾ ಸಿಬ್ಬಂದಿಯ ಸಮ್ಮುಖದಲ್ಲೇ ಆತ ಯುವತಿಯ ಕೈಯಲ್ಲಿದ್ದ ತನ್ನ ಮೊಬೈಲ್ ಕಸಿದುಕೊಂಡು ಅಲ್ಲಿಂದ ಕಾಲ್ಕಿತ್ತಿದ್ದಾನೆ.

ನಾನು ಮೈತುಂಬಾ ಬಟ್ಟೆ ಧರಿಸಿದ್ದರೂ ಇಂತಹ ಘಟನೆ ನಡೆದಿದೆ. ನನ್ನ ದೇಹದ ಯಾವುದೇ ಭಾಗ ಕಾಣಿಸುತ್ತಿಲ್ಲ, ಆದ್ದರಿಂದ ಈ ಕೃತ್ಯಕ್ಕೂ ನಾನು ಧರಿಸಿದ ಉಡುಪಿಗೂ ಯಾವುದೇ ಸಂಬಂಧವಿಲ್ಲ, ಬೆಂಗಳೂರಿನ ಸಾರ್ವಜನಿಕರು ಈ ವ್ಯಕ್ತಿಯನ್ನು ಹಾಗೂ ಆತ ಕೆಲಸ ಮಾಡುವ ಕಂಪನಿಯನ್ನು ಪತ್ತೆ ಹಚ್ಚಲು ನೆರವಾಗಿ ಎಂದು ಯುವತಿ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಸಾರ್ವಜನಿಕರಿಗೆ ಕೃಷ್ಣಬೈರೇಗೌಡ ಮನವಿ

• ಉದಯವಾಹಿನಿ, ನವದೆಹಲಿ

ಇನ್ಮುಂದೆ ನಿಮ್ಮ ಕಸದ ಡಬ್ಬವನ್ನು ಕೌಂಪೌಂಡ್ ಮೇಲೆ ಅಥವಾ ಗೇಟ್‌ನಲ್ಲಿ ಇಟ್ಟುಹೋಗಿ ನಮ್ಮ ಗಾಡಿಯವರು ತೆಗೆದುಕೊಂಡು ಹೋಗುತ್ತಾರೆ ಎಂದು ಸಚಿವ ಕೃಷ್ಣಬೈರೇಗೌಡ ಅವರು ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ. ಜಿಬಿಎ ಐದು ಪಾಲಿಕೆಯ ಆಯುಕ್ತರ ಜೊತೆ ಸಭೆ ಮಾಡಿದ ಬಳಿಕ ಸುದ್ದಿಗೋಷ್ಠಿ ನಡೆಸಿದ ಅವರು, ಕಸದ ಗಾಡಿಯವರು ನಿಮ್ಮ ಬಳಿಗೆ ಬರುತ್ತಿಲ್ಲ ಎಂದರೆ ತಲೆಕೆಡಿಸಿಕೊಳ್ಳಬೇಡಿ. ನಿಮ್ಮ ಕಸದ ಡಬ್ಬವನ್ನು ನಿಮ್ಮ ಮನೆಯ ಕೌಂಪೌಂಡ್ ಮೇಲೆ ಅಥವಾ ಗೇಟ್‌ನಲ್ಲಿ ಇಟ್ಟುಹೋಗಿ, ಬಳಿಕ ನಮ್ಮ ಗಾಡಿಯವರು ಬಂದು ತೆಗೆದುಕೊಂಡು ಹೋಗುತ್ತಾರೆ ಎಂದು ತಿಳಿಸಿದ್ದಾರೆ. ಇನ್ನೂ ಬೆಂಗಳೂರಿನಲ್ಲಿ ತ್ಯಾಜ್ಯ ವಿಲೇವಾರಿ ಸುಧಾರಣೆಗೆ ನಯಾ ಪ್ಲ್ಯಾನ್ ತರಲಾಗಿದ್ದು, ಹೊಸ ಕಸದ ಟೆಂಡರ್‌ನಲ್ಲಿ ಜಿಬಿಎ ಕಡ್ಡಾಯ ಜೊತೆಗೆ ಎಲ್ಲಾ ಸಿಬ್ಬಂದಿಗೂ ಫೇಶಿಯಲ್ ರೆಕಗ್ನಿಷನ್ ಅಟೆಂಡೆನ್ಸ್ ಸರ್ಕಾರ ಕಡ್ಡಾಯಗೊಳಿಸಿದೆ. ಜೊತೆಗೆ ಎಲ್ಲವೂ ಹೊಸ ಗಾಡಿಗಳನ್ನು ಬಳಕೆ ಮಾಡಬೇಕು ಎಂದು ಕಡ್ಡಾಯ ರೂಲ್ಸ್ ತರಲಾಗಿದೆ. ಐದು ಸಾವಿರ ಗಾಡಿ ಆಟೋ ಟಿಪ್ಪರ್ ಇದೆ. ಶೇ.25ರಷ್ಟು ಬೀದಿಗೆ ಇಳಿಯುತ್ತಿಲ್ಲ ಅಂತ ಗೊತ್ತಿದೆ. ಈಗ ಹೊಸದಾಗಿ 4,500 ಫೋರ್ ವೀಲರ್ ವಾಹನ ತರಿಸಿದ್ದೇವೆ ಎಂದು ಹೇಳಿದ್ದಾರೆ. ಸಭೆಯಲ್ಲಿ ಸಚಿವರು, ರಸ್ತೆ ಗುಂಡಿಗಳ ಅಬ್ಬರದ ಬಗ್ಗೆ ಅಧಿಕಾರಿಗಳನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡಿದ್ದಾರೆ.

ಚಂಡಮಾರುತ ಕರಾವಳಿ ದಾಟಿದ ಬಳಿಕ ರೈಲು ಕಾರ್ಯಾಚರಣೆಗಳ ಸಿದ್ಧತೆಯನ್ನು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಪರಿಶೀಲಿಸಿದ್ದಾರೆ. ಬಿರುಗಾಳಿ, ಮರಗಳ ಉರುಳುವಿಕೆ ಮತ್ತು ಮಳೆಯಿಂದ ಉಂಟಾಗಬಹುದಾದ ಅಡಚಣೆಗಳನ್ನು ಗಮನದಲ್ಲಿಟ್ಟುಕೊಂಡು ರೈಲ್ವೆ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದಾರೆ. ಚಂಡಮಾರುತ ಭೂಭಾಗ ಪ್ರವೇಶಿಸಿ ದುರ್ಬಲಗೊಂಡಿದ್ದರೂ, ಭಾರಿ ಮಳೆ, ನೀರು ನುಗ್ಗುವಿಕೆ ಮತ್ತು ಬಿರುಗಾಳಿಯಿಂದ ಉಂಟಾಗುವ ಅಪಾಯ ಸಂಪೂರ್ಣವಾಗಿ ನಿವಾರಣೆಯಾಗಿಲ್ಲ. ವಿಶೇಷವಾಗಿ ಕರಾವಳಿ ಹಾಗೂ ತಗ್ಗು ಪ್ರದೇಶಗಳಲ್ಲಿ ವಾಸಿಸುವವರು ಎಚ್ಚರಿಕೆಯಿಂದ ಇರಬೇಕು ಎಂದು ಅಧಿಕಾರಿಗಳು ಸೂಚಿಸಿದ್ದಾರೆ. ರಕ್ಷಣಾ ತಂಡಗಳು ಬಿದ್ದ ಮರಗಳನ್ನು ಮತ್ತು ಅವಶೇಷಗಳನ್ನು ತೆರವುಗೊಳಿಸುವುದರ ಜೊತೆಗೆ ವಿದ್ಯುತ್, ರಸ್ತೆ ಮತ್ತು ಇತರ ಅಗತ್ಯ ಸೇವೆಗಳನ್ನು ಪುನಃಸ್ಥಾಪಿಸಲು ಆದ್ಯತೆ ನೀಡಿದೆ. ಹವಾಮಾನ ಇಲಾಖೆಯ ಮುಂದಿನ ಮುನ್ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರಗಳು ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಗಳನ್ನು ಮುಂದುವರಿಸಿವೆ.

ಕಾಂಗ್ರೆಸ್ ಸರ್ಕಾರದ ದುರಹಂಕಾರಕ್ಕೆ ಪರಿಷತ್ ಫಲಿತಾಂಶವೇ ಉತ್ತರ: ಹೆಚ್‌ಡಿಕೆ

• ಉದಯವಾಹಿನಿ, ಬೆಂಗಳೂರು

ವಿಧಾನ ಪರಿಷತ್‌ನ ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರಗಳ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟದ ನಾಲ್ಕೂ ಅಭ್ಯರ್ಥಿಗಳು ಜಯಭೇರಿ ಬಾರಿಸುವ ಮೂಲಕ ರಾಜ್ಯದ ಜನತೆ ಕಾಂಗ್ರೆಸ್‌ನ ದುರಾಡಳಿತಕ್ಕೆ ತಕ್ಕ ಉತ್ತರ ನೀಡಿದ್ದಾರೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ. ದೆಹಲಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ಕಾರ್ಯವೈಖರಿ, ಸಚಿವ ಪ್ರಿಯಾಂಕ್ ಖರ್ಗೆ ಅವರ ದುರಹಂಕಾರ ಹಾಗೂ ವಿವಾದಾತ್ಮಕ ಸ್ಟಿಂಗ್ ಕಾರ್ಯಾಚರಣೆಯ ಕುರಿತು ತೀವ್ರ ಆಕ್ರೋಶ ಹೊರಹಾಕಿದರು. ಪರಿಷತ್ ಚುನಾವಣಾ ಫಲಿತಾಂಶವನ್ನು ವಿಶ್ಲೇಷಿಸಿದ ಕುಮಾರಸ್ವಾಮಿ, ಇದು ಜನವಿರೋಧಿ ಸರ್ಕಾರದ ವಿರುದ್ಧ ವ್ಯಕ್ತವಾಗಿರುವ ಸ್ಪಷ್ಟ ಜನಾದೇಶ. ಅಹಂನಲ್ಲಿ ತೇಲುತ್ತಿದ್ದವರಿಗೆ ಜನತೆ ಕಪಾಳಮೋಕ್ಷ ಮಾಡಿದ್ದಾರೆ. ಮುಖ್ಯಮಂತ್ರಿಯವರ ಜನವಿರೋಧಿ ನೀತಿಗಳು ಮತ್ತು ಭ್ರಷ್ಟಾಚಾರ ರಹಿತ ಆಡಳಿತದ ಬಯಕೆಗೆ ಈ ಫಲಿತಾಂಶ ದಿಕ್ಸೂಚಿಯಾಗಿದೆ ಎಂದು ಹೇಳಿದರು. ನರೇಂದ್ರ ಮೋದಿ ಅವರ ನಾಯಕತ್ವ, ದೇವೇಗೌಡರ ಮೇಲಿನ ಜನರ ಪ್ರೀತಿ ಹಾಗೂ ಬಿಜೆಪಿ-ಜೆಡಿಎಸ್ ಮೈತ್ರಿಯ ಸಮನ್ವಯತೆಯಿಂದ ಈ ಜಯ ಸಾಧ್ಯವಾಗಿದೆ.

ಮುಂದಿನ ಸಿಎಂ ಎಂದು ಕೂಗಿದ ಅಭಿಮಾನಿಗೆ ತಮ್ಮದೇ ಸ್ಟೈಲ್‌ನಲ್ಲಿ ಉತ್ತರ ಕೊಟ್ಟ ಮಾಜಿ ಸಿಎಂ ಸಿದ್ದರಾಮಯ್ಯ

• ಉದಯವಾಹಿನಿ, ಬೆಂಗಳೂರು

ಕೆ.ಆರ್. ನಗರದಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಂಡಿದ್ದು, ಈ ವೇಳೆ ಮುಂದಿನ ಮುಖ್ಯಮಂತ್ರಿ ಎಂಬ ಘೋಷಣೆ ಅಭಿಮಾನಿಯಿಂದ ಮೊಳಗಿದೆ. ಇದಕ್ಕೆ ಅಲ್ಲೇ ಪ್ರತಿಕ್ರಿಯಿಸಿದ ಮಾಜಿ ಸಿಎಂ, ಏಯ್ ಕೂತುಕೊಳ್ಳಪ್ಪ, ಅದಾಗಲೇ ನಾನು ಸಿಎಂ ಆಗಿದ್ದೇನೆ, ಇನ್ನು ಪುನಃ ಮುಂದಿನ ಸಾರಿ ಕೂಗ್ತಾ ಇದ್ದೀಯ ಎಂದು ಹಾಸ್ಯಭರಿತವಾಗಿ ಉತ್ತರಿಸಿದ್ದಾರೆ. ಬೆನ್ನುನೋವಿದ್ದರೂ ಹೆಲಿಕಾಪ್ಟರ್‌ನಲ್ಲಿ ಆಗಮಿಸಿ ಕಾರ್ಯಕ್ರಮದಲ್ಲಿ ಅವರು ಭಾಗಿಯಾಗಿದ್ದರು.

ಮತ್ತೊಂದು ಹನಿಟ್ರ್ಯಾಪ್ ಕೇಸ್

• ಉದಯವಾಹಿನಿ, ಬೆಂಗಳೂರು

ಮಾಜಿ ಸಿಎಂ ಸಿದ್ದರಾಮಯ್ಯ ಬಗ್ಗೆ ಸ್ಟಿಂಗ್ ಆಪರೇಷನ್ ವಿಚಾರವಾಗಿ ರಾಜ್ಯ ರಾಜಕೀಯದಲ್ಲಿ ದಿನಕ್ಕೊಂದು ಬೆಳವಣಿಗೆಗಳು ನಡೆಯುತ್ತಿವೆ. ಆಡಳಿತ ವಿಪಕ್ಷಗಳ ನಡುವೆ ವಾಕ್ಸಮರವೇ ಆರಂಭವಾಗಿದೆ. ಅದರಲ್ಲೂ ಕರ್ನಾಟಕದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ನಡುವೆ ಮಾತಿನ ಕಾಳಗವೇ ಆಗ್ತಿದೆ.

ಈ ಹೊತ್ತಲ್ಲಿ ಮತ್ತೊಂದು ಹನಿಟ್ರ್ಯಾಪ್ ಕೇಸ್ ಮುನ್ನೆಲೆಗೆ ಬಂದಿದ್ದು, ಖಾಸಗಿ ಚಾನಲ್ ವಿರುದ್ಧ ನಿರ್ಬಂಧಕಾಜ್ಞೆ ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಕೆಯಾಗಿದೆ. ಹೌದು, ಮಹಿಳೆಯನ್ನು ಬಿಟ್ಟು ಖಾಸಗಿ ಕ್ಷಣಗಳ ರೆಕಾರ್ಡ್ ಮಾಡಿ ಈಗ ಪ್ರಸಾರ ಮಾಡುವುದಾಗಿ ಬೆದರಿಕೆ ಆರೋಪ ಸಂಬಂಧ ಮಾಗಡಿ ಕ್ಷೇತ್ರದ ಜೆಡಿಎಸ್‌ನ ಮಾಜಿ ಶಾಸಕ ಎ.ಮಂಜುನಾಥ್ ಹೈಕೋರ್ಟ್?ಗೆ ರಿಟ್ ಅರ್ಜಿ ಸಲ್ಲಿಸಿದ್ದಾರೆ.

2018ರ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದಿಂದ ಸ್ಪರ್ಧಿಸಿ ಜಯಗಳಿಸಿ, 2023ರವರೆಗೆ ಇವರು ಮಾಗಡಿ ಕ್ಷೇತ್ರದ ಶಾಸಕರಾಗಿದ್ದರು.

ಅರ್ನಾಬ್ ಅಬ್ಬರ ಜನ ತತ್ತರ

ಆಂಧ್ರ-ಒಡಿಶಾದಲ್ಲಿ ಅರ್ನಾಬ್; ಆಂಧ್ರಪ್ರದೇಶದಲ್ಲಿ ಆರು ಮಂದಿ ಸಾವು: ಒಂದೇ ರಾಜ್ಯದಲ್ಲಿ 1 ಲಕ್ಷ ಜನರ ಸ್ಥಳಾಂತರ

• ಉದಯವಾಹಿನಿ, ದೆಹಲಿ

ಅರ್ನಾಬ್ ಚಂಡಮಾರುತದ ಪರಿಣಾಮವಾಗಿ ಆಂಧ್ರಪ್ರದೇಶದ ವಿವಿಧ ಜಿಲ್ಲೆಗಳಲ್ಲಿ ಆರು ಮಂದಿ ಸಾವನ್ನಪ್ಪಿದ್ದಾರೆ. ವಿಶಾಖಪಟ್ಟಣಂ ಜಿಲ್ಲೆಯಲ್ಲಿ ಇಬ್ಬರು, ಭೀಮವರಂನಲ್ಲಿ (ಪಶ್ಚಿಮ ಗೋದಾವರಿ ಜಿಲ್ಲೆ) ಇಬ್ಬರು, ಸಕಿನೇಟಿಪಲ್ಲಿಯಲ್ಲಿ (ಡಾ. ಬಿ.ಆರ್. ಅಂಬೇಡ್ಕರ್ ಕೋನಸೀಮಾ ಜಿಲ್ಲೆ) ಒಬ್ಬರು ಮತ್ತು ಅನಕಾಪಲ್ಲಿ ಜಿಲ್ಲೆಯಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ವಿಶಾಖಪಟ್ಟಣಂನಲ್ಲಿ, ಹಳೆಯ ಗೋಶಾಲೆಯೊಂದರ ಬಳಿ ವಿದ್ಯುತ್ ಕಂಬವೊಂದು ಕುಸಿದು ಬಿದ್ದಿದ್ದರಿಂದ ಒಬ್ಬರು ಸಾವನ್ನಪ್ಪಿದ್ದಾರೆ. ಮತ್ತೊಂದು ಘಟನೆಯಲ್ಲಿ, ಸಿಂಹಾಚಲಂನ ಬಾಲಾಜಿ ನಗರದ ಬಳಿ ಬಿಂದು ಎಂಬ ವಿವಾಹಿತ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ.

ಮಾಹಿತಿ ತಿಳಿದ ಕೂಡಲೇ ಗೋಪಾಲಪಟ್ಟಣಂ ಪೊಲೀಸರು ಸ್ಥಳಕ್ಕೆ ಆಗಮಿಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಪಶ್ಚಿಮ ಗೋದಾವರಿ ಜಿಲ್ಲೆಯ ಭೀಮವರಂನಲ್ಲಿ ನಡೆದ ಪ್ರತ್ಯೇಕ ಘಟನೆಗಳಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ. ಚರ್ಚೊಂದರ ಬಳಿ ಮರವೊಂದು ಬಿದ್ದಿದ್ದರಿಂದ ಚೊಕ್ಕ ಕಿಶೋರ್ (45) ಎಂಬುವರು ಮೃತಪಟ್ಟರೆ, ಬೊಂಡದಾವರಿ ಬೀದಿಯಲ್ಲಿ ವಿದ್ಯುತ್ ಕಂಬವೊಂದು ಕುಸಿದು ಬಿದ್ದಿದ್ದರಿಂದ ರಾಂಬಾಬು (34) ಎಂಬುವರು ಪ್ರಾಣ ಕಳೆದುಕೊಂಡಿದ್ದಾರೆ.

ಇದರಿಂದ ಉಂಟಾಗಬಹುದಾದ ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು, ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವ ಕಾರ್ಯ ನಡೆಯುತ್ತಿದೆ. ಒಡಿಶಾದ ರಾಜ್ಯ ಕಂದಾಯ ಮತ್ತು ವಿಪತ್ತು ನಿರ್ವಹಣಾ ಸಚಿವ ಸುರೇಶ್ ಪೂಜಾರಿ ಅವರು, ಇಲ್ಲಿಯವರೆಗೆ ಸುಮಾರು 1 ಲಕ್ಷ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ ಎಂದು ತಿಳಿಸಿದ್ದಾರೆ.

1 ಒಡಿಶಾದಲ್ಲೂ ಚಂಡಮಾರುತದ ಅಬ್ಬರ ಜೋರಾಗಿಯೇ ಇದೆ.

2 ಆಂಧ್ರಪ್ರದೇಶದ ಯಾನಂನ ದಕ್ಷಿಣ ಭಾಗದಲ್ಲಿರುವ ಚಂಡಮಾರುತ

3 ಜನರ ಸುರಕ್ಷತೆಗೆ ಹೆಚ್ಚಿನ ಆದ್ಯತೆ

ಈ ಕುರಿತು ಮಾಧ್ಯಮದವರೊಂದಿಗೆ ಮಾತನಾಡಿದ ಸಚಿವರು, ಮಲ್ಕನ್‌ಗಿರಿ, ಗಜಪತಿ, ಗಂಜಾಂ, ಕೋರಾಪುಟ್, ನಬರಂಗ್‌ಪುರ ಮತ್ತು ರಾಯಗಡ ಸೇರಿದಂತೆ ದಕ್ಷಿಣ ಒಡಿಶಾದ ವಿವಿಧ ಜಿಲ್ಲೆಗಳಲ್ಲಿ ಚಂಡಮಾರುತದ ಪ್ರಭಾವ ಕಂಡುಬರುತ್ತಿದೆ. ರಾಜ್ಯ ಸರ್ಕಾರ ಈ ಜಿಲ್ಲೆಗಳ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದೆ ಎಂದು ಹೇಳಿದ್ದಾರೆ.

ಜನರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ಸಂಭವನೀಯ ಹಾನಿಯನ್ನು ಕಡಿಮೆ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಇಲ್ಲಿಯವರೆಗೆ ಯಾವುದೇ ದೊಡ್ಡ ಪ್ರಮಾಣದ ಹಾನಿಯ ವರದಿಗಳು ಬಂದಿಲ್ಲ. ಚಂಡಮಾರುತದ ಪ್ರಭಾವವು ಕ್ರಮೇಣ ಕಡಿಮೆಯಾಗುವ ನಿರೀಕ್ಷೆಯಿದೆ ಎಂದು ಸಚಿವರು ತಿಳಿಸಿದ್ದಾರೆ. ಬೆರ್ಹಾಂಪುರ ಮುನ್ಸಿಪಲ್ ಕಾರ್ಪೊರೇಷನ್ ವ್ಯಾಪ್ತಿಯಲ್ಲಿ 225 ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಮಂಗಳವಾರ ದಿನವಿಡೀ ಮಳೆ ಸುರಿದಿದ್ದು ಸಂಜೆಯ ವೇಳೆಗೆ ಅದರ ತೀವ್ರತೆ ಹೆಚ್ಚಾಯಿತು. ಈಗಾಗಲೇ ವ್ಯಾಪ್ತಿಯಲ್ಲಿ ಜಲಾವೃತವಾಗುವ ಸಾಧ್ಯತೆಯಿರುವ ಪ್ರದೇಶಗಳಲ್ಲಿ ಪರಿಸ್ಥಿತಿಯನ್ನು ನಿಭಾಯಿಸಲು ಸಿದ್ಧರಾಗಿರಲು ಹಾಗೂ ತಾತ್ಕಾಲಿಕ ಆಶ್ರಯ ತಾಣಗಳಲ್ಲಿ ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಖಚಿತಪಡಿಸಿಕೊಳ್ಳಲು ಸೂಚನೆ ನೀಡಲಾಗಿದೆ. ಮತ್ತೊಂದೆಡೆ ಆಂಧ್ರ ಪ್ರದೇಶದ ಯಾನಂನ ದಕ್ಷಿಣ ಭಾಗದಲ್ಲಿರುವ ನರಸಾಪುರಂ ಬಳಿ ಈ ಚಂಡಮಾರುತ ಕರಾವಳಿಯನ್ನು ತಲುಪಿದೆ. ಇದು ಸಂಪೂರ್ಣವಾಗಿ ಕರಾವಳಿಯನ್ನು ದಾಟಲು ಇನ್ನೂ ಸ್ವಲ್ಪ ಸಮಯ ತೆಗೆದುಕೊಳ್ಳಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಶಾಲಾ-ಕಾಲೇಜುಗಳಿಗೆ ರಜೆ

ಆಂಧ್ರಪ್ರದೇಶದ 10 ಪ್ರಮುಖ ಜಿಲ್ಲೆಗಳಲ್ಲಿ ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಅನಕಾಪಲ್ಲಿ ಜಿಲ್ಲೆಯಲ್ಲಿ 3 ದಿನಗಳ ಕಾಲ ರಜೆ ವಿಸ್ತರಿಸಲಾಗಿದೆ. ಆಂಧ್ರಪ್ರದೇಶದಲ್ಲಿ ಅಪಾಯಕಾರಿ ಪ್ರದೇಶಗಳಿಂದ ಈಗಾಗಲೇ 50,000ಕ್ಕೂ ಹೆಚ್ಚು ಜನರನ್ನು ಸುರಕ್ಷಿತ ಆಶ್ರಯ ತಾಣಗಳಿಗೆ ರವಾನಿಸಲಾಗಿದ್ದು, ಒಟ್ಟು 4 ಲಕ್ಷ ಜನರನ್ನು ಸ್ಥಳಾಂತರಿಸುವ ಕಾರ್ಯಾಚರಣೆ ಬಿರುಸಿನಿಂದ ಸಾಗಿದೆ. ಮುನ್ನೆಚ್ಚರಿಕಾ ಕ್ರಮವಾಗಿ ಕರಾವಳಿ ಮಾರ್ಗದಲ್ಲಿ ಸಂಚರಿಸುವ ಕನಿಷ್ಠ 65 ರೈಲುಗಳು ಹಾಗೂ 21 ವಿಮಾನ ಸೇವೆಗಳನ್ನು ಸಂಪೂರ್ಣವಾಗಿ ರದ್ದುಗೊಳಿಸಲಾಗಿದೆ.

ಆಂಧ್ರಪ್ರದೇಶ ಮತ್ತು ನೆರೆಯ ಒಡಿಶಾಗಳಲ್ಲಿ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಮತ್ತು ಅಗ್ನಿಶಾಮಕ ದಳದ ನೂರಾರು ತಂಡಗಳು ಸಜ್ಜಾಗಿವೆ.

ಆಂಧ್ರದಲ್ಲಿ 2,100ಕ್ಕೂ ಚಂಡಮಾರುತ ಆಶ್ರಯ ಕೇಂದ್ರಗಳನ್ನು ತೆರೆಯಲಾಗಿದ್ದು, 1,000ಕ್ಕೂ ಹೆಚ್ಚು ವೈದ್ಯಕೀಯ ತಂಡಗಳನ್ನು ರಕ್ಷಣಾ ಕಾರ್ಯಾಚರಣೆಗೆ ನಿಯೋಜಿಸಲಾಗಿದೆ. ತಗ್ಗು ಪ್ರದೇಶಗಳ ಜನರನ್ನು ತಕ್ಷಣವೇ ತೆರವುಗೊಳಿಸಲು, ಪರಿಹಾರ ಸಾಮಗ್ರಿಗಳನ್ನು ಸಿದ್ಧವಾಗಿಟ್ಟುಕೊಳ್ಳಲು ಹಾಗೂ ವಿದ್ಯುತ್ ಪೂರೈಕೆಗೆ ಧಕ್ಕೆಯಾದರೆ ತಕ್ಷಣ ಸರಿಪಡಿಸಲು ಅಧಿಕಾರಿಗಳಿಗೆ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ನಿರ್ದೇಶನ ನೀಡಿದ್ದಾರೆ.

ರಾಜ್ಯದ 20 ಜಿಲ್ಲೆಗಳಲ್ಲಿ 2,131 ಆಶ್ರಯ ತಾಣಗಳನ್ನು ಗುರುತಿಸಲಾಗಿದ್ದು, 18 ಜಿಲ್ಲೆಗಳ ಸುಮಾರು 2.70 ಕೋಟಿ ಜನರಿಗೆ ಎಚ್ಚರಿಕೆ ರವಾನಿಸಲಾಗಿದೆ. 30,000ಕ್ಕೂ ಹೆಚ್ಚು ಮೀನುಗಾರಿಕಾ ದೋಣಿಗಳನ್ನು ಸುರಕ್ಷಿತವಾಗಿ ದಂಡೆಗೆ ಕಟ್ಟಲಾಗಿದೆ.

ಒಡಿಶಾದಲ್ಲಿ 30 ಸಾವಿರಕ್ಕೂ ಹೆಚ್ಚು ಜನರ ಸ್ಥಳಾಂತರ

ಚಂಡಮಾರುತದ ಪ್ರಭಾವ ಎದುರಿಸಲು ಒಡಿಶಾ ಸರ್ಕಾರ ವ್ಯಾಪಕ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದೆ. ರಾಜ್ಯದ ದಕ್ಷಿಣ ಭಾಗದ ಆರು ಜಿಲ್ಲೆಗಳಾದ ಗಂಜಾಂ, ಗಜಪತಿ, ರಾಯಗಡ, ಕೊರಾಪುಟ್, ಮಲ್ಕಾನ್‌ಗಿರಿ ಮತ್ತು ನಬರಂಗ್‌ಪುರ ಜಿಲ್ಲೆಗಳಲ್ಲಿ ತಗ್ಗು ಪ್ರದೇಶಗಳು ಹಾಗೂ ಭೂಕುಸಿತ ಸಂಭವಿಸುವ ಸಾಧ್ಯತೆಯಿರುವ ಸ್ಥಳಗಳಿಂದ 30 ಸಾವಿರಕ್ಕೂ ಹೆಚ್ಚು ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಒಡಿಶಾ ವಿಪತ್ತು ನಿರ್ವಹಣಾ ಸಚಿವ ಸುರೇಶ್ ಪೂಜಾರಿ ಅವರ ಪ್ರಕಾರ, ಮಲ್ಕಾನ್‌ಗಿರಿ ಜಿಲ್ಲೆಯಲ್ಲಿ ಚಂಡಮಾರುತದ ಪರಿಣಾಮ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ವಿಶೇಷ ನಿಗಾವಹಿಸಲಾಗಿದೆ. ರಾಜ್ಯದಲ್ಲಿ 2,037 ಚಂಡಮಾರುತ ಆಶ್ರಯ ಕೇಂದ್ರಗಳನ್ನು ಸಜ್ಜುಗೊಳಿಸಲಾಗಿದ್ದು, ಅಲ್ಲಿಗೆ ಸ್ಥಳಾಂತರಗೊಂಡವರಿಗೆ ಆಹಾರ, ಕುಡಿಯುವ ನೀರು ಮತ್ತು ಇತರ ಅಗತ್ಯ ಸೌಲಭ್ಯಗಳನ್ನು ಒದಗಿಸಲು ವ್ಯವಸ್ಥೆ ಮಾಡಲಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ 16 ಜಿಲ್ಲೆಗಳಲ್ಲಿ ಶಾಲೆಗಳು ಮತ್ತು ಅಂಗನವಾಡಿಗಳಿಗೆ ರಜೆ ಘೋಷಿಸಲಾಗಿದೆ. ಪರಿಹಾರ ತಂಡಗಳು ಪರಿಸ್ಥಿತಿಯನ್ನು ನಿರಂತರವಾಗಿ ಗಮನಿಸುತ್ತಿವೆ.



ಕರಾವಳಿಯನ್ನು ದಾಟುವ ಮೊದಲು, ಈ ಚಂಡಮಾರುತವು ಗಂಟೆಗೆ 3 ಕಿಲೋಮೀಟರ್ ವೇಗದಲ್ಲಿ ಚಲಿಸುತ್ತಿತ್ತು ಎಂದು ವರದಿಯಾಗಿದೆ.

ಗಾಳಿಯ ರಭಸಕ್ಕೆ ಆಂಧ್ರಪ್ರದೇಶದ ಕಾಕಿನಾಡ ಜಿಲ್ಲೆಯ ವಿವಿಧ ಕಡೆಗಳಲ್ಲಿ ಅನೇಕ ಮರಗಳು ಉರುಳಿಬಿದ್ದಿದ್ದು, ವಿದ್ಯುತ್ ಸಂಪರ್ಕ ಕಡಿತಗೊಂಡಿದೆ.

ವಿಶಾಖಪಟ್ಟಣದಲ್ಲಿ, ಭಾರಿ ಮಳೆ ಹಾಗೂ ಬಿರುಗಾಳಿಯ ಕಾರಣದಿಂದ ಮರಗಳು ಉರುಳಿಬಿದ್ದು, ಬೀಚ್ ರಸ್ತೆ ಮತ್ತು ಸೀತಮ್ಮಧಾರಾ ಪ್ರದೇಶದಲ್ಲಿ ಸಂಚಾರಕ್ಕೆ ಅಡಚಣೆ ಉಂಟಾಯಿತು. ರಾಜ್ಯದ ತಗ್ಗು ಪ್ರದೇಶಗಳು ಜಲಾವೃತಗೊಳ್ಳುವ ಸಾಧ್ಯತೆಯಿದೆ. ಈ ತೀವ್ರ ಚಂಡಮಾರುತದ ಪ್ರಭಾವದಿಂದಾಗಿ ಆಂಧ್ರದ ಶ್ರೀಕಾಕುಳಂ, ವಿಜಯನಗರಂ, ವಿಶಾಖಪಟ್ಟಣಂ, ಪೂರ್ವ ಗೋದಾವರಿ, ಪಶ್ಚಿಮ ಗೋದಾವರಿ ಮತ್ತು ಕೃಷ್ಣಾ ಜಿಲ್ಲೆಗಳ ವ್ಯಾಪ್ತಿಯಲ್ಲಿ ಭಾರಿ ಮಳೆಯಾಗುತ್ತಿದೆ. ಡಾ. ಬಿ.ಆರ್. ಅಂಬೇಡ್ಕರ್ ಕೋನಸೀಮಾ ಜಿಲ್ಲೆಯ ತಗ್ಗು ಪ್ರದೇಶಗಳೆಲ್ಲವೂ ಜಲಾವೃತಗೊಂಡಿವೆ.

ಆಂಧ್ರ ಕರಾವಳಿಗೆ ಅಪ್ಪಳಿಸಿದ ಅರ್ನಾಬ್ ಚಂಡಮಾರುತ: ಬಿರುಗಾಳಿ, ಮಳೆಗೆ ತತ್ತರಿಸಿದ ಜನತೆ

ವಿಮಾನ ಸಂಚಾರಕ್ಕೆ ಹೊಡೆತ

ಚಂಡಮಾರುತದ ಹಿನ್ನೆಲೆ ಆಂಧ್ರಪ್ರದೇಶದ ಪ್ರಮುಖ ವಿಮಾನ ನಿಲ್ದಾಣಗಳಲ್ಲಿ ವಿಮಾನ ಕಾರ್ಯಾಚರಣೆಗಳಿಗೆ ವ್ಯತ್ಯಯ ಉಂಟಾಗಿದೆ. ವಿಶಾಖಪಟ್ಟಣಂ ವಿಮಾನ ನಿಲ್ದಾಣದಲ್ಲಿ ಅಕ್ಟೋಬರ್ 27ರಂದು ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿತ್ತು. ಬಳಿಕ ವಿಜಯವಾಡ ಮತ್ತು ರಾಜಮಂಡ್ರಿ ವಿಮಾನ ನಿಲ್ದಾಣಗಳಲ್ಲಿಯೂ ವಿಮಾನ ಸೇವೆಗಳಿಗೆ ಅಡಚಣೆ ಉಂಟಾಯಿತು.

ಏರ್ ಇಂಡಿಯಾ ಅಕ್ಟೋಬರ್ 27ರಂದು ದೆಹಲಿ- ವಿಶಾಖಪಟ್ಟಣಂ ಮಾರ್ಗದ ಆರು ವಿಮಾನ ಸೇವೆಗಳನ್ನು ರದ್ದುಗೊಳಿಸಿದ್ದು, ಅ. 28ರಂದು ದೆಹಲಿ ವಿಜಯವಾಡ ಮಾರ್ಗದ ಸೇವೆಗಳ ಮೇಲೂ ಪರಿಣಾಮ ಬೀರಿದೆ. ಏರ್ ಇಂಡಿಯಾ ಎಕ್ಸ್‌ಪ್ರೆಸ್ 13 ವಿಮಾನಗಳನ್ನು ರದ್ದುಗೊಳಿಸಿದೆ. ಇಂಡಿಗೋ ವಿಶಾಖಪಟ್ಟಣಂ, ವಿಜಯವಾಡ ಮತ್ತು ರಾಜಮಂಡ್ರಿಯಲ್ಲಿ ಕಾರ್ಯಾಚರಣೆ ಸ್ಥಗಿತಗೊಳಿಸಿದರೆ, ಆಕಾಶ ಏರ್ ದೆಹಲಿ- ಭೋಗಾಪುರಂ ಸೇವೆಗಳನ್ನು ರದ್ದುಗೊಳಿಸಿದೆ. ಅಲಯನ್ಸ್ ಏರ್ ಯಾವುದೇ ರದ್ದತಿ ವರದಿ ಮಾಡಿಲ್ಲ ಎಂದು ಪ್ರಕಟಿತ ವರದಿ ತಿಳಿಸಿದೆ.

ಹವಾಮಾನ ಮುನ್ಸೂಚನೆ

ಗಂಟೆಗೆ 35 ರಿಂದ 45 ಕಿ.ಮೀ ವೇಗದಲ್ಲಿ ಬೀಸುತ್ತಿರುವ ಚಂಡಮಾರುತದ ಗಾಳಿ, ಮುಂದಿನ ಕೆಲವು ಗಂಟೆಗಳಲ್ಲಿ 55 ಕಿ.ಮೀ ವೇಗ ಪಡೆದುಕೊಳ್ಳುವ ಸಾಧ್ಯತೆಯಿದೆ. ಕರಾವಳಿ ಭಾಗದಲ್ಲಿ ಭಾರೀ ಗುಡುಗು ಸಹಿತ ಮಳೆಯಾಗಲಿದೆ. ಮುಂಜಾಗ್ರತಾ ಕ್ರಮವಾಗಿ ಚೆನ್ನೈ, ಎನ್ನೂರ್ ಮತ್ತು ತೂತುಕುಡಿ ಬಂದರುಗಳಲ್ಲಿ 2ನೇ ನಂಬರ್ ಅಪಾಯದ ಸೂಚನೆ ಹೊರಡಿಸಲಾಗಿದೆ. ಮೀನುಗಾರರು ಯಾವುದೇ ಕಾರಣಕ್ಕೂ ಸಮುದ್ರಕ್ಕೆ ಇಳಿಯಬಾರದು.

ಕಡಲಿಗೆ ಇಳಿದಿರುವ ಬೋಟ್‌ಗಳು ತಕ್ಷಣ ಸುರಕ್ಷಿತ ಪ್ರದೇಶಗಳಿಗೆ ಮರಳಲು ಸೂಚಿಸಲಾಗಿದೆ. ಸಾರ್ವಜನಿಕರು ಮತ್ತು ವಾಹನ ಸವಾರರು ಅಲೆಗಳ ಭೀಕರತೆಯನ್ನು ನೋಡಲು ಅಥವಾ ವಿಡಿಯೋ ಮಾಡಲು ಎನ್ನೂರ್ ಬೀಚ್ ರಸ್ತೆಗೆ ಹೋಗುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ನೀರಿನ ರಭಸ ,ರಸ್ತೆಯಲ್ಲಿರುವ ತೆರೆದ ಮ್ಯಾನ್‌ಹೋಲ್‌ಗಳ ಬಗ್ಗೆ ಎಚ್ಚರವಿರಲಿ ಎಂದು ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಭಾರತ ಇನ್ನು ದುರ್ಬಲವಲ್ಲ: ಫಿಲಿಪ್ಪಿನ್ಸ್‌ನಲ್ಲಿ ರಾಜನಾಥ್ ಸಿಂಗ್ ಮಾತು

ಭಾರತದ ಹೆಚ್ಚುತ್ತಿರುವ ಅಂತಾರಾಷ್ಟ್ರೀಯ ಸ್ಥಾನಮಾನ, ಆರ್ಥಿಕ ಪ್ರಗತಿ, ರಕ್ಷಣಾ ಸಾಮರ್ಥ್ಯಗಳು ಹಾಗೂ ಭ್ರಷ್ಟಾಚಾರವನ್ನು ತಡೆಗಟ್ಟಲು ಕೈಗೊಂಡಿರುವ ಪ್ರಯತ್ನ



• ಉದಯವಾಹಿನಿ, ದೆಹಲಿ

ಭಾರತದ ಜಾಗತಿಕ ಸ್ಥಾನಮಾನ ಮತ್ತು ರಕ್ಷಣಾ ಸನ್ನದ್ಧತೆಗಳು ವೃದ್ಧಿಸಿವೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಪ್ರತಿಪಾದಿಸಿದ್ದಾರೆ. ಭಾರತವು ಯಾರನ್ನೂ ಪ್ರಚೋದಿಸುವುದಿಲ್ಲ, ಆದರೆ ಪ್ರಚೋದನೆ ಎದುರಾದಾಗ ದೃಢವಾಗಿ ಪ್ರತಿಕ್ರಿಯಿಸುತ್ತದೆ ಎಂದು ಹೇಳಿದ್ದಾರೆ.

ಫಿಲಿಪ್ಪಿನ್ಸ್‌ನ ಸೆಬುವಿನಲ್ಲಿ 13ನೇ ಆಸಿಯಾನ್ ರಕ್ಷಣಾ ಸಚಿವರ ಸಭೆ-ಪ್ಲಸ್‌ನಲ್ಲಿ ಅನಿವಾಸಿ ಭಾರತೀಯರನ್ನುದ್ದೇಶಿಸಿ ಮಾತನಾಡಿದ ಅವರು, ಭಾರತದ ಹೆಚ್ಚುತ್ತಿರುವ ಅಂತಾರಾಷ್ಟ್ರೀಯ ಸ್ಥಾನಮಾನ, ಆರ್ಥಿಕ ಪ್ರಗತಿ, ರಕ್ಷಣಾ ಸಾಮರ್ಥ್ಯಗಳು ಹಾಗೂ ಭ್ರಷ್ಟಾಚಾರವನ್ನು ತಡೆಗಟ್ಟಲು ಕೈಗೊಂಡಿರುವ ಪ್ರಯತ್ನಗಳನ್ನು ತಿಳಿಸಿದರು.

ಭಾರತದ ಘನತೆ ಜಗತ್ತಿನಾದ್ಯಂತ ಬೆಳೆದಿದೆ. ಪ್ರಧಾನಿಗೆ 35 ದೇಶಗಳು ಅತ್ಯುನ್ನತ ನಾಗರಿಕ ಗೌರವಗಳನ್ನು ನೀಡಿ ಗೌರವಿಸಿದೆ. ಇಂದು, ಭಾರತ ಮಾತನಾಡುವಾಗ, ಜಗತ್ತು ಉತ್ಸಾಹದಿಂದ ಕೇಳುತ್ತದೆ ಎಂದರು. ಇಡೀ ಜಗತ್ತನ್ನೇ ತನ್ನ ಕುಟುಂಬವೆಂದು ಪರಿಗಣಿಸುವ ಏಕೈಕ ರಾಷ್ಟ್ರ ಭಾರತ. ನಾವು ವಸುಧೈವ ಕುಟುಂಬಕಂ ಎಂಬ ಕುರಿತು ಮಾತನಾಡುತ್ತೇವೆ. ದೇಶವು ಪ್ರಸ್ತುತ ಜಾಗತಿಕ ಮಟ್ಟದಲ್ಲಿ ಐದನೇ ಸ್ಥಾನದಲ್ಲಿದೆ ಎಂದು ಹೇಳಿದರಲ್ಲದೇ, ಮುಂದಿನ ದಿನಗಳಲ್ಲಿ ಅದು ಇನ್ನೂ ಮೇಲಕ್ಕೆ ಏರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಜಾಗತಿ ಆರ್ಥಿಕತೆಯಲ್ಲಿ ನಾವು ಐದನೇ ಸ್ಥಾನದಲ್ಲಿದ್ದೇವೆ. ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟು ಇಲ್ಲದಿದ್ದರೆ, ನಾವು ಈಗಾಗಲೇ ವಿಶ್ವದ ಅಗ್ರ ಮೂರು ಆರ್ಥಿಕತೆಗಳಲ್ಲಿ ಒಂದಾಗಿರುತ್ತಿದ್ದೆವು. ಆದರೂ ಇದು ಸಂಭವಿಸುವುದು ಖಚಿತ ಎಂದು ಭರವಸೆ ವ್ಯಕ್ತಪಡಿಸಿದರು. ಇಂದು ಪ್ರತಿಯೊಂದು ಮನೆಯಲ್ಲೂ ಜನ್ ಧನ್ ಬ್ಯಾಂಕ್ ಖಾತೆ ಇದೆ. ರೈತರಿಂದ ಹಿಡಿದು ಮಹಿಳೆಯರು ಮತ್ತು ಯುವಜನರವರೆಗೆ, ಫಲಾನುಭವಿಗಳ ಖಾತೆಗಳಿಗೆ ಹಣವನ್ನು ನೇರವಾಗಿ ವರ್ಗಾಯಿಸಲಾಗುತ್ತದೆ ಎಂದರು. ಸರ್ಕಾರವು ಭಯೋತ್ಪಾದನೆಯ ವಿರುದ್ಧ ಕಠಿಣ ಕ್ರಮ ಕೈಗೊಂಡಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬರುವ ಮೊದಲು, ಕಾಶ್ಮೀರದಲ್ಲಿ 228 ಭಯೋತ್ಪಾದಕರು ಸಕ್ರಿಯರಾಗಿದ್ದರು. ನಮ್ಮ ಸರ್ಕಾರವು ಎಷ್ಟು ಕಠಿಣ ಕ್ರಮ ಕೈಗೊಂಡಿದೆ ಎಂದರೆ, ಇಂದು ಕಾಶ್ಮೀರದಲ್ಲಿರುವ ಭಯೋತ್ಪಾದಕರ ಸಂಖ್ಯೆ ಕೇವಲ 40 ರಿಂದ 45ಕ್ಕೆ ಇಳಿದಿದೆ.

ಫಿಲಿಪ್ಪಿನ್ಸ್ ನಡುವಿನ ರಕ್ಷಣಾ ಸಹಕಾರ

ಆಪರೇಷನ್ ಸಿಂಧೂರ್‌ವನ್ನು ಉಲ್ಲೇಖಿಸಿದ ಅವರು, ಭಾರತ ಈಗ ದುರ್ಬಲವಾಗಿಲ್ಲ. ನಾವು ಯಾರನ್ನೂ ಪ್ರಚೋದಿಸುವುದಿಲ್ಲ, ಆದರೆ ಯಾರಾದರೂ ನಮ್ಮನ್ನು ಪ್ರಚೋದಿಸಿದರೆ, ನಾವು ಅವರನ್ನು ಸುಮ್ಮನೆ ಬಿಡುವುದಿಲ್ಲ. ಈ ಸಂದೇಶ ಈಗ ಸ್ಪಷ್ಟವಾಗಿದೆ. ನಮ್ಮ ರಕ್ಷಣಾ ಸನ್ನದ್ಧತೆ ಹೆಚ್ಚಾಗಿದೆ ಎಂದ ಅವರು ಇದು ದೇಶದ ಬಲವರ್ಧಿತ ರಕ್ಷಣಾ ಸಾಮರ್ಥ್ಯ ಎಂದು ತಿಳಿಸಿದರು. ಭಾರತ ಮತ್ತು ಫಿಲಿಪ್ಪಿನ್ಸ್ ನಡುವಿನ ರಕ್ಷಣಾ ಸಹಕಾರ ಕುರಿತು ಮಾತನಾಡಿದ ಅವರು, ಮನಿಲಾ ಭಾರತದಿಂದ ಬ್ರಹ್ಮೋಸ್ ಕ್ಷಿಪಣಿ ವ್ಯವಸ್ಥೆಯನ್ನು ಪಡೆದುಕೊಂಡಿದೆ. ಫಿಲಿಪ್ಪಿನ್ಸ್ ಕೂಡ ನಮ್ಮಿಂದ ಬ್ರಹ್ಮೋಸ್ ಕ್ಷಿಪಣಿ ವ್ಯವಸ್ಥೆಯನ್ನು ಪಡೆದುಕೊಂಡಿದೆ. ಭಾರತದಿಂದ ಭ್ರಷ್ಟಾಚಾರವು ಸಂಪೂರ್ಣವಾಗಿ ನಿರ್ಮೂಲನೆಯಾಗಿದೆ ಎಂದು ನಾನು ಹೇಳಿಕೊಳ್ಳುವುದಿಲ್ಲ. ಆದರೆ, ಅದನ್ನು ಗಣನೀಯವಾಗಿ ತಗ್ಗಿಸಲು ಸಂಘಟಿತ ಪ್ರಯತ್ನಗಳನ್ನು ಮಾಡಲಾಗಿದೆ.

ಈ ದಿನದ ದರ ಪೆಟ್ರೋಲ್: 111.68 ₹/L ಡೀಸೆಲ್ : 99.56 ₹/L ಬಂಗಾರ: ₹14,395/Gram24ct ₹13,195/Gram22ct ಬೆಳ್ಳಿ: ₹220.00/Gram

ಯುವತಿಯ ವಿಡಿಯೋ ಮಾಡಿದ ಆರೋಪ : ಮೆಟ್ರೋ ನಿಲ್ದಾಣದ ಒಳಗೆ ಯುವತಿಯರಿಗೆ ಸೇಫ್ಟಿ ಇಲ್ವಾ?

• ಉದಯವಾಹಿನಿ, ಬೆಂಗಳೂರು

ಯುವತಿಯ ವಿಡಿಯೋ ಮಾಡಿದ ಆರೋಪ ಕೇಳಿ ಬಂದಿದ್ದು, ಮೆಟ್ರೋ ನಿಲ್ದಾಣದ ಒಳಗೆಯೇ ಯುವತಿಯರಿಗೆ ಸೇಫ್ಟಿ ಇಲ್ವಾ ಎಂಬ ಪ್ರಶ್ನೆ ಮೂಡಿದೆ. ವೈಟ್‌ಫೀಲ್ಡ್‌ನ ಕಾಡುಗೋಡಿ ಮೆಟ್ರೋ ನಿಲ್ದಾಣದಲ್ಲಿ ಈ ಘಟನೆ ನಡೆದಿದೆ. ಯುವತಿಯ ವಿಡಿಯೋ ಮಾಡಿದ ಆರೋಪದ ಮೇಲೆ ವ್ಯಕ್ತಿಯೊಬ್ಬನನ್ನ ಹಿಡಿದು ಆಕೆ ತರಾಟೆಗೆ ತೆಗೆದುಕೊಂಡಿದ್ದಳು. ಬಳಿಕ ಆತ ಮೊಬೈಲ್ ಕಿತ್ತುಕೊಂಡು ನಿಲ್ದಾಣದಿಂದ ಕಾಲ್ಕಿತ್ತಿದ್ದಾನೆ. ಮೆಟ್ರೋದಲ್ಲಿ ಸಂಚಾರ ಮಾಡ್ತಿದ್ದ ವೇಳೆ ಯುವತಿಯ ಹಿಂದಿನಿಂದ ವಿಡಿಯೋ ಮಾಡಿದ್ದ ಕಾಮುಕ. ಕೂಡಲೇ ಮೊಬೈಲ್ ಕಸಿದುಕೊಂಡು

ಉದಯವಾಹಿನಿ ಚಿತ್ರ

ತರಾಟೆಗೆ ತೆಗೆದುಕೊಂಡು, ಬಿಎಂಆರ್‌ಸಿಎಲ್ ಸೆಕ್ಯೂರಿಟಿಗೆ ಮಾಹಿತಿ ನೀಡಿದ್ರು. ಕೊನೆಗೆ ಯುವತಿಯ ಬಳಿ ಕ್ಷಮೆ ಕೇಳಿ ಎಸ್ಕೇಪ್ ಆಗಿದ್ದಾನೆ. ಯುವತಿ ದೂರಿನನ್ವಯ ಸಿಸಿಟಿವಿ ಪರಿಶೀಲಿಸಿ ಘಟನೆ ಸತ್ಯಾಸತ್ಯತೆ ಪತ್ತೆಗೆ ಬಿಎಂಆರ್ಸಿಎಲ್ ಅಧಿಕಾರಿಗಳು ಮುಂದಾಗಿದ್ದಾರೆ.ಘಟನೆ ಬಗ್ಗೆ ವಿಡಿಯೋ ಮೂಲಕ ಯುವತಿ ಬೇಸರ ವ್ಯಕ್ತಪಡಿಸಿದ್ದು, ಘಟನೆ ಸಂಬಂಧ ಮೆಟ್ರೋ ಅಧಿಕಾರಿಗಳಿಗೆ ದೂರು ಸಲ್ಲಿಸಿದ್ದಾರೆ.

ನಿಜಕ್ಕೂ ನಡುಕ ಉಂಟಾಗ್ತಿದೆ. ಸಂಜೆ 4:30ರ ಸಮಯಕ್ಕೆ ಮೆಟ್ರೋದಲ್ಲಿ ವ್ಯಕ್ತಿಯೊಬ್ಬ ವಿಡಿಯೋ ಮಾಡುತ್ತಿದ್ದ. ನಾನು ಫುಲ್ ಕವರ್ ಆಗಿರುವ ಬಟ್ಟೆಯನ್ನ ಧರಿಸಿದ್ದೇನೆ. ವಿಡಿಯೋ ಚಿತ್ರೀಕರಿಸುತ್ತಿದ್ದಾಗಲೇ ರೆಡ್ ಹ್ಯಾಂಡ್ ಆಗಿ ಅವನನ್ನ ಹಿಡಿದಿದ್ದೇನೆ. ಆತನ ಮೊಬೈಲ್‌ನನ್ನ ಕಿತತುಕೊಂಡೆ, ಬಳಿಕ ಆತ ಓಡಲು ಶುರು ಮಾಡಿದ. ಆ ಮೊಬೈಲ್‌ನನ್ನ ಸಕ್ಯೂರಿಟಿಗೆ ಕೊಟ್ಟೆ, ಮತ್ತೆ ಆ ವ್ಯಕ್ತಿ ಮೊಬೈಲ್ ಕಿತ್ತುಕೊಂಡು ಅಲ್ಲಿಂದ ಓಡಿ ಹೋಗಿದ್ದಾನೆ. ಆತನನ್ನ ಹುಡುಕಬೇಕು, ಈ ಬಗ್ಗೆ ನಾನು ಮೆಟ್ರೋ ಸ್ಟೇಷನ್‌ನಲ್ಲಿ ದೂರು ನೀಡಿದ್ದೇನೆ.

ಆನ್‌ಲೈನ್ ಬೆಟ್ಟಿಂಗ್ ಹಗರಣ ವೀರೇಂದ್ರ ಪಪ್ಪಿ ಇತರರಿಗೆ ಸೇರಿದ 23.35 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು

• ಉದಯವಾಹಿನಿ, ಬೆಂಗಳೂರು

ಆನ್‌ಲೈನ್ ಬೆಟ್ಟಿಂಗ್ ಹಗರಣ ಸಂಬಂಧ ಇಡಿ ಅಧಿಕಾರಿಗಳು ಶಾಸಕ ವೀರೇಂದ್ರ ಪಪ್ಪಿ ಮತ್ತು ಇತರರಿಗೆ ಸೇರಿದ 23.35 ಕೋಟಿ ರೂ. ಮೌಲ್ಯದ ಆಸ್ತಿ ಮುಟ್ಟುಗೋಲು ಹಾಕಿಕೊಂಡಿದ್ದಾರೆ.ಗುಲ್ಷನ್ ಖಟ್ಟರ್, ನೇಹಾ ಟಂಡನ್‌ಗೆ ಸೇರಿದ ಒಟ್ಟು 23.35 ಕೋಟಿ ರೂ. ಮೌಲ್ಯದ ಚರ ಮತ್ತು ಸ್ಥಿರಾಸ್ತಿ ತಾತ್ಕಾಲಿಕ ಜಪ್ತಿ ಮಾಡಿದ್ದು, 13.76 ಕೋಟಿ ರೂ. ಮೌಲ್ಯದ ಚರಾಸ್ತಿ, 9.58 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿ ವಶಕ್ಕೆ ಪಡೆಯಲಾಗಿದೆ. ಕಿಂಗ್ 567 ಸೇರಿದಂತೆ ವಿವಿಧ ಅಕ್ರಮ ಬೆಟ್ಟಿಂಗ್ ಆಪ್‌ಗಳ ನಿರ್ವಹಣೆ ಆರೋಪ ಕೇಳಿಬಂದಿದ್ದು, ಆನ್‌ಲೈನ್ ಬೆಟ್ಟಿಂಗ್ ಮೂಲಕ ಆಟಗಾರರಿಗೆ ವಂಚಿಸಿ, ಹಣ ಸಂಗ್ರಹಿಸಲಾಗಿದೆ. ನಕಲಿ ಕಂಪನಿಗಳು, ಮ್ಯೂಲ್ ಬ್ಯಾಂಕ್ ಖಾತೆಗಳ ಮೂಲಕ ಹಣ ವರ್ಗಾವಣೆ ಮಾಡಲಾಗಿದ್ದು, ಹವಾಲಾ ಮತ್ತು ವಿದೇಶಿ ಹಣ ವರ್ಗಾವಣೆ ಮಾರ್ಗಗಳ ಬಳಕೆ ಮಾಡಿರೋದು ಗೊತ್ತಾಗಿದೆ. 2,300 ಕೋಟಿ ರೂ.ಗೂ ಅಧಿಕ ಅಕ್ರಮ ಹಣ ವರ್ಗಾವಣೆ ನಡೆದಿರುವುದಾಗಿ ಇಡಿ ಅಧಿಕಾರಿಗಳಿಗೆ ಶಂಕೆ ವ್ಯಕ್ತವಾಗಿದ್ದು, ತನಿಖೆ ಮುಂದುವರೆದಿದೆ.ಈ ಹಿಂದೆ ದೇಶದ ವಿವಿಧ ರಾಜ್ಯಗಳಲ್ಲಿ 60ಕ್ಕೂ ಹೆಚ್ಚು ಸ್ಥಳಗಳಲ್ಲಿ ಇಡಿ ಅಧಿಕಾರಿಗಳು ದಾಳಿ ನಡೆಸಿದ್ರು. ಪ್ರಮುಖ ಆರೋಪಿ ಕೆ.ಸಿ.ವೀರೇಂದ್ರ ಅವರನ್ನು ಪಿಎಂಎಲ್‌ಎ ಕಾಯ್ದೆಯಡಿ ಬಂಧಿಸಲಾಗಿತ್ತು. ಪ್ರಕರಣದಲ್ಲಿ ಈವರೆಗೆ 343 ಕೋಟಿ ರೂ. ಮೌಲ್ಯದ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಸಿನಿಮಾ ಟಿಕೆಟ್ ಮೇಲೆ ಶೇ.2ರಷ್ಟು ಸೆಸ್: ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಕಲ್ಯಾಣ ಕಾಯ್ದೆ, 2024ಕ್ಕೆ 2026ರಲ್ಲಿ ಮಾಡಿರುವ ಕೆಲವು ತಿದ್ದುಪಡಿ ಮತ್ತು ಅದರಡಿ ವಿಧಿಸಿರುವ ಸುಂಕದ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯ ಸಂಬಂಧ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ. ಇಂಡಿಯನ್ ಬ್ರಾಡ್‌ಕಾಸ್ಟಿಂಗ್ ಅಂಡ್ ಡಿಜಿಟಲ್ ಫೌಂಡೇಶನ್, ಜಿಯೋಸ್ಟಾರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಜೀ ಎಂಟರ್‌ಟೈನ್‌ಮೆಂಟ್ ಎಂಟರ್‌ಪ್ರೈಸಸ್ ಲಿಮಿಟೆಡ್, ಜೀ ಕನ್ನಡ ಸೇರಿದಂತೆ ಹಲವು ಪ್ರಸಾರ ಸಂಸ್ಥೆಗಳು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಚ್.ಟಿ.ನರೇಂದ್ರ ಪ್ರಸಾದ್ ಅವರಿದ್ದ ನ್ಯಾಯಪೀಠ, ನೋಟಿಸ್ ಜಾರಿ ಮಾಡಿದೆ. ಪ್ರಕರಣದ ಕುರಿತು ಪ್ರತಿಕ್ರಿಯೆ ಕೇಳಿದೆ.

ಸಿನಿಮಾ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಕಲ್ಯಾಣ ಯೋಜನೆಗಳಿಗೆ ಅನುದಾನ ಒದಗಿಸುವ ಉದ್ದೇಶದಿಂದ ಚಿತ್ರಮಂದಿರ ಹಾಗೂ ಮಲ್ಟಿಪ್ಲೆಕ್ಸ್‌ಗಳ ಸಿನಿಮಾ ಟಿಕೆಟ್ ದರದ ಮೇಲೆ ಶೇ. 2ರಷ್ಟು ಸೆಸ್ ವಿಧಿಸುವ ಸಂಬಂಧದ ಕಾಯ್ದೆಯ ಹಲವು ಸೆಕ್ಷನ್‌ಗಳ ಅನ್ವಯವನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆ ನಡೆಸಿದ ಹೈಕೋರ್ಟ್, ರಾಜ್ಯ ಸರ್ಕಾರ ಹಾಗೂ ಕಾರ್ಮಿಕ ಇಲಾಖೆಗೆ ನೋಟಿಸ್ ಜಾರಿಗೊಳಿಸಿದೆ.ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಕಲ್ಯಾಣ ಕಾಯ್ದೆ, 2024ಕ್ಕೆ 2026ರಲ್ಲಿ ತಿದ್ದುಪಡಿ ಮಾಡುವ ಮೂಲಕ 2026ರ ಸೆಪ್ಟೆಂಬರ್ 10ರಂದು ಕಾರ್ಮಿಕ ಇಲಾಖೆ ಅಧಿಸೂಚನೆ ಹೊರಡಿಸಿತ್ತು.

ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ, ಅನುದಾನದಲ್ಲಿ ತಾರತಮ್ಯ ಇಲ್ಲ

ಬೇರೆ ನಗರಗಳಿಗೆ ಹೋಲಿಸಿದರೆ ಬೆಂಗಳೂರಿನ ಜನಸಂಖ್ಯಾ ದರ ಮತ್ತು ವಾಹನಗಳು ಹೆಚ್ಚಿವೆ. ಆದರೆ ರಸ್ತೆಗಳ ಸಾಮರ್ಥ್ಯ ಬೇರೆ ನಗರಗಳಿಗಿಂತ ಕಡಿಮೆಯಿದೆ.

• ಉದಯವಾಹಿನಿ, ಬೆಂಗಳೂರು

1 ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಬದ್ಧ
2 ಜನಸಂಖ್ಯಾ ದರ ಮತ್ತು ವಾಹನಗಳ ಹೆಚ್ಚಳ
3 ರಸ್ತೆ ನಿರ್ಮಾಣಕ್ಕೆ ಆದ್ಯತೆ ನೀಡಿದ್ದೇವೆ.

ಬೆಂಗಳೂರು ನಗರದ ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸಲು 40 ಕಿಲೋಮೀಟರ್? ಉದ್ದದ ದ್ವಿಪಥ ಸುರಂಗ ಮಾರ್ಗ, 120 ಕಿಲೋಮೀಟರ್ ಉದ್ದದ ಎತ್ತರಿಸಿದ ಕಾರಿಡಾರ್, 1500 ಕಿಲೋಮೀಟರ್ ಆರ್ಟಿಲರಿ ಮತ್ತು ಸಬ್ ಆರ್ಟಿಲರಿ ರಸ್ತೆಗಳ ಉನ್ನತೀಕರಣ ಕಾರ್ಯ ಕೈಗೊಳ್ಳಲಾಗಿದ್ದು, ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಅವರು ಅಧಿಕೃತ ನಿವಾಸ ಕೃಷ್ಣಾದಲ್ಲಿ ಬೆಂಗಳೂರು ನಗರ ವ್ಯಾಪ್ತಿಯ ವಿಧಾನಸಭಾ ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರೊಂದಿಗೆ ಸಭೆ ನಡೆಸಿದರು. ದೇಶದ ಬೇರೆ ಪ್ರಮುಖ ನಗರಗಳಿಗೆ ಹೋಲಿಸಿದರೆ ಬೆಂಗಳೂರಿನ ಜನಸಂಖ್ಯಾ ದರ ಮತ್ತು ವಾಹನಗಳ ಹೆಚ್ಚಳ ದರ ಹೆಚ್ಚಿದೆ. ಆದರೆ ರಸ್ತೆಗಳ ಸಾಮರ್ಥ್ಯ ಬೇರೆ ನಗರಗಳಿಗಿಂತ ಕಡಿಮೆಯಿದೆ. ಈ ಹಿನ್ನೆಲೆಯಲ್ಲಿ ರಸ್ತೆ ನಿರ್ಮಾಣಕ್ಕೆ ಆದ್ಯತೆ ನೀಡಿದ್ದೇವೆ ಎಂದು ಹೇಳಿದ್ದಾರೆ. ಸಂಚಾರ ವ್ಯವಸ್ಥೆ ಸುಗಮಗೊಳಿಸಲು 40 ಕಿಮೀ ದ್ವಿಪಥ ಸುರಂಗ ನಿರ್ಮಾಣ, ಹೆಬ್ಬಾಳದಲ್ಲಿ 2ಕಿಮೀ ಅಲ್ಪದೂರದ ಸುರಂಗ ಕಾಮಗಾರಿ ಕೈಗೊಂಡಿದ್ದೇವೆ. ಇದರಲ್ಲಿ 16 .5 ಕಿಮೀ ಉತ್ತರ-ದಕ್ಷಿಣ ಕಾರಿಡಾರ್ ನಿರ್ಮಾಣಕ್ಕೆ 17,780 ಕೋಟಿ ರೂ. ವೆಚ್ಚವಾಗಲಿದ್ದು, ಸರ್ಕಾರ ಇದರಲ್ಲಿ 7ಸಾವಿರ ಕೋಟಿ ರೂ. ಬಂಡವಾಳ ತೊಡಗಿಸಲಿದೆ. 21 ಕಿ.ಮೀ ಉದ್ದದ ಪೂರ್ವ - ಪಶ್ಚಿಮ ಕಾರಿಡಾರ್‌ನಲ್ಲಿ ಎರಡು ಆಗಮನ ದ್ವಾರ ಇರಲಿವೆ

ಉದಯವಾಹಿನಿ ಚಿತ್ರ

ಎಂದು ತಿಳಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ಮಾನದಂಡದ ಪ್ರಕಾರ 23,165 ಕೋಟಿ ಬಂಡವಾಳ ವೆಚ್ಚದಲ್ಲಿ 120 ಕಿಮೀ ಎತ್ತರಿಸಿದ ಕಾರಿಡಾರ್ ನಿರ್ಮಾಣ ಯೋಜನೆ ರೂಪಿಸಲಾಗಿದೆ. ಇದರಲ್ಲಿ ನಾಲ್ಕು ಕೆಟಗರಿ ಮಾಡಲಾಗಿದ್ದು, 10 ಕಿಮೀ ಕಡಿಮೆ ಇರುವ ಕಾರಿಡಾರ್‌ಗಳಲ್ಲಿ ಟೋಲ್ ಇರುವುದಿಲ್ಲ ಎಂದು ಹೇಳಿದ್ದಾರೆ.

ಬೆಂಗಳೂರು ನಗರದಲ್ಲಿ ಸುಮಾರು 500 ಕಿಮೀ ಹೊಸ ರಸ್ತೆ ಸಂಪರ್ಕ ಕೈಗೊಳ್ಳಲಾಗುತ್ತಿದ್ದು, ಇದರಲ್ಲಿ ಚಾನಲ್ ಬದಿಯಲ್ಲಿ 300ಕಿಮೀ ಬಫರ್ ರಸ್ತೆ ನಿರ್ಮಾಣ, 68 ಕಿಮೀ ಬ್ಯುಸಿನೆಸ್ ಕಾರಿಡಾರ್ ನಿರ್ಮಾಣ ಸೇರಿದೆ. 17 ಕಿಮೀ ಹೊರವರ್ತುಲ ರಸ್ತೆಯ ಮರು ಅಭಿವೃದ್ಧಿ, 1500 ಕಿಮೀ ಆರ್ಟಿಲರಿ ಮತ್ತು ಸಬ್ ಆರ್ಟಿಲರಿ ರಸ್ತೆಗಳ ಉನ್ನತೀಕರಣ ಕಾರ್ಯವನ್ನು ಕೈಗೊಳ್ಳಲಾಗಿದೆ. ಸಧ್ಯದಲ್ಲಿಯೇ ಹೊಸದಾಗಿ ನಗರದ ಹೊರ ವಲಯದಲ್ಲಿ 18 ಕಿಮೀ ವೈಟ್ ಟಾಪಿಂಗ್ ಕಾಮಗಾರಿ ಪ್ರಾರಂಭಿಸಲಾಗುವುದು.

ರಾಜ್ಯ ಸರ್ಕಾರ ಹೊರ ವರ್ತುಲ ರಸ್ತೆ ವ್ಯಾಪ್ತಿಯಲ್ಲಿ 37 ಕಿಮೀ ಡಬಲ್ ಡೆಕ್ಕರ್ ರಸ್ತೆ ನಿರ್ಮಾಣ ಪ್ರಸ್ತಾವನೆ ಸಲ್ಲಿಸಿದ್ದು, ಕೇಂದ್ರ ಸರ್ಕಾರ ಕೇವಲ 11ಕಿಮೀ ರಸ್ತೆ ನಿರ್ಮಾಣಕ್ಕೆ ಅನುಮತಿ ನೀಡಿದೆ ಸಿಎಂ ತಿಳಿಸಿದ್ದಾರೆ.

ಮುಂದಿನ 10 ವರ್ಷಗಳ ಯೋಜನೆ: ಬೆಂಗಳೂರು ನಗರ ನಿರ್ಮಾಣವಾಗಿ 2027ರಲ್ಲಿ 500 ವರ್ಷಗಳಾಗಲಿರುವ ಹಿನ್ನೆಲೆಯಲ್ಲಿ ಮುಂದಿನ 10 ವರ್ಷಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಯೋಜನೆಗಳನ್ನು ರೂಪಿಸಲಾಗಿದೆ. ಹೊಸ ಯೋಜನೆಗಳಿಗೆ ಸುಮಾರು 1 ಲಕ್ಷ ಕೋಟಿ ಬೇಕು. ಬೆಂಗಳೂರು ನಗರದ ಅಭಿವೃದ್ಧಿಗೆ ಆದ್ಯತೆ ನೀಡುವುದು ನಮ್ಮ ಉದ್ದೇಶ. ಯೋಜನೆಗಳಿಗೆ ಅನುದಾನ ಒದಗಿಸಲಾಗುವುದು ಎಂದು ಹೇಳಿದ್ದಾರೆ.

ಅನುದಾನ ಹಂಚಿಕೆಯಲ್ಲಿ ತಾರತಮ್ಯವಿಲ್ಲ

ಅತಿ ವೇಗವಾಗಿ ಬೆಳೆಯುತ್ತಿರುವ ಬೆಂಗಳೂರು ನಗರದ ಮೂಲಸೌಕರ್ಯಗಳನ್ನು ಮೇಲ್ದರ್ಜೆಗೇರಿಸಲು ನಮ್ಮ ಸರ್ಕಾರ ಬದ್ಧವಾಗಿದ್ದು, ಇದಕ್ಕಾಗಿ ಯಾವುದೇ ತಾರತಮ್ಯವಿಲ್ಲದೆ ಎಲ್ಲಾ ಶಾಸಕರ ಕ್ಷೇತ್ರಗಳಿಗೆ ಅಗತ್ಯ ಅನುದಾನವನ್ನು ಒದಗಿಸಲಾಗಿದೆ ಎಂದು ಮುಖ್ಯಮಂತ್ರಿ ಅವರು ಹೇಳಿದ್ದಾರೆ.

ಬೆಂಗಳೂರಿನ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಎಲ್ಲಾ ಶಾಸಕರ ಕ್ಷೇತ್ರಗಳಿಗೆ ಸಾಕಷ್ಟು ಅನುದಾನವನ್ನು ಒದಗಿಸಲಾಗಿದೆ. ಶಾಸಕರು ತಮ್ಮ ಕ್ಷೇತ್ರಗಳಲ್ಲಿ ತುರ್ತಾಗಿ ಕೈಗೊಳ್ಳಬೇಕಾಗಿರುವ ಕಾಮಗಾರಿಗಳ ಪ್ರಸ್ತಾವನೆ ಸಲ್ಲಿಸಿದರೆ ಅನುದಾನ ಬಿಡುಗಡೆಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಬಿಡಬ್ಲ್ಯುಎಸ್ಎಸ್ ಬಿ ಮೂಲಕ ನಗರದ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಬಂಡವಾಳ ಹೂಡಿಕೆ ಕಾರ್ಯ ಕೈಗೊಂಡಿದ್ದೇವೆ ಎಂದು ಸಿಎಂ ತಿಳಿಸಿದ್ದಾರೆ.

ಅಕ್ರಮವಾಗಿ 10 ಕೋಟಿ ನಗದು ವ್ಯವಹಾರ ನಡೆಸಿರುವ ಆರೋಪ:

ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಅಕ್ರಮವಾಗಿ 10 ಕೋಟಿ ರೂಪಾಯಿ ನಗದು ವ್ಯವಹಾರ ನಡೆಸಿದ್ದಾರೆ ಎಂದು ಆರೋಪಿಸಿ ನಟ ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ ದರ್ಶನ್ ಮತ್ತು ನಟ ಧನ್ವೀರ್ ಗೌಡ ವಿರುದ್ಧ ಜಾರಿ ನಿರ್ದೇಶನಾಲಯ ಹಾಗೂ ಆದಾಯ ತೆರಿಗೆ ಇಲಾಖೆಗೆ ದೂರು ಸಲ್ಲಿಕೆಯಾಗಿದೆ.ವಕೀಲ ಪ್ರಶಾಂತ್ ಮೆಥಲ್ ಎಂಬುವರು ಐ.ಟಿ ಮತ್ತು ಇ.ಡಿಗೆ ದೂರು ಸಲ್ಲಿಸಿದ್ದು, ವಿಜಯಲಕ್ಷ್ಮಿ ದರ್ಶನ್ ಮತ್ತು ಧನ್ವೀರ್ ನಡುವೆ ಕಾನೂನು ಬಾಹಿರವಾಗಿ ಕೋಟ್ಯಂತರ ರುಪಾಯಿ ವಹಿವಾಟು ನಡೆದಿದೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

ವಿಜಯಲಕ್ಷ್ಮಿ ಹಾಗೂ ಧನ್ವೀರ್ ನಡುವೆ ನಡೆದ ಗಲಾಟೆಗೆ 10 ಕೋಟಿ ರೂಪಾಯಿ ವ್ಯವಹಾರ ಕಾರಣವಾಗಿದೆ ಎಂಬ ಆರೋಪ ಕೇಳಿಬಂದಿದೆ. ದರ್ಶನ್ ಅವರ ಕಾನೂನು ಹೋರಾಟಕ್ಕಾಗಿ ಧನ್ವೀರ್ ಮತ್ತು ವಿಜಯಲಕ್ಷ್ಮಿ ಅವರ ನಡುವೆ 10 ಕೋಟಿ ರೂ. ವರ್ಗಾವಣೆ ನಡೆದಿದೆ ಎನ್ನಲಾಗಿದೆ. ಈ ಅಕ್ರಮ ವ್ಯವಹಾರದ ಸಂಪೂರ್ಣ ತನಿಖೆ ನಡೆಸುವಂತೆ ದೂರಿನಲ್ಲಿ ಮನವಿ ಮಾಡಲಾಗಿದೆ. ನಿಯಮಗಳ ಪ್ರಕಾರ 2 ಲಕ್ಷ ರೂಪಾಯಿಗಿಂತ ಹೆಚ್ಚಿನ ಮೊತ್ತವನ್ನು ನಗದು ರೂಪದಲ್ಲಿ ವ್ಯವಹಾರ ಮಾಡುವಂತಿಲ್ಲ. ಆದರೆ, ಈ ಪ್ರಕರಣದಲ್ಲಿ ಕಾನೂನು ಮೀರಿ ಬರೋಬ್ಬರಿ 10 ಕೋಟಿ ರೂಪಾಯಿ ನಗದು ರೂಪದಲ್ಲಿ ವ್ಯವಹಾರ ನಡೆಸಲಾಗಿದೆ. ಈ ಭಾರಿ ಹಣದ ಮೂಲ ಯಾವುದು ಮತ್ತು ಈ ಅಕ್ರಮ ವಹಿವಾಟಿನ ಹಿಂದಿನ ಉದ್ದೇಶವೇನು ಎಂಬುದರ ಬಗ್ಗೆ ಸೂಕ್ತ ತನಿಖೆ ನಡೆಸಬೇಕೆಂದು ದೂರುದಾರರು ಒತ್ತಾಯಿಸಿದ್ದಾರೆ.

ಮಂದಗತಿಯ ಸ್ಟಿಂಗ್ ತನಿಖೆಗೆ ತೀವ್ರ ಅಸಮಾಧಾನ ಸಿಸಿಬಿ ಅಧಿಕಾರಿಗಳಿಗೆ ಸಿದ್ದರಾಮಯ್ಯ ತರಾಟೆ

• ಉದಯವಾಹಿನಿ, ಬೆಂಗಳೂರು

ತಮ್ಮ ವಿರುದ್ಧ ನಡೆದಿದೆ ಎನ್ನಲಾದ ನಕಲಿ ಸ್ಟಿಂಗ್ ಕಾರ್ಯಾಚರಣೆ ಪ್ರಕರಣದತನಿಖೆ ತೃಪ್ತಿಕರವಾಗಿ ಸಾಗದ ಹಿನ್ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಅಪರಾಧ ವಿಭಾಗದ ಅಧಿಕಾರಿಗಳ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪ್ರಕರಣ ಸಂಬಂಧ ಎಫ್‌ಐಆರ್ ದಾಖಲಾದ ದಿನದಿಂದಲೂ ಸಿದ್ದರಾಮಯ್ಯ ಅವರು ತನಿಖೆಯ ದಿನಂಪ್ರತಿ ಬೆಳವಣಿಗೆಗಳ ಮಾಹಿತಿ ಪಡೆಯುತ್ತಿದ್ದಾರೆ. ಎಂದಿನಂತೆ ನಿನ್ನೆ ಕೂಡ ಪ್ರಕರಣದ ಪ್ರಗತಿ ವರದಿ ನೀಡಲು ತಮ್ಮನ್ನು ಭೇಟಿ ಮಾಡಿದ ಸಿಸಿಬಿ ಅಧಿಕಾರಿಗಳ ತಂಡವನ್ನು ಅವರು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

ತನಿಖೆಯ ಮಂದಗತಿಯ ಬಗ್ಗೆ ಆಕ್ರೋಶ ಹೊರಹಾಕಿದ ಸಿದ್ದರಾಮಯ್ಯ, ''ಏನ್ ತನಿಖೆ ಮಾಡ್ತಿದ್ದೀರಾ ನೀವು ಬೆಳಗ್ಗೆ ಯಾರನ್ನೋ ಬಂಧಿಸ್ತೀರಾ, ಸಂಜೆ ವೇಳೆಗೆ ಅವರಿಗೆ ಜಾಮೀನು ಸಿಗುತ್ತೆ.

ಉದಯವಾಹಿನಿ ಚಿತ್ರ

ಅದ್ಯಾವ ರೀತಿ ನೀವು ತನಿಖೆ ನಡೆಸ್ತಾ ಇದ್ದೀರಾ? ಎಂದು ಪ್ರಶ್ನಿಸಿ ಅಸಮಾಧಾನ ಹೊರಹಾಕಿದ್ದಾರೆ ಎಂಬ ವಿಚಾರ ಮೂಲಗಳಿಂದ ತಿಳಿದು ಬಂದಿದೆ.

ಪ್ರಕರಣ ನಡೆದು ಇಷ್ಟು ದಿನಗಳಾದರೂ ಇದರ ಹಿಂದಿರುವ ಪ್ರಮುಖ ಕಿಂಗ್‌ಪಿನ್‌ಗಳನ್ನು ಇದುವರೆಗೂ ಅರೆಸ್ಟ್ ಮಾಡಿಲ್ಲ. ಇನ್ನು ನೀವು ಏನು ತಾನೇ ಮಾಡ್ತೀರಾ? ತನಿಖೆ ಸರಿಯಾದ ದಿಕ್ಕಿನಲ್ಲಿ ನಡೆಯಬೇಕು. ಯಾವುದೇ ಲೋಪವಿಲ್ಲದೆ ಆದಷ್ಟು ಬೇಗ ಪ್ರಕರಣದ ಪ್ರಮುಖ ಆರೋಪಿಯನ್ನು ಪತ್ತೆಹಚ್ಚಿ ಕಠಿಣ ಕ್ರಮಕೈಗೊಳ್ಳಿ'' ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಪಣತ್ತೂರು ಟ್ರೀಪಾರ್ಕ್ ಮುಂಭಾಗದಲ್ಲಿ ಗ್ರಾಮಸ್ಥರು ಶವವಿಟ್ಟು ಆಕ್ರೋಶ - ಅರಣ್ಯ ಸಿಬ್ಬಂದಿಗಳ ವಿರುದ್ಧ ಗ್ರಾಮಸ್ಥರ ಆಕ್ರೋಶ

• ಉದಯವಾಹಿನಿ, ಕೆ.ಆರ್.ಪುರ

ಶವಸಂಸ್ಕಾರಕ್ಕೆ ಸೂಕ್ತ ಸ್ಮಶಾನವಿಲ್ಲದ ಕಾರಣ ಬೆಂಗಳೂರು ಪೂರ್ವ ತಾಲ್ಲೂಕಿನ ಪಣತ್ತೂರು ದಿನ್ನೆಯ ಸ್ಥಳೀಯರು ಪಣತ್ತೂರು ಟ್ರೀಪಾರ್ಕ್ ಮುಂಭಾಗದಲ್ಲೇ ಶವವನ್ನಿಟ್ಟು ಅರಣ್ಯ ಇಲಾಖೆ ಹಾಗೂ ಸರ್ಕಾರದ ವಿರುದ್ಧ ತೀವ್ರ ಪ್ರತಿಭಟನೆ ನಡೆಸಿದರು.

ಬೆಂಗಳೂರು ಪೂರ್ವ ತಾಲ್ಲೂಕಿನ ವರ್ತೂರು ಹೋಬಳಿಯ ಪಣತ್ತೂರು ಗ್ರಾಮದ ಸರ್ವೆ ನಂ. 52 ರಲ್ಲಿ ಒಟ್ಟು 33.12 ಎಕರೆ ಸರ್ಕಾರಿ ಗೋಮಾಳವಿದ್ದು, ಇದರಲ್ಲಿ ಆದಿಪರಾಶಕ್ತಿ ದೇವಸ್ಥಾನಕ್ಕೆ, ಆಟದ ಮೈದಾನಕ್ಕೆ ಹಾಗೂ ಸಾರ್ವಜನಿಕ ರಸ್ತೆ ಬಳಕೆಗೆ ಜಮೀನು ಮೀಸಲಿಡಲಾಗಿದೆ. ಆದರೆ ನೂರಾರು ವರ್ಷಗಳಿಂದ ಪೂರ್ವಜರು ಶವಸಂಸ್ಕಾರಕ್ಕಾಗಿ ಬಳಸುತ್ತಿದ್ದ ಜಾಗದಲ್ಲಿ ಕನಿಷ್ಠ 2-3 ಎಕರೆ ಜಾಗವನ್ನು ರುದ್ರಭೂಮಿಗಾಗಿ ಮೀಸಲಿಡಬೇಕು ಎಂದು ಪ್ರತಿಭಟನೆಯ ನೇತೃತ್ವವಹಿಸಿದ್ದ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಬೆಂಗಳೂರು ನಗರ ಜಿಲ್ಲಾ ಸಂಚಾಲಕ ಗೋವಿಂದ್ ಕುಮಾರ್ ಅವರು ಆಗ್ರಹಿಸಿದರು.

ಪಾರ್ಕ್ ಲೋಕಾರ್ಪಣೆ ನಂತರವೂ ಶವ ಸಂಸ್ಕಾರ ಮಾಡಲು ಕೆಲವರಿಗೆ ಅರಣ್ಯ ಸಿಬ್ಬಂದಿ ಅನುಮತಿ ನೀಡಿದರು. ಆದರೇ ಬಡವರು, ದಿನದಲಿತರೆಂಬ ಕಾರಣಕ್ಕೆ ಶವಸಂಸ್ಕಾರಕ್ಕೆ ಅಡ್ಡಿಪಡಿಸಿ ಸಂಜೆವರಿಗೂ ಶವವನ್ನಿಟ್ಟು ಪ್ರತಿಭಟಿಸಿದರು, ಸತ್ತವರ ಕುಟುಂಬದವರ ದುಃಖವನ್ನು ಸಹ ಅರ್ಥಮಾಡಿ ಕೊಳ್ಳದೆ, ಶವವನ್ನು ಒಳಗೆ ಬಿಡದೆ ಪಕ್ಕದ ಊರಿಗೆ ಹೋಗಿ ಶವಸಂಸ್ಕಾರ ಮಾಡುವಂತಹ ಪರಿಸ್ಥಿತಿ ಎದುರಾಯಿತು

ಉದಯವಾಹಿನಿ ಚಿತ್ರ

ಎಂದು ಬೇಸರ ವ್ಯಕ್ತಪಡಿಸಿದರು.

ಸಂಬಂಧಪಟ್ಟವರಿಗೆ ಹಲವು ಬಾರಿ ಮಾನವಿ ಮಾಡಿದರೂ ಪ್ರಯೋಜನವಾಗಿಲ್ಲ, ತಹಶೀಲ್ದಾರ್ ಅಥವಾ ಜಿಲ್ಲಾಡಳಿತದ ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ರುದ್ರಭೂಮಿಗೆ ಸೂಕ್ತ ಜಾಗ ನಿಗದಿಪಡಿಸಬೇಕು ಮಂಜೂರು ಮಾಡಬೇಕು, ಇಲ್ಲವಾದಲ್ಲಿ ಕಾನೂನು ಹೋರಾಟ ಮಾಡಲಾಗುವುದು ಎಂದು ಗ್ರಾಮಸ್ಥರು ತಿಳಿಸಿದರು.

ಇದೆವೇಳೆ ಇಲಾಖೆ ಅಧಿಕಾರಿಗಳು ಮತ್ತು ಗ್ರಾಮಸ್ಥರು ಮಧ್ಯೆ ಮಾತಿನ ಚಕಮಕಿ ನಡೆಯಿತು, ಸ್ಥಳಕ್ಕೆ ಪೋಲಿಸರು ಆಗಮಿಸಿ ಪರಿಸ್ಥಿತಿಯನ್ನು ಶಾಂತಗೊಳಿಸಿದರು. ಸಂಜೆಯ ನಂತರ ಪಣತ್ತೂರಿನಲ್ಲಿ ಶವಸಂಸ್ಕಾರ ಜರುಗಿತ್ತು. ಈ ಸಂದರ್ಭದಲ್ಲಿ ಬೆಂ. ಪೂ. ತಾ ಸಂಘಟನಾ ಸಂಚಾಲಕ ಪಣತ್ತೂರು ದಿನ್ನೆ ಕೆ. ಮಂಜು, ಬಳಗೆರೆ ಪಾಪಣ್ಣ, ಸ್ಥಳೀಯರಾದ ಗಂಗಧಾರ್, ಬಳಗೆರೆ ಶಿವರಾಜ್, ರಮೇಶ್, ವರ್ತೂರು ಮಾದೇಶ್, ಮೋಹನ್ ಗೌಡ, ಮೂರ್ತಿ ಗೌಡ, ಮುನೇಶ್, ಜಿ ಎಸ್.ಎಂ ಮುನಿರಾಜು, ವೆಂಕಟಸ್ವಾಮಿ, ಗ್ರಾಮಸ್ಥರು ಮತ್ತಿತರರು ಪ್ರತಿಭಟನೆಯಲ್ಲಿ

ನ.15ಕ್ಕೆ ಬೆಂಗಳೂರಿಗೆ ಪ್ರಧಾನಿ ಮೋದಿ, ಮಾಹಿತಿ ಹಂಚಿಕೊಂಡ ಸಿಎಂ ಶಿವಕುಮಾರ್

• ಉದಯವಾಹಿನಿ, ಬೆಂಗಳೂರು

ಇದೇ ನವೆಂಬರ್ 15ರಂದು ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರಿಗೆ ಆಗಮಿಸಲಿದ್ದು, ಬಹುನಿರೀಕ್ಷಿತ ಪಿಂಕ್ ಲೈನ್ ಮೆಟ್ರೋ ಮಾರ್ಗವನ್ನು ಉದ್ಘಾಟಿಸಲಿದ್ದಾರೆ. ಈ ಬಗ್ಗೆ ಸಿಎಂ ಡಿಕೆ ಶಿವಕುಮಾರ್ ಅವರು ಮಾಹಿತಿ ನೀಡಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಡಿಕೆಶಿ, ನವೆಂಬರ್ 15ರಂದು ಬೆಂಗಳೂರಿಗೆ ಪ್ರಧಾನಿಗಳು ಆಗಮಿಸಲಿದ್ದು, ಪಿಂಕ್ ಮೆಟ್ರೋ ರೈಲು ಮಾರ್ಗವನ್ನು ಉದ್ಘಾಟಿಸಲಿದ್ದಾರೆ. ಇದೇ ವೇಳೆ ರಾಜ್ಯ ಸರ್ಕಾರವು ಬರ ಪರಿಹಾರ ನಿಧಿ ಬಿಡುಗಡೆ ಕುರಿತು ಪ್ರಧಾನಿಯವರೊಂದಿಗೆ ಚರ್ಚಿಸಲು ಸರ್ವಪಕ್ಷ ನಿಯೋಗದ ಭೇಟಿಗೆ ಸಮಯಾವಕಾಶ ಕೇಳುತ್ತೇನೆ ಎಂದು ಹೇಳಿದ್ದಾರೆ.

ಪಿಂಕ್ ಮೆಟ್ರೋ ರೈಲು ಉದ್ಘಾಟನೆ ಪ್ರಧಾನಿ ನರೇಂದ್ರ ಮೋದಿ ಅವರು ನವೆಂಬರ್ 15ರಂದು ಬೆಂಗಳೂರಿಗೆ ಆಗಮಿಸಲಿದ್ದು, ಬಹುನಿರೀಕ್ಷಿತ ಪಿಂಕ್ ಲೈನ್ ಮೆಟ್ರೋ ಮಾರ್ಗವನ್ನು ಉದ್ಘಾಟಿಸಲಿದ್ದಾರೆ. ಇದರೊಂದಿಗೆ ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗೆ ಪಿಂಕ್ ಮೆಟ್ರೋ ಸಂಚಾರಕ್ಕೆ ಕೌಂಡ್ ಡೌನ್ ಶುರುವಾಗಿದೆ. ಪಿಂಕ್ ಮೆಟ್ರೋ ಮಾರ್ಗ ಕಾಳೇನ ಅಗ್ರಹಾರ ದಿಂದ ನಾಗವಾರದವರೆಗೆ ಸಂಪರ್ಕ ಕಲ್ಪಿಸುತ್ತದೆ.

ಈ ಮಾರ್ಗವೂ ಒಟ್ಟು ಉದ್ದ ಸುಮಾರು 21.25 ಕಿ.ಮೀ ಇದ್ದು, ಒಟ್ಟು 18 ನಿಲ್ದಾಣಗಳಿದೆ. ಸದ್ಯ 7.5 ಕಿ.ಮೀ. ಎತ್ತರಿಸಿದ ಮಾರ್ಗ ಉದ್ಘಾಟನೆಗೆ ಸಿದ್ಧವಾಗಿದ್ದು, ಈ ಎಲಿವೇಟೆಡ್ ಮೆಟ್ರೋ ಮಾರ್ಗವನ್ನು ಪ್ರಧಾನಿಗಳು ಉದ್ಘಾಟನೆ ಮಾಡಲಿದ್ದಾರೆ. ಉಳಿದ 13.76 ಕಿ.ಮೀ. ಸುರಂಗ ಮಾರ್ಗ ಕಾಮಗಾರಿಯಲಿದ್ದು, ಈ ಮಾರ್ಗ ಮುಂದಿನ ವರ್ಷ ಉದ್ಘಾಟನೆ ಆಗುವ ಸಾಧ್ಯತೆ ಇದೆ. ಡೈರಿ ಸರ್ಕಲ್‌ನಿಂದ ನಾಗವಾರ, ಶಿವಾಜಿನಗರ ಹಾಗೂ ಕಂಟೋನ್ಮೆಂಟ್ ಮೂಲಕ ನಾಗವಾರ ವರೆಗೂ ಸಂಪರ್ಕ ಕಲ್ಪಿಸಲಿದೆ.

ಸರ್ಕಾರಕ್ಕೆ ಹೈಕೋರ್ಟ್ ಸೂಚನೆ

• ಉದಯವಾಹಿನಿ, ಬೆಂಗಳೂರು

ವಿದ್ಧಾಪ್ಯದ ಸಂದರ್ಭದಲ್ಲಿ ಆಸ್ತಿಯನ್ನು ವರ್ಗಾಯಿಸುವ, ಹಕ್ಕುಬಿಡುಗಡೆ ಮಾಡುವ ಕಾನೂನು ಪರಿಣಾಮಗಳ ಕುರಿತು ಹಿರಿಯ ನಾಗರಿಕರಲ್ಲಿ ಜಾಗೃತಿ ಮೂಡಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಸರ್ಕಾರಕ್ಕೆ ಹೈಕೋರ್ಟ್ ಸಲಹೆ ನೀಡಿದೆ. ತಂದೆಯಿಂದ ಖರೀದಿ ಮಾಡಿದ್ದ ಜಮೀನಿನ ಬಿಡುಗಡೆ ಪತ್ರವನ್ನು ರದ್ದುಪಡಿಸಿದ್ದ ಉಪವಿಭಾಗಾಧಿಕಾರಿಗಳ ಆದೇಶವನ್ನು ಪ್ರಶ್ನಿಸಿ ಮಗಳು ಮತ್ತು ಅಳಿಯ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ನ್ಯಾಯಪೀಠ ಸೂಚನೆ ನೀಡಿದೆ. ಹಿರಿಯ ನಾಗರಿಕರ ಹಿತಾಸಕ್ತಿ ರಕ್ಷಿಸಲು ಪ್ರಸ್ತುತ ಕಾನೂನಿನಲ್ಲಿರುವ ಕ್ರಮಗಳು ಪರಿಣಾಮಕಾರಿಯಾಗಿ ಜಾರಿಯಾಗುತ್ತಿವೆಯೇ ಎಂಬುದನ್ನು ಸರ್ಕಾರ ಪರಿಶೀಲಿಸಬೇಕು.

ಆಸ್ತಿ ವರ್ಗಾವಣೆ ಅಥವಾ ಹಕ್ಕುಬಿಡುಗಡೆಗೆ ಸಂಬಂಧಿಸಿದ ದಾಖಲೆಗಳಿಗೆ ಸಹಿ ಹಾಕುವ ಮೊದಲು ಅವುಗಳ ಸ್ವರೂಪ ಮತ್ತು ಕಾನೂನು ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವ ಮಹತ್ವದ ಕುರಿತು ಹಿರಿಯರಿಗೆ ಅರಿವು ಮೂಡಿಸಬೇಕು. ಆಸ್ತಿ ಪಡೆದವರು ನಿರ್ವಹಣೆ. ಪೋಷಣೆ ಒದಗಿಸಬೇಕು .

ಎಸ್‌ಐಆರ್ ಅಂತಿಮ ಮತದಾರರ ಪಟ್ಟಿ: ಬೆಂಗಳೂರಲ್ಲಿ 43.92 ಲಕ್ಷ ಅನರ್ಹ ಮತದಾರರು ಡಿಲೀಟ್!

• ಉದಯವಾಹಿನಿ, ಬೆಂಗಳೂರು

ಎಸ್‌ಐಆರ್ ಪ್ರಕ್ರಿಯೆಯಿಂದ ಬೆಂಗಳೂರಿನ ಮತದಾರರ ಸಂಖ್ಯೆಯಲ್ಲಿ ಭಾರಿ ಇಳಿಕೆ ಕಂಡಿದೆ. ಎಸ್‌ಐಆರ್ ಅಂತಿಮ ಮತದಾರರ ಪಟ್ಟಿಯಂತೆ ಬೆಂಗಳೂರಿನ ಮತದಾರರ ಸಂಖ್ಯೆ 59.08 ಲಕ್ಷಕ್ಕೆ ಇಳಿಕೆಯಾಗಿದೆ. ಅಂದರೆ ಎಸ್‌ಐಆರ್ ಪೂರ್ವದಲ್ಲಿ ಇದ್ದದ್ದಕ್ಕಿಂತ ಬೆಂಗಳೂರಿನ ಒಟ್ಟು 28 ಕ್ಷೇತ್ರಗಳಲ್ಲಿ ಒಟ್ಟು 43.92 ಲಕ್ಷದಷ್ಟು ಮತದಾರರ ಸಂಖ್ಯೆ ಕಡಿಮೆಯಾಗಿದೆ.

ಎಸ್‌ಐಆರ್ ಪೂರ್ವದಲ್ಲಿ ಬೆಂಗಳೂರು ವ್ಯಾಪ್ತಿಯಲ್ಲಿ 1.03 ಕೋಟಿ ಮತದಾರರು ಇದ್ದರು. ಎಸ್‌ಐಆರ್ ಅಂತಿಮ ಮತದಾರರ ಪಟ್ಟಿಯಲ್ಲಿ ಮತದಾರರ ಸಂಖ್ಯೆ 59.08 ಲಕ್ಷಕ್ಕೆ ಇಳಿಕೆಯಾಗಿದೆ. ಅಂದರೆ ಸುಮಾರು 42.64% ದಷ್ಟು ಮತದಾರರ ಹೆಸರನ್ನು ಕೈಬಿಡಲಾಗಿದೆ. ಇದಕ್ಕೆ ಪ್ರಮುಖ ಕಾರಣ ವಲಸಿಗರು. ಬಹುತೇಕ ಬೇರೆ ರಾಜ್ಯದವರು ಬೆಂಗಳೂರಿಗೆ ವಲಸೆ ಬಂದಿದ್ದು, ಎರಡೆರಡು ಕಡೆ ಮತಪಟ್ಟಿಯಲ್ಲಿ ಹೆಸರು ಹೊಂದಿದವರ ಪ್ರಮಾಣ ಹಾಗೂ ಶಾಶ್ವತ ಸ್ಥಳಾಂತರದ ಪ್ರಮಾಣವೂ ಅಧಿಕವಾಗಿದೆ.

ಬೆಂಗಳೂರು ವ್ಯಾಪ್ತಿಯ ಬೆಂಗಳೂರು ಉತ್ತರ, ಬೆಂಗಳೂರು ಕೇಂದ್ರ ಹಾಗೂ ಬೆಂಗಳೂರು ದಕ್ಷಿಣ ಅಪರ ಜಿಲ್ಲಾ ಚುನಾವಣಾಧಿಕಾರಿಗಳ ವ್ಯಾಪ್ತಿಯಲ್ಲಿ ಒಟ್ಟು 59,08,151 ಮತದಾರರಿದ್ದು, ಅವರಲ್ಲಿ 28,67,256 ಪುರುಷರು, 30,40,221 ಮಹಿಳೆಯರು ಹಾಗೂ 674 ಇತರೆ ಮತದಾರರು ಇದ್ದಾರೆ. **ಮತದಾರರ ಪಟ್ಟಿಯಲ್ಲಿ ಸೇರ್ಪಡೆ, ಮಾರ್ಪಾಡು, ಡಿಲೀಷನ್:** ಕರಡು ಮತದಾರರ ಪಟ್ಟಿಗೆ ಹೋಲಿಸಿದಾಗ, ಅಂತಿಮ ಮತದಾರರ ಪಟ್ಟಿಯಲ್ಲಿ ಒಟ್ಟು 2,74,372 ಮತದಾರರ ಹೆಸರುಗಳನ್ನು ಹೊಸದಾಗಿ ಸೇರ್ಪಡೆಗೊಳಿಸಲಾಗಿದೆ. 1,81,053 ಮತದಾರರ ವಿವರಗಳಲ್ಲಿ ಮಾರ್ಪಾಡು ಮಾಡಲಾಗಿದ್ದು, 65,881 ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ.

ಉದಯವಾಹಿನಿ ಚಿತ್ರ

ಖಾಸಗಿ ಕಂಪನಿಗಳು ಕನ್ನಡಿಗರನ್ನು ಕಡೆಗಣಿಸುತ್ತಿವೆ ಅಂತ ಟೀಕಿಸಿದ್ದ ಯುವತಿ

• ಉದಯವಾಹಿನಿ, ಬೆಂಗಳೂರು

ರೆಸ್ಯೂಮ್‌ನಲ್ಲಿ ಕನ್ನಡ ಇದೆ ಅನ್ನೋ ಕಾರಣಕ್ಕೆ ಕೆಲಸ ನೀಡದೇ ಉದ್ಧಟತನ ತೋರಿದ್ದ ಸಂಸ್ಥೆ ವಿರುದ್ಧ ಕನ್ನಡಿಗರು ತಿರುಗಿ ಬಿದ್ದ ಬೆನ್ನಲ್ಲೇ, ಕೊನೆಗೂ ಖಾಸಗಿ ಸಂಸ್ಥೆ ಬಹಿರಂಗವಾಗಿ ಕನ್ನಡಿಗರ ಕ್ಷಮೆಯಾಚಿಸಿದೆ.

ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿದ್ದರು, ಕನ್ನಡಿಗರಿಗೆ ಕೆಲಸ ನೀಡದೇ, ರೆಸ್ಯೂಮ್‌ನಲ್ಲಿ ಕನ್ನಡ ಮಾತೃಭಾಷೆ ಇದೆ ಅನ್ನೋ ಕಾರಣಕ್ಕೆ ಕೆಲಸ ನೀಡದೇ ಉದ್ಧಟತನ ತೋರಿದ್ದ ಖಾಸಗಿ ಸಂಸ್ಥೆಗೆ ಕೊನೆಗೂ ಕನ್ನಡಿಗರು ಪಾಠ ಕಲಿಸಿದ್ದಾರೆ. ಖಾಸಗಿ ಸಂಸ್ಥೆಯ ಮೊಂಡಾಟಕ್ಕೆ ಪಾಠ ಕಲಿಸುವ ಮೂಲಕ ಕನ್ನಡಿಗರಿಗೆ ಬಹಿರಂಗ ಕ್ಷಮೆಯಾಚಿಸುವಂತೆ ಮಾಡಿದ್ದಾರೆ. ಕಳೆದ ಕೆಲ ದಿನಗಳ ಹಿಂದೆ ಕನ್ನಡಿಗರಿಗೆ ಖಾಸಗಿ ಸಂಸ್ಥೆಗಳ ಕೆಲಸ ನೀಡುವ ವಿಚಾರದಲ್ಲಿ ತಾರತಮ್ಯ ಮಾಡುತ್ತಿವೆ ಎನ್ನುವ ಆರೋಪಗಳು ಕೇಳಿ ಬಂದಿದ್ದವು.

ಆ ಬೆನ್ನಲ್ಲೇ ಕೆಲಸದಿಂದ ವಂಚಿತಳಾಗಿದ್ದ ಯುವತಿಯೊಬ್ಬಳ ನೋವಿನ ವೀಡಿಯೊ ಕೂಡ ವೈರಲ್ ಆಗಿ, ಖಾಸಗಿ ಸಂಸ್ಥೆಗಳ ವಿರುದ್ಧ ದೊಡ್ಡಮಟ್ಟದ ಆಕ್ರೋಶ ವ್ಯಕ್ತವಾಗಿತ್ತು. ಈ ಬೆನ್ನಲ್ಲೇ ಆಕ್ಟೀವ್ ಆದ ಕನ್ನಡ ಸಂಘಟನೆಗಳು ಉದ್ಧಟತನ ತೋರಿದ್ದ ಸಾಫ್ಟ್‌ವೇರ್ ಸಂಸ್ಥೆಗೆ ತೆರಳಿ ಆಕ್ರೋಶ ವ್ಯಕ್ತಪಡಿಸಿವೆ. ಇಂದಿರಾನಗರದಲ್ಲಿದ್ದ ಕಂಪನಿಯನ್ನ ಹುಡುಕಿ ಕ್ಷಮೆಯಾಚಿಸುವಂತೆ ಮಾಡಿವೆ.ಈ ರೀತಿಯ ಘಟನೆಗಳು ಪದೇ ಪದೇ ಮರುಕಳಿಸುತ್ತಿರುವ ಹಿನ್ನೆಲೆ, ಇತ್ತ ರಾಜ್ಯೋತ್ಸವ ಸಂಭ್ರಮದ ಹೊತ್ತಲ್ಲೇ ಸರ್ಕಾರಕ್ಕೆ ಕರವೇ ನಾರಾಯಣಗೌಡರ ಸವಾಲು ಹಾಕಿದ್ದಾರೆ. ರಾಜ್ಯದ ಜಲ, ನೆಲದ ರಕ್ಷಣೆಯಲ್ಲಿ ಸರ್ಕಾರಗಳು ವಿಫಲವಾಗಿವೆ.

ಸಹಕಾರ ಕ್ಷೇತ್ರದಲ್ಲಿ ಹೊಸ ಹೆಜ್ಜೆ; ಇಲಾಖೆಯಿಂದ ನೂತನ 'ಡಿಪ್ಲೊಮಾ ಇನ್ ಕೋ-ಆಪರೇಟಿವ್ ಆಡಿಟ್' ಕೋರ್ಸ್

ಅಕೌಂಟಿಂಗ್ ಅಂಡ್ ಫೈನಾನ್ಶಿಯಲ್ ಮ್ಯಾನೇಜ್‌ಮೆಂಟ್, ಕೋ-ಆಪರೇಟಿವ್ ಆಡಿಟಿಂಗ್, ಕೋ-ಆಪರೇಟಿವ್ ಇಕೋ-ಸಿಸ್ಟಂ ಹಾಗೂ ಟ್ಯಾಲಿ ಸೇರಿ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳ ಕುರಿತು ತರಬೇತಿ

• ಉದಯವಾಹಿನಿ, ಬೆಂಗಳೂರು

1 ಜಂಟಿ ಮಾಧ್ಯಮಗೋಷ್ಠಿ ನಡೆಸಿದ ಸಹಕಾರ ಸಚಿವ ಲಕ್ಷ್ಮಣ ಸವದಿ
2 ಲೆಕ್ಕಪರಿಶೋಧನೆಯಲ್ಲಿ ಹೆಚ್ಚಿನ ಪಾರದರ್ಶಕತೆ
3 ಆಧುನಿಕ ಡಿಜಿಟಲ್ ಪ್ಲಾಟ್ ಫಾರ್ಮ್‌ಗಳ ಕುರಿತು ಪ್ರಾಯೋಗಿಕ ತರಬೇತಿ

ರಾಜ್ಯದ ಸಹಕಾರಿ ಕ್ಷೇತ್ರಕ್ಕೆ ಕೌಶಲ್ಯಯುತ ಹಾಗೂ ವೃತ್ತಿಪರ ಮಾನವ ಸಂಪನ್ಮೂಲವನ್ನು ಒದಗಿಸುವ ಉದ್ದೇಶದಿಂದ ರಾಜ್ಯ ಸಹಕಾರ ಇಲಾಖೆಯ ಸಹಯೋಗದೊಂದಿಗೆ ಡಿಪ್ಲೊಮಾ ಇನ್ ಕೋ-ಆಪರೇಟಿವ್ ಆಡಿಟ್ ಎಂಬ ಆರು ತಿಂಗಳ ಅವಧಿಯ ನೂತನ ಡಿಪ್ಲೊಮಾ ಕೋರ್ಸ್ ಆರಂಭಿಸುವುದಾಗಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಘೋಷಿಸಿದೆ.

ಈ ಕುರಿತು ಜಂಟಿ ಮಾಧ್ಯಮಗೋಷ್ಠಿ ನಡೆಸಿದ ಸಹಕಾರ ಸಚಿವ ಲಕ್ಷ್ಮಣ ಸವದಿ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ.ಟಿ. ದೇವೇಗೌಡ ಅವರು ಮಾಹಿತಿ ಹಂಚಿಕೊಂಡಿದ್ದಾರೆ. ರಾಜ್ಯದ ಯುವ ಜನತೆಗೆ ಈ ಕೋರ್ಸ್ ಮೂಲಕ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿದ್ದು, ಸಹಕಾರ ಸಂಸ್ಥೆಗಳ ಲೆಕ್ಕಪರಿಶೋಧನೆಯಲ್ಲಿ ಹೆಚ್ಚಿನ ಪಾರದರ್ಶಕತೆ ತರಲು ಸಹಕಾರಿಯಾಗಲಿದೆ ಎಂದು ತಿಳಿಸಿದ್ದಾರೆ.

ಆರು ತಿಂಗಳ ಸುದೀರ್ಘ ಕೋರ್ಸ್‌ನಲ್ಲಿ ಸಹಕಾರ ಕಾಯ್ದೆ ಮತ್ತು ನಿಯಮಗಳು, ಅಕೌಂಟಿಂಗ್ ಅಂಡ್ ಫೈನಾನ್ಶಿಯಲ್ ಮ್ಯಾನೇಜ್‌ಮೆಂಟ್, ಕೋ-ಆಪರೇಟಿವ್ ಆಡಿಟಿಂಗ್, ಕೋ-ಆಪರೇಟಿವ್ ಇಕೋ-ಸಿಸ್ಟಂ

ಉದಯವಾಹಿನಿ ಚಿತ್ರ

ಹಾಗೂ ಟ್ಯಾಲಿ ಸೇರಿದಂತೆ ಇತ್ತೀಚಿನ ಆಧುನಿಕ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳ ಕುರಿತು ಪ್ರಾಯೋಗಿಕ ತರಬೇತಿ ನೀಡಲಾಗುತ್ತದೆ. ಕೇವಲ ಸಿದ್ಧಾಂತಕ್ಕೆ ಸೀಮಿತವಾಗದೆ ತರಗತಿ ಬೋಧನೆ, ಕೇಸ್ ಸ್ಟಡೀಸ್, ಫೀಲ್ಡ್ ಸ್ಟಡೀಸ್ ಮತ್ತು ಪ್ರಾಯೋಗಿಕ ಲೆಕ್ಕಪರಿಶೋಧನಾ ಕೆಲಸದ ಅನುಭವವನ್ನು ಈ ಕೋರ್ಸ್ ಒಳಗೊಂಡಿರಲಿದೆ.

ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿಕಾಂ, ಬಿಬಿಎಂ ಅಥವಾ ಯಾವುದೇ ಪದವಿಯಲ್ಲಿ ಅಕೌಂಟೆನ್ಸಿಯನ್ನು ಒಂದು ವಿಷಯವಾಗಿ ವ್ಯಾಸಂಗ ಮಾಡಿರುವ ಅಭ್ಯರ್ಥಿಗಳು ಈ ತರಬೇತಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರಲಿದ್ದಾರೆ.

ಈ ಕೋರ್ಸ್‌ನ ಪ್ರವೇಶ ಶುಲ್ಕವು ಸಾಮಾನ್ಯ ಹಾಗೂ ಇತರೆ ಅಭ್ಯರ್ಥಿಗಳಿಗೆ 10 ಸಾವಿರ ರೂಪಾಯಿಗಳಾಗಿದ್ದು, ಬಿಪಿಎಲ್, ಎಸ್‌ಸಿ ಹಾಗೂ ಎಸ್‌ಟಿ ವರ್ಗದ ಅಭ್ಯರ್ಥಿಗಳಿಗೆ ಸಂಪೂರ್ಣ ಶುಲ್ಕ ವಿನಾಯಿತಿ ನೀಡಲಾಗಿದೆ. ಕೋರ್ಸ್ ಪಡೆದವರಿಗೆ ಅಧಿಕೃತ ಮಾನ್ಯತೆ ಪತ್ರವನ್ನು ಇಲಾಖೆಯಿಂದ ನೀಡಲಾಗುವುದು. ಅವರು ಮಾಡುವ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ವರದಿಯನ್ನು ಸಹಕಾರ ಇಲಾಖೆಯವರು ಅಧಿಕಾರಿಗಳು ಪರಿಶೀಲಿಸಿ ಅಧಿಕೃತ ಮಾನ್ಯತೆ ನೀಡಲಿದ್ದಾರೆ. ಅರ್ಜಿ ಸಲ್ಲಿಕೆಯು ಇದೇ ಅಕ್ಟೋಬರ್ 30ರಿಂದ ಆರಂಭವಾಗಲಿದ್ದು, ಪ್ರಕಟಣೆ ಹೊರಬಂದ ದಿನಾಂಕದಿಂದ 15 ದಿನಗಳ ಒಳಗಾಗಿ ಆಸಕ್ತರು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ರಾಜ್ಯದ ಎಂಟು ಪ್ರಮುಖ ಸಹಕಾರ ತರಬೇತಿ ಕೇಂದ್ರಗಳಾದ ಬೆಂಗಳೂರು, ಧಾರವಾಡ, ಮೈಸೂರು, ಮಡಿಕೇರಿ, ಕಲಬುರಗಿ, ಮಂಗಳೂರು, ಶಿವಮೊಗ್ಗ ಹಾಗೂ ಬೆಳಗಾವಿಗಳಲ್ಲಿ ಈ ಕೋರ್ಸ್ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮಹಾಮಂಡಳದ ಅಧಿಕೃತ ವೆಬ್‌ಅಥವಾ ಬೆಂಗಳೂರಿನ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

ವಾರ್ಷಿಕವಾಗಿ 500 ಜನ ಲೆಕ್ಕಪರಿಶೋಧಕರನ್ನು ಸೃಷ್ಟಿಸುವ ಗುರಿ ಹೊಂದಲಾಗಿದ್ದು, ಅರ್ಜಿಗಳನ್ನು ಗಮನಿಸಿ ಮುಂದಿನ ಯೋಜನೆ ರೂಪಿಸಲಿದ್ದೇವೆ ಎಂದು ಸಚಿವ ಲಕ್ಷ್ಮಣ ಸವದಿ ವಿವರಿಸಿದ್ದಾರೆ.

ವಾರ್ಷಿಕ 500 ಲೆಕ್ಕಪರಿಶೋಧಕರನ್ನು ಸೃಷ್ಟಿಸುವ ಗುರಿ

ಸಹಕಾರ ಸಂಘಗಳ ರಚನೆ, ಆಡಳಿತ, ಹಣಕಾಸು ನಿರ್ವಹಣೆ ಹಾಗೂ ಲೆಕ್ಕಪರಿಶೋಧನಾ ವಿಧಾನಗಳನ್ನು ಬಲಪಡಿಸುವುದು ಈ ಕೋರ್ಸ್‌ನ ಪ್ರಮುಖ ಆಶಯವಾಗಿದೆ. ಕೌಶಲ್ಯಯುತ ಮತ್ತು ಸಮರ್ಥ ಲೆಕ್ಕಪರಿಶೋಧಕರನ್ನು ತಯಾರಿಸುವುದರ ಜೊತೆಗೆ, ಸಂಸ್ಥೆಗಳ ವ್ಯವಹಾರಿಕ ಲೋಪದೋಷಗಳನ್ನು ತಡೆಗಟ್ಟಿ ಕಾನೂನುಬದ್ಧ ನಿಯಮಗಳ ಪಾಲನೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಈ ತರಬೇತಿಯು ಸಹಕಾರಿಯಾಗಲಿದೆ.

ಪರಿಷತ್ ಚುನಾವಣೆಯಲ್ಲಿ ನಮ್ಮವರು ಸರಿಯಾಗಿ ಕೆಲಸ ಮಾಡದಿದ್ದಕ್ಕೆ ಸೋಲು

• ಉದಯವಾಹಿನಿ, ತುಮಕೂರು

ಎಂಎಲ್‌ಸಿ ಚುನಾವಣೆಯಲ್ಲಿ ನಾಲ್ಕು ಕ್ಷೇತ್ರಗಳಲ್ಲೂ ಕಾಂಗ್ರೆಸ್ ಸೋಲಿಗೆ ಮಾಜಿ ಸಚಿವ ಕೆ.ಎನ್.ರಾಜಣ್ಣ ಬೇಸರ ವ್ಯಕ್ತಪಡಿಸಿದ್ದಾರೆ.

ತುಮಕೂರಿನಲ್ಲಿ ಮಾತನಾಡಿದ ರಾಜಣ್ಣ, ನಾಲ್ಕು ಕ್ಷೇತ್ರಗಳ ಚುನಾವಣಾ ಫಲಿತಾಂಶ ನಮ್ಮಲ್ಲಿ ನಿರಾಸೆ ಮೂಡಿಸಿದೆ. ಇದು 35 ಅಸೆಂಬ್ಲಿ ಕ್ಷೇತ್ರ ಬರುತ್ತೆ. ಅದರಲ್ಲಿ 26 ಕ್ಷೇತ್ರದಲ್ಲಿ ಕಾಂಗ್ರೆಸ್ ಎಂಎಲ್‌ಎ ಗಳು ಬರ್ತಾರೆ. ನಮ್ಮವರು ಸರಿಯಾಗಿ ಕೆಲಸ ಮಾಡಿಲ್ಲ ಅಂತ ನನಗೆ ಅನ್ನಿಸ್ತೆ. ಅದೇ ಪ್ರತಿ ಕ್ಷೇತ್ರದ ಸೋಲಿಗೆ ಪ್ರಮುಖ ಕಾರಣ ಎಂದಿದ್ದಾರೆ.

ಎಂಎಲ್‌ಎಗಳು ಆಯಾ ತಾಲ್ಲೂಕು ಹೋಬಳಿಗಳಲ್ಲಿ ಆಯಾ ಲೀಡರ್ ಗಳು ಕೆಲಸ ಮಾಡಿಲ್ಲ. ಈ ಬಾರಿ ವೋಟರ್ ಲಿಸ್ಟ್ ನಲ್ಲಿ ಮತದಾರರ ನಂಬರ್ ಎಲ್ಲಾ ಇತ್ತು. ಅಷ್ಟು ಇದ್ರು ಸಹ ಕೆಲಸ ಮಾಡಿಲ್ಲ. 35 ಅಸೆಂಬ್ಲಿ ಕ್ಷೇತ್ರದಲ್ಲಿ 26 ಶಾಸಕರು ಇದ್ದು, ನಾವು ಸೋಲ್ತೀವಿ ಅಂದ್ರೆ, ನಿಜಕ್ಕೂ ವಿಪರ್ಯಾಸ ಎಂದರು.

ಬ್ಯಾಲೆಟ್ ಪೇಪರ್ ವಿಚಾರವಾಗಿ ಮಾತನಾಡಿ, ಈ ಎಂಎಲ್‌ಸಿ ಚುನಾವಣೆ ಯಾವಾಗಲೂ ಬ್ಯಾಲೆಟ್ ಪೇಪರ್‌ನಲ್ಲೇ ನಡೆಯೋದು. ಪ್ರಾಶಸ್ತ್ಯ ಮತ ಇರೋದ್ರಿಂದ ಬ್ಯಾಲೆಟ್ ಪೇಪರ್ ಇರಲೇಬೇಕು ಎಂದು ಹೇಳಿದರು.

ಸಿದ್ದರಾಮಯ್ಯ ಅವರನ್ನ ಸೈಡ್‌ಲೈನ್ ಮಾಡಿದ್ರಿಂದ ಈ ಸೋಲಾಯ್ತು ಎಂಬ ಚರ್ಚೆ ಕುರಿತು ಪ್ರತಿಕ್ರಿಯಿಸಿ, ಸಿದ್ದರಾಮಯ್ಯ ಕಾಂಗ್ರೆಸ್‌ನ ಆಸ್ತಿ. ಅವರ

ಉದಯವಾಹಿನಿ ಚಿತ್ರ

ಅನುಪಸ್ಥಿತಿಯಿಂದ ಏನಾಗ್ತಿದೆ ನೋಡೋಣ. ಈ ಬಾರಿ ಜಿಲ್ಲಾ ಹಾಗೂ ತಾಲೂಕು ಪಂಚಾಯತ್ ಚುನಾವಣೆ ಬರ್ತಿದೆ, ಅದರಲ್ಲಿ ಗೊತ್ತಾಗುತ್ತೆ ಎಲ್ಲಾ ಅವರ ಸೈಡ್ ಲೈನ್‌ನಿಂದ ಪರಿಣಾಮ ಬೀರಿದೆ ಅಂತನೂ ಹೇಳೋಕೆ ಆಗಲ್ಲ. ಬೀರಿಲ್ಲ ಅಂತನೂ ಹೇಳೋಕೆ ಆಗಲ್ಲ ಎಂದರು.

15 ದಿನ ಕಳೆದರೂ ಸಿಗದ ನರಹಂತಕ ಚಿರತೆ!

• ಉದಯವಾಹಿನಿ, ಮಾಗಡಿ

ತಾಲ್ಲೂಕಿನ ಕಲ್ಲುದೇವನಹಳ್ಳಿಯಲ್ಲಿ ಮಹದೇಶ್ವರ ದೇಗುಲದ ಅರ್ಚಕ ಶಿವಸ್ವಾಮಿ ಅವರ ಮೇಲೆ ಚಿರತೆ ದಾಳಿಸಿ ಕೊಂದು 15 ದಿನ ಕಳೆದರೂ ನರಹಂತಕ ಚಿರತೆ ಇನ್ನೂ ಬೋನಿಗೆ ಬಿದ್ದಿಲ್ಲ. ಚಿರತೆ ಸೆರೆಗೆ ಅರಣ್ಯ ಇಲಾಖೆ ಸತತ ಪ್ರಯತ್ನ ನಡೆಸುತ್ತಿದ್ದರೂ ಚಿರತೆಯ ಸುಳಿವು ಸಿಕ್ಕಿಲ್ಲ.

ಎಫ್‌ಎಸ್‌ಎಲ್ ವರದಿ ವಿಳಂಬವಾಗುತ್ತಿರುವುದರಿಂದ ಮೃತರ ಕುಟುಂಬಕ್ಕೆ ಪರಿಹಾರ ನೀಡಲು ಅರಣ್ಯ ಇಲಾಖೆಗೆ ಕಾನೂನಾತ್ಮಕ ತೊಡಕು ಎದುರಾಗಿದೆ. ''ಚಿರತೆ ದಾಳಿ ಎಂಬುದು ಮರಣೋತ್ತರ ಪರೀಕ್ಷೆ ಹಾಗೂ ಎಫ್‌ಎಸ್‌ಎಲ್ ವರದಿಯಲ್ಲಿ ದೃಢಪಟ್ಟ ನಂತರವಷ್ಟೇ ಸರ್ಕಾರದ ಪರಿಹಾರ ನೀಡಲು ಸಾಧ್ಯ. ಮರಣೋತ್ತರ ಪರೀಕ್ಷಾ ವರದಿ ಬಂದಿದ್ದರೂ, ಅದರಲ್ಲಿ ಕೆಲವನ್ನು ಹಿಸ್ಟೋಪೆಥಾಲಜಿಗೆ (ರೋಗಪೀಡಿತ ಅಂಗಾಂಶಗಳನ್ನು ಪರೀಕ್ಷಿಸಿ ರೋಗ ಪತ್ತೆಹಚ್ಚುವ ಶಾಖೆ) ಹಾಗೂ ಎಫ್‌ಎಸ್‌ಎಲ್ ಕಳುಹಿಸಲಾಗಿದೆ' ಎಂದು ಆರ್‌ಎಫ್‌ಒ ನೇತ್ರಾವತಿ ತಿಳಿಸಿದರು. ತಾಲ್ಲೂಕಿನ ವಿವಿಧ ಹಳ್ಳಿಗಳಲ್ಲಿ ಚಿರತೆ ಕಾಣಿಸಿಕೊಂಡ ತಕ್ಷಣ ಗ್ರಾಮಸ್ಥರು ಆತಂಕದಿಂದ ಕರೆ ಮಾಡಿ ಬೋನು ಇಡುವಂತೆ ಒತ್ತಾಯಿಸುತ್ತಿದ್ದಾರೆ. ಸೀಮಿತ ಸಂಖ್ಯೆಯಲ್ಲಿರುವ ಬೋನು ಹಾಗೂ ಸಿಬ್ಬಂದಿಯನ್ನು ನಿರ್ವಹಿಸುವುದು ಇಲಾಖೆಗೆ ದೊಡ್ಡ ಸವಾಲಾಗಿದೆ.

ಮುಂದಿನ ಬಾರಿ ರಾಜ್ಯದಲ್ಲಿ ಎನ್‌ಡಿಎ ಸರ್ಕಾರ ಬರುತ್ತದೆ: ವಿಜಯೇಂದ್ರ

ಈ ಚುನಾವಣೆ ಫಲಿತಾಂಶ 120 ರಿಂದ 130 ಕ್ಷೇತ್ರದ ಮತದಾರರು ಕೊಟ್ಟಿರುವ ತೀರ್ಪು. ಸಿಎಂ ಡಿ.ಕೆ.ಶಿವಕುಮಾರ್ ಕಪಟ ನಾಟಕ ಆಡ್ತಿದ್ದಾರೆ

• ಉದಯವಾಹಿನಿ, ಮೈಸೂರು

1 ಕಾಂಗ್ರೆಸ್ ಸರ್ಕಾರದ ಬಣ್ಣ ಬಯಲು
2 ಮುಂದಿನ ಬಾರಿ ಎನ್‌ಡಿಎ ಸರ್ಕಾರ
3 ಕಬ್ಬಿನಿಂದ ರಾಜ್ಯಕ್ಕೆ ದೊಡ್ಡ ಬರ್ತಿದೆ

ರಾಜ್ಯದಲ್ಲಿ ಬ್ಯಾಲೆಟ್ ಪೇಪರ್ ಬಳಸಿ ಮಾಡಿದ ಚುನಾವಣೆಯಲ್ಲಿ ಕೂಡ ಕಾಂಗ್ರೆಸ್ ಸೋತಿದೆ. ಮುಂದಿನ ಬಾರಿ ರಾಜ್ಯದಲ್ಲಿ ಎನ್‌ಡಿಎ ಸರ್ಕಾರ ಬರುವುದು ಖಚಿತ ಎಂದು ಮೈಸೂರಿನಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಮಾತನಾಡಿದ ಅವರು, ಕಳೆದ ಅಕ್ಟೋಬರ್ 23 ರಂದು ವಿಧಾನ ಪರಿಷತ್ ಚುನಾವಣೆ ನಡೆಯಿತು. 4 ಕ್ಷೇತ್ರಗಳಲ್ಲಿ ಎನ್‌ಡಿಎ ಅಭ್ಯರ್ಥಿಗಳು ಗೆದ್ದಿದ್ದಾರೆ. ಆಗ್ನೇಯ ಪದವೀಧರ ಕ್ಷೇತ್ರದಲ್ಲಿ ನಮ್ಮ ಅಭ್ಯರ್ಥಿ 23 ಸಾವಿರ ಮತಗಳ ಅಂತರದಲ್ಲಿ ಗೆದ್ದಿದ್ದಾರೆ. ಪ್ರತಿಯೊಂದು ಕ್ಷೇತ್ರದಲ್ಲಿ ನಮ್ಮ ಅಭ್ಯರ್ಥಿಗಳು ವಿಜಯ ಸಾಧಿಸಿದ್ದಾರೆ. ಸೋಲಿಲ್ಲದ ಸರದಾರ ಅಂತ ಕಾಂಗ್ರೆಸ್ ಅಭ್ಯರ್ಥಿ ಮೆರೆಯುತ್ತಿದ್ದರು. ಅಂತಹವರನ್ನು 900ಕ್ಕೂ ಹೆಚ್ಚು ಮತಗಳ ಅಂತರದಲ್ಲಿ ಸೋಲಿಸಿದ್ದಾರೆ. ರಾಜ್ಯದ ಪ್ರಜ್ಞಾವಂತ ಮತದಾರರಿಗೆ ಧನ್ಯವಾದ ಅರ್ಪಿಸುತ್ತೇನೆ. ಬಿಜೆಪಿ, ಜೆಡಿಎಸ್ ಮುಖಂಡರು ಕಾರ್ಯಕರ್ತರಿಗೆ ನಾವು ಧನ್ಯವಾದ ಹೇಳುತ್ತೇನೆ ಎಂದರು.

ಈ ಫಲಿತಾಂಶ ನಾನಾ ರೀತಿಯ ವಿಶ್ಲೇಷಣೆಗೆ ಕಾರಣವಾಗಿದೆ. ರಾಜ್ಯದಲ್ಲಿ

ಉದಯವಾಹಿನಿ ಚಿತ್ರ

ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರ ಗ್ಯಾರಂಟಿಗಳ ಭ್ರಮೆಯಲ್ಲಿರುವ ಸರ್ಕಾರವಿದು. ಅಧಿಕಾರಿದ ಅಮಲಿನಲ್ಲಿ ಕಾಂಗ್ರೆಸ್ ತೇಲುತ್ತಿದೆ. ನಾಡಿನ ರೈತರ ಜೊತೆ ಚೆಲ್ಲಾಟವಾಡಿ ಒಂದೇ ಒಂದು ಕೆಲಸ ಮಾಡಿಲ್ಲ. ಬರಗಾಲದ ಪರಿಹಾರ ಕೊಡಲು ಸಾಧ್ಯವಾಗಿಲ್ಲ, ಉದ್ಯೋಗ ಕೊಡಲು ಆಗ್ತಿಲ್ಲ, ಮುಡಾ ಹಗರಣ, ವಾಲ್ಮೀಕಿ ಹಗರಣ, ಸಚಿವರ ರಾಜೀನಾಮೆಗೆ ಬಳ್ಳಾರಿ ಚಲೋ ಮಾಡಿದ್ವಿ, ಕಾಂಗ್ರೆಸ್ ಬಣ್ಣ ಬಯಲು ಮಾಡಿದ್ದೇವೆ. ನಮ್ಮ ಹೋರಾಟದ ಪರಿಣಾಮ ಜನರು ಈ ಬಾರಿ ಎನ್‌ಡಿಎ ಸರ್ಕಾರ ತರಲು ಚಿಂತನೆ ನಡೆಸಿದ್ದಾರೆ ಎಂದು ಹೇಳಿದರು.

ಈ ಚುನಾವಣೆ ಫಲಿತಾಂಶ 120 ರಿಂದ 130 ಕ್ಷೇತ್ರದ ಮತದಾರರು ಕೊಟ್ಟಿರುವ ತೀರ್ಪು. ಸಿಎಂ ಡಿ.ಕೆ.ಶಿವಕುಮಾರ್ ಕಪಟ ನಾಟಕ ಆಡ್ತಿದ್ದಾರೆ. ಕಾಂಗ್ರೆಸ್ ಸರ್ಕಾರವನ್ನು ಬುಡ ಸಮೇತ ಕಿತ್ತು ಹಾಕುವ ತೀರ್ಮಾನಕ್ಕೆ ಈಗಾಗಲೇ ಜನ ಬಂದಿದ್ದಾರೆ. ರಾಜ್ಯದ ಹಣಕಾಸಿನ ಪರಿಸ್ಥಿತಿ ಹದಗೆಟ್ಟಿದೆ.

ಬಿಜೆಪಿಗೆ ಆಶೀರ್ವಾದ ಮಾಡಲು ಮತದಾರರು ರೆಡಿಯಾಗಿದ್ದಾರೆ. ಬಿಜೆಪಿಗೂ ಜನರು ಸಂದೇಶ ಕೊಟ್ಟಿದ್ದಾರೆ. ನಿಮ್ಮ ಸಣ್ಣಪುಟ್ಟ ಗೊಂದಲ ಬದಿಗಿಟ್ಟು ಎಲ್ಲರೂ ಒಗ್ಗಟ್ಟಿನಿಂದ ಹೋಗಿ ಎಂಬ ಸಂದೇಶ ಕೊಟ್ಟಿದ್ದಾರೆ ಎಂದರು.

ಕಬ್ಬಿನಿಂದ ರಾಜ್ಯಕ್ಕೆ ದೊಡ್ಡ ಆದಾಯ ಬರ್ತಿದೆ. ಕಬ್ಬಿನ ಉಪ ಉತ್ಪನ್ನಗಳಿಂದ ಲಾಭ ಬರ್ತಿದೆ. ಪ್ರತಿ ಟನ್ ಕಬ್ಬಿಗೆ 9,234 ರೂಪಾಯಿ ರಾಜ್ಯ ಸರ್ಕಾರಕ್ಕೆ ಬರುತ್ತೆ. ಪ್ರತಿ ವರ್ಷ ರಾಜ್ಯ ಸರ್ಕಾರಕ್ಕೆ 15 ಸಾವಿರ ಕೋಟಿ ಆದಾಯ ಕಬ್ಬಿನಿಂದ ಬರ್ತಿದೆ. ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವುದು ಬಿಡಿ. ರೈತರಿಗೆ 500 ರೂಪಾಯಿ ಪ್ರೋತ್ಸಾಹ ಧನ ನೀಡಿ. ರೈತರ ಜೀವನದ ಜೊತೆ ಚೆಲ್ಲಾಟ ಆಡೋದು ಬಿಡಿ. ಕಬ್ಬು ಬೆಳೆಗಾರರ ಹಿತ ಕಾಯುವ ಕೆಲಸ ಮಾಡಿ ಎಂದು ಆಗ್ರಹಿಸಿದರು.

> ಮೋದಿ ದೇಶದಲ್ಲಿ ನಕ್ಸಲಿಸಂ ಕಿತ್ತು ಹಾಕಿದ್ದಾರೆ. ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದ್ದು ಇಂದಿರಾ ಗಾಂಧಿ. ಇದನ್ನು ದೇಶದ ಜನ ಮರೆತಿಲ್ಲ, ಪ್ರಜಾಪ್ರಭುತ್ವ ಬುಡ ಮೇಲು ಮಾಡಲು ಕಾಂಗ್ರೆಸ್ ಮುಂದಾಗಿದೆ. ಇದರ ವಿರುದ್ಧ ದೇಶಾದ್ಯಂತ ನಮ್ಮ ಪಕ್ಷ ಅಭಿಯಾನ ಮಾಡ್ತಿದೆ ಎಂದರು.
> -ಬಿ.ವೈ. ವಿಜಯೇಂದ್ರ

ಬೊಕ್ಕಸದಲ್ಲಿ ಹಣ ಇಲ್ಲ ನಮಗೆ ಸಮಯ ಕೊಡಿ

ಕಬ್ಬು ಬೆಳೆಗಾರರಿಗೆ ಸಿಹಿ ಸುದ್ದಿ ಕೊಡ್ತಾರೆ ಅಂತ ಜನ ಕಾಯ್ತಿದ್ರು, ವಿಶೇಷ ವಿಮಾನದಲ್ಲಿ ಸಿಎಂ ಹೋದ್ರು. ನನ್ನ ಕ್ಷಮಿಸಿ ಬೊಕ್ಕಸದಲ್ಲಿ ಹಣ ಇಲ್ಲ ನಮಗೆ ಸಮಯ ಕೊಡಿ ಅಂತ ಹೇಳಿದ್ರು, ಇದು ನಾಚಿಕೆಗೇಡು ಇದನ್ನು ಹೇಳಲು ಬೆಳಗಾವಿಗೆ ವಿಶೇಷ ವಿಮಾನದಲ್ಲಿ ಹೋಗಬೇಕಿತ್ತಾ? ಎಂದು ಪ್ರಶ್ನಿಸಿದರು.

ಮಿನಿ ನ್ಯೂಸ್

ಕೆರೆಗಳಲ್ಲಿ ಅನಧಿಕೃತ ಪಂಪ್‌ಸೆಟ್ ಅಳವಡಿಕೆಗೆ ಗ್ರಾಮಸ್ಥರ ಆಕ್ರೋಶ

ಉದಯವಾಹಿನಿ ಚಿತ್ರ

• ಉದಯವಾಹಿನಿ, ಶ್ರೀನಿವಾಸಪುರ

ತೀವ್ರ ನೀರಿನ ಸಮಸ್ಯೆ ಎದುರಿಸುತ್ತಿರುವ ಶ್ರೀನಿವಾಸಪುರ ತಾಲ್ಲೂಕು ಅನ್ನು ರಾಜ್ಯ ಸರ್ಕಾರವು ಬರಪೀಡಿತ ತಾಲ್ಲೂಕುಗಳ ಪಟ್ಟಿಯಲ್ಲಿ ಸೇರ್ಪಡೆ ಮಾಡಿದೆ. ತಾಲ್ಲೂಕಿನ ಕೆಲವು ಕೆರೆಗಳಲ್ಲಿ ಮಾತ್ರ ಅಲ್ಪಸ್ವಲ್ಪ ನೀರು ಉಳಿದಿದೆ. ಅನಧಿಕೃತವಾಗಿ ಪಂಪ್ ಸೆಟ್‌ಗಳನ್ನು ಅಳವಡಿಸಿ, ಈ ಅಲ್ಪಸ್ವಲ್ಪ ನೀರನ್ನು ಕೆರೆಯಿಂದ ಬರಿದು ಮಾಡಲಾಗುತ್ತಿದೆ ಎಂದು ಜನರು ದೂರಿದ್ದಾರೆ. ರಾಯಲ್ಪಾಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಸ್. ಜೀಡಿಮಾಕಲಪಲ್ಲಿ ಗ್ರಾಮದ ಕೆರೆ ಅಂಗಳದಲ್ಲಿ ಯಾವುದೇ ದಾಖಲೆಗಳಿಲ್ಲದೆ ಸುಮಾರು 8-10 ಪಂಪ್‌ಸೆಟ್‌ಗಳನ್ನು ಅಳಪಡಿಸಲಾಗಿದ್ದು, ಕೆರೆಯನ್ನು ಬರಿದು ಮಾಡಲಾಗುತ್ತಿದೆ ಎಂದು ಸಿಪಿಎಂ ಮುಖಂಡ ಪಾತಕೋಟೆ ನವೀನ್ ಕುಮಾರ್ ಆರೋಪಿಸಿದರು. ಸಾರ್ವಜನಿಕರು ಮತ್ತು ಜಾನುವಾರಗಳಿಗೆ ಅಪಾಯವಾಗುವ ಸಾಧ್ಯತೆ ಇದೆ. ವಿದ್ಯುತ್ ತಂತಿಗಳು ರಸ್ತೆ ಬದಿಯ ಗಿಡಗಳ ಮೇಲೂ ವ್ಯಾಪಿಸಿದ್ದು, ಇದರಿಂದಲೂ ಅಪಾಯಗಳು ಎದುರಾಗುವ ಸಾಧ್ಯತೆ ಇದೆ .

ಬೆಸ್ಕಾಂ ಅಧಿಕಾರಿಗಳು ಪಂಪ್‌ಸೆಟ್‌ಗಳ ಅಳವಡಿಕೆಗೆ ಕಡಿವಾಣ ಹಾಕಬೇಕು. ಗ್ರಾಮ ಪಂಚಾಯಿತಿ ಅಧಿಕಾರಿಗಳು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಅನಧಿಕೃತ ಸಂಪರ್ಕಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ನ.3 ರಂದು ಮುಖ್ಯಮಂತ್ರಿಗಳಿಂದ ವಿವಿಧ ಕಾರ್ಯಕ್ರಮಗಳಿಗೆ ಚಾಲನೆ

ಉದಯವಾಹಿನಿ ಚಿತ್ರ

• ಉದಯವಾಹಿನಿ, ರಾಮನಗರ

ನ.3 ರಂದು ಸಿಎಂ ಡಿ.ಕೆ.ಶಿವಕುಮಾರ್ ಅವರು ರಾಮನಗರ ನಗರಸಭೆ ವ್ಯಾಪ್ತಿಯಲ್ಲಿ ವಿವಿಧ ಕಾರ್ಯಕ್ರಮಗಳಿಗೆ ಚಾಲನೆ ನೀಡಲಿದ್ದಾರೆ ಎಂದು ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ, ಹೇಳಿದರು.ನಗರಸಭೆ ಕಚೇರಿಯಲ್ಲಿ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರಸಭೆ ಮೊದಲ ಮಹಡಿಯಲ್ಲಿ ನೂತನ ಸಭಾ ಭವನ, ನಗರಸಭೆ ಆವರಣದಲ್ಲಿ ಮಾಗಡಿ ಕೆಂಪೇಗೌಡ ಪ್ರತಿಮೆ ಅನಾವರಣ, ನಗರದ ಹೃದಯ ಭಾಗದಲ್ಲಿ ಕ್ಲಾಕ್ ಟವರ್ ಉದ್ಘಾಟನೆ, ಫುಡ್ ಕೋರ್ಟ್ ಸೇರಿದಂತೆ ಹಲವು ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ನಂತರ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ 11 ಸಾವಿರ ಅಸಂಘಟಿತ ಕಾರ್ಮಿಕರಿಗೆ ವಿಮಾ ಬಾಂಡ್ ವಿತರಣೆ, ಕುಶಲ ಕರ್ಮಿಗಳಿಗೆ ಕಿಟ್, ಟೀ ಅಂಗಡಿಗಳಿಗೆ ಸ್ಟೀಮರ್ ಗಳು, 2400 ಬೀದಿ ಬದಿ ವ್ಯಾಪಾರಿಗಳಿಗೆ ನೀರಿನ ಫ್ಲಾಸ್ಕ್, 670 ಜನ ಆಟೋ ಚಾಲಕರಿಗೆ ಸಮವಸ್ತ್ರ, ವಿಶ್ವಕರ್ಮ ಜನಾಂಗ ಸೇರಿದಂತೆ ಹಲವು ಕುಶಲಕರ್ಮಿಗಳಿಗೆ ಕೌಶಲ್ಯ ಕಿಟ್ ವಿತರಣೆ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು. ನಗರಸಭೆ ಮಾಜಿ ಅಧ್ಯಕ್ಷರಾದ ಬಿ.ಸಿ. ಪರ್ವತಮ್ಮ, ಪವಿತ್ರ ಸೇರಿದಂತೆ ಸದಸ್ಯರುಗಳು ಉಪಸ್ಥಿತರಿದ್ದರು.

ರಾಮನಗರ ವ್ಯಾಯಾಮ ಶಾಲೆ ತೆರೆಯುವುದೆಂದು?

• ಉದಯವಾಹಿನಿ, ರಾಮನಗರ

ನಗರದ ಜಿಲ್ಲಾ ಕ್ರೀಡಾಂಗಣದ ಆವರಣದಲ್ಲಿರುವ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವ್ಯಾಯಾಮ ಶಾಲೆ ಇದ್ದೂ ಇಲ್ಲದಂತಿದೆ. ಆಧುನಿಕ ವ್ಯಾಯಾಮ ಸಲಕರಣೆಗಳನ್ನು ಬಳಸಿ ಯುವಜನರು ವ್ಯಾಯಾಮ ಮಾಡಿ ತಮ್ಮ ದೇಹವನ್ನು ಫಿಟ್ ಆಗಿ ಇಟ್ಟುಕೊಳ್ಳಲು ಆಸರೆಯಾಗಬೇಕಿದ್ದ ಈ ಜಿಮ್, ಕಳೆದ ಆರು ವರ್ಷದಿಂದ ಬಂದ್ ಆಗಿದೆ. ಪ್ರತಿ ಜಿಲ್ಲೆಯ ಜಿಲ್ಲಾ ಕ್ರೀಡಾಂಗಣದಲ್ಲಿ ಸಾರ್ವಜನಿಕರ ಬಳಕೆಗಾಗಿ ಸುಸಜ್ಜಿತ ವಾದ ಜಿಮ್ ಇರುವುದು ಸಾಮಾನ್ಯ. ಸ್ಥಳೀಯ ಕ್ರೀಡಾಪಟುಗಳು, ಯುವ ಜನರು ಸೇರಿದಂತೆ ಸಾರ್ವಜನಿಕರು ಅಲ್ಲಿಗೆ ಬಂದು ನಿತ್ಯ ದೈಹಿಕ ಕಸರತ್ತು ಮಾಡಿ ತಮ್ಮ ದೇಹವನ್ನು ಗಟ್ಟಿಮುಟ್ಟಾಗಿ ಇಟ್ಟುಕೊಳ್ಳುತ್ತಾರೆ. ಆದರೆ, ರಾಮನಗರ ಜನರಿಗೆ ಅಂತಹ ಭಾಗ್ಯವಿಲ್ಲ. ಜೂನಿಯರ್ ಕಾಲೇಜು ಮೈದಾನದ ಮೂಲಕ ಕ್ರೀಡಾಂಗಣ ಪ್ರವೇಶಿಸುವಾಗ ಬಲಕ್ಕೆ ಇರುವ ವ್ಯಾಯಾಮ ಶಾಲೆಯ ಗೇಟ್‌ಗೆ ಬಿದ್ದಿರುವ ಬೀಗ ತುಕ್ಕು ಹಿಡಿದಿದೆ. ಶಾಲಾವರಣದಲ್ಲಿ ಹುಲ್ಲು ಸೇರಿದಂತೆ ಕಳೆಗಳು ಬೆಳೆದಿದ್ದು, ಇಡೀ ಕಟ್ಟಡದ ಒಂದು ರೀತಿಯಲ್ಲಿ ಪಾಳು ಬಿದ್ದಂತಿದೆ. ಯಾವಾಗ ಜಿಮ್ ತೆರೆಯುತ್ತದೊ ಎಂದು ಯುವಜನರು ಕಾಯುತ್ತಿದ್ದಾರೆ.

ಕೇಳುವವರೇ ಇಲ್ಲ: ಜಿಮ್ ಸುಮಾರು ಆರು ವರ್ಷದಿಂದ ಮುಚ್ಚಿದರೂ ಕೇಳುವವರೇ ಇಲ್ಲವಾಗಿದೆ. ಜನಪ್ರತಿನಿಧಿಗಳಿಗೂ ಇದರ ಬಗ್ಗೆ ಕಾಳಜಿ ಇಲ್ಲವಾಗಿದೆ. ವಿಧಿ ಇಲ್ಲದೆ ಕ್ರೀಡಾಪಟುಗಳು ಮತ್ತು ಯುವಜನರು ಖಾಸಗಿ ಜಿಮ್‌ಗೆ ಹೋಗುತ್ತಿದ್ದಾರೆ' ಎಂದು ಕ್ರೀಡಾಂಗಣಕ್ಕೆ ವಾಯುವಿಹಾರಕ್ಕೆ ಬಂದಿದ್ದ ಸುರೇಶ್ ಳಿಸಿದರು. ವರ್ಷದ ಹಿಂದೆ ಕ್ರೀಡಾಂಗಣದಲ್ಲಿ ತೆರೆದ ಜಿಮ್ ಅಳವಡಿಸಲಾಗಿದೆ.

ಉದಯವಾಹಿನಿ ಚಿತ್ರ

ಮಂಡ್ಯ ಜಿಲ್ಲೆಯ ಅಂತಿಮ ಮತದಾರರ ಪಟ್ಟಿ ಪ್ರಕಟ

• ಉದಯವಾಹಿನಿ, ಮಂಡ್ಯ


ಉದಯವಾಹಿನಿ ಚಿತ್ರ

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮಂಡ್ಯ ಜಿಲ್ಲೆಯಲ್ಲಿ ಕೈಗೊಂಡಿದ್ದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್.ಐ.ಆರ್) ಪ್ರಕ್ರಿಯೆ ಪೂರ್ಣಗೊಂಡಿದ್ದು, ಅ.27ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದೆ. ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 14,27,462 ಮತದಾರರಿದ್ದಾರೆ ಎಂದು ಜಿಲ್ಲಾಧಿಕಾರಿ ಕುಮಾರ ತಿಳಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ ಸಂಬಂಧ ಮಂಗಳವಾರ ನಡೆದ ರಾಜಕೀಯ ಪಕ್ಷಗಳ ಸಭೆಯಲ್ಲಿ ಅವರು ವಿವರ ನೀಡಿದರು.

ಆಗಸ್ಟ್ 24ರಂದು ಪ್ರಕಟಿಸಿದ್ದ ಕರಡು ಮತದಾರರ ಪಟ್ಟಿಯಲ್ಲಿ 14,08,364 ಮತದಾರರಿದ್ದರು. ಕರಡು ಪಟ್ಟಿ ಪ್ರಕಟಿಸಿದ ಬಳಿಕ ನಕ್ಷೆ ಹೊಂದಾಣಿಕೆಯಾಗದ ಪ್ರಕರಣಗಳು ಹಾಗೂ ತಾರ್ಕಿಕ ವ್ಯತ್ಯಾಸಗಳ ಹಿನ್ನೆಲೆಯಲ್ಲಿ ಒಟ್ಟು 1,50,269 ಮತದಾರರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗಿತ್ತು. ಹಕ್ಕು ಮತ್ತು ಆಕ್ಷೇಪಣೆಗಳನ್ನು ಪರಿಶೀಲಿಸಿ, ನಿಯಮಾನುಸಾರ ವಿಲೇವಾರಿ ಮಾಡಿದ ಬಳಿಕ ಅಂತಿಮ ಪಟ್ಟಿ ಪ್ರಕಟಿಸಲಾಗಿದೆ. ಎಸ್‌ಐಆರ್ ಪ್ರಕ್ರಿಯೆಯ ಅವಧಿಯಲ್ಲಿ ಮತದಾರರ ಪಟ್ಟಿಯಿಂದ ಹೆಸರುಗಳನ್ನು ಕೈಬಿಡುವಿಕೆ, ಹೊಸ ಮತದಾರರ ಸೇರ್ಪಡೆ ಹಾಗೂ ಮತದಾರರ ವಿವರಗಳ ತಿದ್ದುಪಡಿ ಸೇರಿದಂತೆ ಅಗತ್ಯ ಪರಿಷ್ಕರಣೆಗಳನ್ನು ಕೈಗೊಳ್ಳಲಾಗಿದೆ ಎಂದರು. ಜಿಲ್ಲೆಯಲ್ಲಿ 15,75,849 ಒಟ್ಟು ಮತದಾರರಿದ್ದು, ಅವರಲ್ಲಿ 14,08,364 ಗಣತಿ ನಮೂನೆಗಳ ಗಣಕೀಕರಣ (ಶೇ 89.37) ಕಾರ್ಯ ಪೂರ್ಣಗೊಂಡಿತ್ತು. ಸಾವು, ಗೈರು, ಶಾಶ್ವತ ಸ್ಥಳಾಂತರ, ಡಬಲ್ ನೋಂದಣಿಯಾದವರು, ನಮೂನೆ ಹಿಂದಿರುಗಿಸಲು ತಿರಸ್ಕರಿಸಿದವರು ಸೇರಿದಂತೆ ಒಟ್ಟು 1,67,485 ಮತದಾರರನ್ನು ಕರಡು ಮತದಾರರ ಪಟ್ಟಿಯಿಂದ ಕೈಬಿಡಲಾಗಿತ್ತು.

> ಜಿಲ್ಲೆಯಲ್ಲಿ 24,289 ಯುವ ಮತದಾರರು, 20,692 ವಿಕಲಚೇತನ ಮತದಾರರು ಹಾಗೂ 85 ವರ್ಷ ಮೇಲ್ಪಟ್ಟ 16,263 ಮತದಾರರಿದ್ದಾರೆ. 580 ಸೇವಾ ಮತದಾರರು ಮತ್ತು ಐವರು ಅನಿವಾಸಿ ಭಾರತೀಯ ಮತದಾರರು ಅಂತಿಮ ಪಟ್ಟಿಯಲ್ಲಿದ್ದಾರೆ.

ಶೌಚಾಲಯದಲ್ಲಿ ಅಡಗಿದ್ದ ಕೊಳಕು ಮಂಡಲ ಹಾವು ರಕ್ಷಣೆ

• ಉದಯವಾಹಿನಿ, ಮೈಸೂರು

ಶೌಚಾಲಯದಲ್ಲಿ ಅಡಗಿದ್ದ ಕೊಳಕು ಮಂಡಲ ಹಾವನ್ನು ರಕ್ಷಣೆ ಮಾಡಿ, ಅದರ ನೈಸರ್ಗಿಕ ಸ್ಥಾನಕ್ಕೆ ಬಿಡಲಾಗಿದೆ. ಮೈಸೂರಿನ ಹಳೆ ಮಾನಂದವಾಡಿ ರಸ್ತೆಯಲ್ಲಿರುವ ಶ್ರೀರಾಂಪುರದ ನಿವಾಸಿ ಕೃಷ್ಣಪ್ರಸಾದ್ ಅವರು, ಶೌಚಾಲಯದಲ್ಲಿ 9 ಗಂಟೆಗೆ ಹಾವನ್ನು ನೋಡಿ ಕೂಡಲೇ ಸ್ನೇಕ್ ಶಿವು ಅವರಿಗೆ ಕರೆ ಮಾಡಿದ್ದರು. ಸ್ಥಳಕ್ಕಾಗಮಿಸಿದ ಸ್ನೇಕ್ ಶಿವು ಅವರು, ಶೌಚಾಲಯದಲ್ಲಿ ಅಡಗಿದ್ದ ಕೊಳಕು ಮಂಡಲ ಹಾವನ್ನು ಸ್ನೇಕ್ ಹುಕ್ ಬಳಸಿ ಅತ್ಯಂತ ಸುಲಭವಾಗಿ ಹಾಗೂ ಸುರಕ್ಷಿತವಾಗಿ ಸೆರೆಹಿಡಿದರು. ನಂತರ ಅದನ್ನು ಅರಣ್ಯಕ್ಕೆ ಬಿಟ್ಟಿದ್ದಾರೆ.

ಈ ಹಾವಿಗೆ ಕೊಳಕು ಮಂಡಲ ಎಂದು ಹೆಸರು ಬರಲು ಕಾರಣ ಈ ಹಾವಿನ ವಿಷದಲ್ಲಿ ಹಿಮೋಟಾಕ್ಸಿನ್‌ಎಂಬ ಅಂಶವಿರುತ್ತದೆ. ಇದು ನಮ್ಮ ರಕ್ತ ಪರಿಚಲನಾ ವ್ಯವಸ್ಥೆಯ ಮೇಲೆ ತೀವ್ರ ಪರಿಣಾಮ ಬೀರುತ್ತದೆ.

ಹಾವು ಕಡಿದ ಭಾಗದ ಕಣಗಳು ಹಾಗೂ ಚರ್ಮವು ಕೊಳೆಯಲು ಪ್ರಾರಂಭಿಸುವುದರಿಂದ, ಇದಕ್ಕೆ ಕೊಳಕು ಮಂಡಲ ಹಾವು ಎಂದು ಹೆಸರು ಬಂದಿದೆ ಎಂದು ಸ್ನೇಕ್ ಶಿವು ತಿಳಿಸಿದ್ದಾರೆ. ಪ್ರಸ್ತುತ ಹಾವುಗಳ ಚಲನವಲನ ಹೆಚ್ಚಾಗಲು ಮತ್ತು ಶೌಚಾಲಯದಲ್ಲಿ ಕಾಣಿಸಿಕೊಳ್ಳಲು ಕಾರಣವೇ ಸಂತಾನೋತ್ಪತ್ತಿಯ ಸಮಯ. ಈಗ ಹಾವುಗಳ ಮಿಲನದ ಅವಧಿ ಪ್ರಾರಂಭವಾಗಿರುವುದರಿಂದ ಹಾವುಗಳ ಸಂಚಾರ ಮತ್ತು ಚಲನವಲನ ಹೆಚ್ಚಾಗಿರುತ್ತದೆ ಎಂದು ಅವರು ಹೇಳಿದ್ದಾರೆ.

ಉದಯವಾಹಿನಿ ಚಿತ್ರ

ತಣ್ಣನೆಯ ವಾತಾವರಣ: ಶೌಚಾಲಯಗಳು ಸಾಮಾನ್ಯವಾಗಿ ತಂಪಾದ ವಾತಾವರಣವನ್ನು ಹೊಂದಿರುವುದರಿಂದ ಹಾವುಗಳು ಇಲ್ಲಿಗೆ ಬೇಗ ಆಕರ್ಷಿತಗೊಳ್ಳುತ್ತವೆ ಎಂದಿದ್ದಾರೆ.

ಮರಿಗಳಿಗೆ ಜನ್ಮ ನೀಡುತ್ತವೆ

ಈ ಹಾವಿನ ಮತ್ತೊಂದು ಪ್ರಮುಖ ವಿಶೇಷತೆ ಕೊಳಕು ಮಂಡಲ ಹಾವುಗಳು ಇತರೆ ಹೆಚ್ಚಿನ ಹಾವುಗಳಂತೆ ಮೊಟ್ಟೆ ಇಡುವುದಿಲ್ಲ, ಇವು ನೇರವಾಗಿ ಮರಿಗಳಿಗೆ ಜನ್ಮ ನೀಡುತ್ತವೆ ಎಂದು ಸ್ನೇಕ್ ಶಿವು ಮಾಹಿತಿ ನೀಡಿದ್ದಾರೆ.

ರಂಗಭೂಮಿಗೆ ಸಿಜಿಕೆ ಕೊಡುಗೆ ಅಪಾರ ಎಂದು ಹೇಳಿದರು

ಉದಯವಾಹಿನಿ ಚಿತ್ರ

• ಉದಯವಾಹಿನಿ, ಮಂಡ್ಯ

ಸಮಾಜಕ್ಕೆ ಉತ್ತಮವಾದ ಸಂದೇಶ ನೀಡುವ ಕೆಲಸವನ್ನು ನೀನಾಸಂ ತಿರುಗಾಟ ನಾಟಕಗಳು ಮಾಡುತ್ತಿವೆ. ರಂಗಭೂಮಿಗೆ ಸಿಜಿಕೆ ಕೊಡುಗೆ ಅಪಾರ. ಅವರನ್ನು ಸ್ಮರಿಸಬೇಕಿದೆ ಎಂದು ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಹೇಳಿದರು. ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಭೂಮಿ ಬೆಳಗು ಸಾಂಸ್ಕೃತಿಕ ಸಂಘ (ಮಂಗಲ), ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ರಂಗಕರ್ಮಿ ಸಿ.ಜಿ.ಕೆ. ಅವರಿಗೆ ರಂಗನಮನ ಹಾಗೂ ನೀನಾಸಂ ತಿರುಗಾಟದ ನಾಟಕಗಳ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ನಾಟಕಗಳ ಬಗ್ಗೆ ತಮಗೆ ಅಪಾರ ಆಸಕ್ತಿಯಿದ್ದು, ಸಮಯದ ಅಭಾವದಿಂದ ಇಂತಹ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ಕನ್ನಡ ರಂಗಭೂಮಿ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಬಗ್ಗೆ ವಿಶೇಷ ಒಲವಿದೆ. ಭೂಮಿ ಬೆಳಗು ಸಾಂಸ್ಕೃತಿಕ ಸಂಘದ ಅಧ್ಯಕ್ಷ ಮಂಗಲ ಯೋಗೀಶ್ ಅವರು ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸುತ್ತಿರುವುದು ಸಂತಸದ ಸಂಗತಿ ಎಂದು ಶ್ಲಾಘಿಸಿದರು. ಸಮಾಜಮುಖಿ ಕಾರ್ಯಗಳಿಗೆ ಸದಾ ಪ್ರೋತ್ಸಾಹ ಮತ್ತು ಸಹಕಾರ ನೀಡಲು ಸಿದ್ಧ. ಇಂತಹ ಕಾರ್ಯಕ್ರಮಗಳು ಮುಂದಿನ ದಿನಗಳಲ್ಲಿಯೂ ಹೆಚ್ಚಾಗಿ ನಡೆಯಬೇಕು. ಕನ್ನಡ ರಂಗಭೂಮಿ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯಬೇಕು ಎಂದು ಮನವಿ ಮಾಡಿದರು.

ಜನತಾ ಶಿಕ್ಷಣ ಟ್ರಸ್ಟ್ ಅಧ್ಯಕ್ಷ ಕೆ.ಎಸ್.ವಿಜಯ್ ಆನಂದ್, ನಾಟಕಗಳು ಜನರಲ್ಲಿ ಜಾಗೃತಿ ಮೂಡಿಸುತ್ತವೆ. ನಾಟಕೋತ್ಸವದಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ಕಲಾವಿದರನ್ನು ಪ್ರೋತ್ಸಾಹಿಸುವುದರ ಜೊತೆಗೆ ಕನ್ನಡ ರಂಗಭೂಮಿಯ ಬೆಳವಣಿಗೆಗೆ ಸಹಕಾರಿ ಎಂದರು.

ಶೋಷಣೆ ರಹಿತ ಬಾಲ್ಯ ಸಮಾಜದ ಹೊಣೆ -ನ್ಯಾಯಾಧೀಶ ಟಿ.ಪಿ ರಾಮಲಿಂಗೇಗೌಡ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಮಕ್ಕಳು ದೇಶದ ಭವಿಷ್ಯ ಮಾತ್ರವಲ್ಲ, ಇಂದಿನ ಸಮಾಜದ ಅಮೂಲ್ಯ ಸಂಪತ್ತು. ಅವರಿಗೆ ಪ್ರೀತಿ, ಗೌರವ, ಶಿಕ್ಷಣ, ಆರೋಗ್ಯ ಹಾಗೂ ಸುರಕ್ಷತೆಯೊಂದಿಗೆ ಬೆಳೆಯುವ ಹಕ್ಕಿದೆ. ಭಯಮುಕ್ತ ಹಾಗೂ ಶೋಷಣೆರಹಿತ ಸುರಕ್ಷಿತ ಬಾಲ್ಯ ಒದಗಿಸುವುದು ಸಮಾಜದ ಹೊಣೆ ಎಂದು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಟಿ.ಪಿ ರಾಮಲಿಂಗೇಗೌಡ ತಿಳಿಸಿದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪೊಲೀಸ್ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ವಕೀಲರ ಸಂಘ, ಶಿಕ್ಷಣ ಇಲಾಖೆ,

ಉದಯವಾಹಿನಿ ಚಿತ್ರ

ಮಕ್ಕಳ ಕಲ್ಯಾಣ ಸಮಿತಿ ಆಶ್ರಯದಲ್ಲಿ ನಗರದ ಅಗಲಗುರ್ಕಿಯ ಬಿಜಿಎಸ್ ಶಾಲೆಯಲ್ಲಿ ಮಂಗಳವಾರ ಆಯೋಜಿಸಿದ್ದ ಸುರಕ್ಷಿತ ಬಾಲ್ಯ ಅಭಿಯಾನ, ಪೋಕ್ಸೊ ಕಾಯ್ದೆಯ ಕಾನೂನು ಅರಿವು' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಮಕ್ಕಳು ಶಾಲೆಗೆ ಭಯದಿಂದ ಬರದೆ ಸಂತೋಷದಿಂದ ಬರಬೇಕು. ಕಲಿಯುವಾಗ ಆತಂಕವಿರದೆ ಕುತೂಹಲ ಇರಬೇಕು. ಮನೆ, ಶಾಲೆ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ರೀತಿಯ ದೈಹಿಕ ಅಥವಾ ಮಾನಸಿಕ ಕಿರುಕುಳ ಇರಬಾರದು. ಪ್ರತಿ ಮಗುವಿಗೂ ತನ್ನದೇ ಆದ ಖಾಸಗೀತನದ ಹಕ್ಕಿದೆ. ಪ್ರತಿಯೊಬ್ಬರೂ ಪರಸ್ಪರ ಅದನ್ನು ಗೌರವಿಸಬೇಕು ಮತ್ತು ರಕ್ಷಿಸಬೇಕು ಎಂದರು.ದೈಹಿಕ ಗಾಯ ಅಥವಾ ನೋವು ಕಾಲಕ್ರಮೇಣ ವಾಸಿಯಾಗುತ್ತದೆ. ಆದರೆ ಮನಸ್ಸಿನ ಮೇಲಾಗುವ ಗಾಯಗಳು, ಬಾಡಿ ಶೇಮಿಂಗ್, ನಿಂದನೆ ಮುಂತಾದ ಮಾನಸಿಕ ಕಿರುಕುಳದ ನೋವುಗಳು ಬೇಗ ವಾಸಿ ಆಗುವುದಿಲ್ಲ ಎಂದರು. ಈ ರೀತಿಯ ನಿಂದನೆಗಳನ್ನು ಹಾಗೂ ಖಾಸಗಿ ಅಂಗಗಳನ್ನು ಇತರ ವ್ಯಕ್ತಿಗಳು ಸ್ಪರ್ಶಿಸುವುದನ್ನು ಕುಟುಂಬದ ಸದಸ್ಯರಿಗೆ, ಶಿಕ್ಷಕರಿಗೆ, ಆತ್ಮೀಯರಿಗೆ ಅಥವಾ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಗೆ ತಿಳಿಸುವ ಮೂಲಕ ನ್ಯಾಯ ಪಡೆದುಕೊಳ್ಳುವ ಮನೋಭಾವನೆಯನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ಈ ವಿಚಾರವನ್ನು ಮುಕ್ತವಾಗಿ ಚರ್ಚಿಸುವುದರಿಂದ ಮಾತ್ರ ತಪ್ಪಿತಸ್ಥರಿಗೆ ಶಿಕ್ಷೆ ನೀಡಲು ಸಾಧ್ಯ ಎಂದರು. ಪೋಕ್ಸೊ ಕಾಯ್ದೆಯು ಹೆಣ್ಣು ಮತ್ತು ಗಂಡು ಮಕ್ಕಳನ್ನು ಲೈಂಗಿಕ ದೌರ್ಜನ್ಯಗಳಿಂದ ರಕ್ಷಿಸುತ್ತದೆ.

ಸಕಾಲಕ್ಕೆ ಸಿಗದ ಆಂಬುಲೆನ್ಸ್; ರೋಗಿಗಳ ಪರದಾಟ

ಉದಯವಾಹಿನಿ ಚಿತ್ರ

• ಉದಯವಾಹಿನಿ, ಕುಣಿಗಲ್

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯು 2 ಕೋಟಿ ವೆಚ್ಚದಲ್ಲಿ ಆಧುನೀಕರಣಗೊಳ್ಳುತ್ತಿದ್ದರೂ, ಆಂಬುಲೆನ್ಸ್ ಅವ್ಯವಸ್ಥೆಯಿಂದ ಜನರು ಪರದಾಡುತ್ತಿದ್ದಾರೆ.

ತಾಲ್ಲೂಕು ಕೇಂದ್ರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಗಂಭೀರ ರೋಗಗಳಿಂದ ಬಳಲುವವರು, ರಸ್ತೆ ಅಪಘಾತದಲ್ಲಿ ಗಾಯಗೊಂಡಂತಹ ಗಾಯಾಳುಗಳಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ತುಮಕೂರು, ಬೆಂಗಳೂರು ಅಥವಾ ಆದಿಚುಂಚನಗಿರಿ ಆಸ್ಪತ್ರೆಗೆ ತುರ್ತಾಗಿ ಕಳಿಸಿಕೊಡಲಾಗುತ್ತದೆ. ಆದರೆ ಆಂಬುಲೆನ್ಸ್ ಲಭ್ಯತೆ ಇದ್ದು, ಇಲ್ಲದಂತಾಗಿದೆ. ಸಹಾಯವಾಣಿಗೆ ಕರೆ ಮಾಡಿದರೆ ಸಮಂಜಸ ಉತ್ತರವಾಗಲಿ, ವಾಹನ ವ್ಯವಸ್ಥೆಯಾಗಲಿ ಆಗುತ್ತಿಲ್ಲ ಎಂದು ಬೇಗೂರು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ನಾಗಾನಂದ ದೂರಿದ್ದಾರೆ. ನಮ್ಮೂರಿನ 80 ವರ್ಷದ ಹನುಮಂತಪ್ಪ ಈಚೆಗಷ್ಟೇ ಅಸ್ವಸ್ಥಗೊಂಡರು. ತಕ್ಷಣವೇ ತುರ್ತು ಚಿಕಿತ್ಸೆಗೆಂದು ಕುಣಿಗಲ್‌ನ ಸಾರ್ವಜನಿಕ ಆಸ್ಪತ್ರೆಗೆ ಕರೆತಂದಿದ್ದು, ಪ್ರಥಮ ಚಿಕಿತ್ಸೆ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಚುಂಚನಗಿರಿ ಸೇರಿದಂತೆ ಇತರೆ ದೊಡ್ಡ ಆಸ್ಪತ್ರೆಗೆ ಕರೆದೊಯ್ಯುವಂತೆ ವೈದ್ಯರು ಸೂಚಿಸಿದರು. 108 ವಾಹನಕ್ಕೆ ಕರೆ ಮಾಡಿದರೆ ಸ್ಪಷ್ಟ ಉತ್ತರ ಸಿಗಲಿಲ್ಲ. ವಾಹನ ಇಲ್ಲದ ಕಾರಣ ಕಳಿಸಲಾಗದು ಎಂದರು. ಇದು ಒಬ್ಬರ ಕಥೆ ಅಲ್ಲ, ಈಚೆಗೆ ಸಾರ್ವಜನಿಕ ಆಸ್ಪತ್ರೆಗೆ ರೋಗಿಗಳನ್ನು ಕರೆತಂದ ಹಲವರ ವ್ಯಥೆ' ಸ್ಥಳೀಯ ಸಾರ್ವಜನಿಕ ಆಸ್ಪತ್ರೆಯಲ್ಲಿ ನಾಲ್ಕು ತುರ್ತು ಚಿಕಿತ್ಸಾ ವಾಹನಗಳಿದ್ದು, ಒಂದು ವಾಹನ ಸ್ಕ್ರಾಪ್‌ಗೆ, ಮತ್ತೊಂದು ವಾಹನ ತಾಂತ್ರಿಕ ತೊಂದರೆಯಿಂದ ಕೆಟ್ಟು ನಿಂತಿದ್ದು, ಒಂದು ವಾಹನವನ್ನು ಹುಲಿಯೂರುದುರ್ಗ ಆಸ್ಪತ್ರೆಗೆಕೊಡಲಾಗಿದೆ.

ಜ್ಞಾನೇಶ್ ರಾಜೀನಾಮೆ ನೀಡುವವರೆಗೂ ಹೋರಾಟ: ದೀಪ್ತಿ ಮೇರಿ ವರ್ಗೀಸ್

ಕೋಲಾರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಎಐಸಿಸಿ ವೀಕ್ಷಕಿ ದೀಪ್ತಿ ಮೇರಿ ವರ್ಗೀಸ್ ಮಾತನಾಡಿದರು

• ಉದಯವಾಹಿನಿ, ಕೋಲಾರ

1 ದೇಶದಾದ್ಯಂತ ಪ್ರಜಾಪ್ರಭುತ್ವ ಉಳಿಸಿ ಆಂದೋಲನ
2 ನ.1 ರಂದು ದೆಹಲಿಯಲ್ಲಿ ಬೃಹತ್ ರ‍್ಯಾಲಿ
3 ಮತದಾರರ ಪಟ್ಟಿಯ ದುರ್ಬಳಕೆ

ಮುಂಬರುವ ಚುನಾವಣೆಗಳಲ್ಲಿ ಬಿಜೆಪಿಗೆ ಸೋಲಿನ ಭಯ ಕಾಡುತ್ತಿದ್ದು, ದೇಶದ ನಾಗರಿಕರ ಮತದಾನದ ಹಕ್ಕನ್ನು ಅಕ್ರಮವಾಗಿ ಕಿತ್ತುಕೊಳ್ಳುತ್ತಿದೆ ಎಂದು ಎಐಸಿಸಿ ವೀಕ್ಷಕಿ ದೀಪ್ತಿ ಮೇರಿ ವರ್ಗೀಸ್ ಆರೋಪಿಸಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ದೇಶದಲ್ಲಿ ಸುಮಾರು 13 ಕೋಟಿ ಮತದಾರರ ಹೆಸರನ್ನು ಮತದಾರರ ಪಟ್ಟಿಯಿಂದ ಅಕ್ರಮವಾಗಿ ತೆಗೆದುಹಾಕಿದ್ದು, ಪ್ರಜಾಪ್ರಭುತ್ವ ಮತ್ತು ಜನರ ಮತದಾನದ ಹಕ್ಕು ರಕ್ಷಣೆಗಾಗಿ ಕಾಂಗ್ರೆಸ್ ಪಕ್ಷ ದೇಶದಾದ್ಯಂತ ಪ್ರಜಾಪ್ರಭುತ್ವ ಉಳಿಸಿ ಆಂದೋಲನ ಹಾಗೂ ವೋಟ್ ಬಚಾವೋ ದೇಶ್ ಬಚಾವೋ ಜನಾಂದೋಲನ ಹಮ್ಮಿಕೊಂಡಿದೆ' ಎಂದರು. ಮತದಾನದ ಹಕ್ಕು ಕಿತ್ತುಕೊಳ್ಳುತ್ತಿರುವ ಕೇಂದ್ರ ಸರ್ಕಾರ ಹಾಗೂ ಕೇಂದ್ರ ಚುನಾವಣಾ ಆಯೋಗದ ವಿರುದ್ಧ ನ.1 ರಂದು ದೆಹಲಿಯಲ್ಲಿ ಬೃಹತ್ ರ‍್ಯಾಲಿ ಹಾಗೂ ನ. 25 ರಂದು ದೇಶದಾದ್ಯಂತ ಲಕ್ಷಾಂತರ ಕಾರ್ಯಕರ್ತರ ಭಾಗವಹಿಸುವಿಕೆಯೊಂದಿಗೆ

ಉದಯವಾಹಿನಿ ಚಿತ್ರ

ಬೃಹತ್ ರ‍್ಯಾಲಿ ನಡೆಯಲಿದೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ರಾಜೀನಾಮೆ ನೀಡುವವರೆಗೆ ಬೀದಿಗಿಳಿದು ಹೋರಾಟ ಮುಂದುವರಿಸಲಾಗುವುದು ಎಂದು ಸ್ಪಷ್ಟಪಡಿಸಿದರು. ಮತದಾರರ ಪಟ್ಟಿಯ ದುರ್ಬಳಕೆ ಹಾಗೂ ಅಕ್ರಮ ಮೊದಲು ಬೆಳಕಿಗೆ ಬಂದಿದ್ದೇ ಕರ್ನಾಟಕದ ಮಹಾದೇವಪುರ ಕ್ಷೇತ್ರದಲ್ಲಿ. ಅಲ್ಲಿ 1 ಲಕ್ಷಕ್ಕೂ ಅಧಿಕ ಮತಗಳನ್ನು ಅಕ್ರಮವಾಗಿ ತೆಗೆದುಹಾಕಲಾಗಿತ್ತು. ಆದಾದ ಬಳಿಕ ಮಹಾರಾಷ್ಟ್ರ, ಹರಿಯಾಣ, ಪಶ್ಚಿಮ ಬಂಗಾಳ ಚುನಾವಣೆ ಸಂದರ್ಭದಲ್ಲೂ ಈ ಅಕ್ರಮ ಮುಂದುವರಿಯಿತು. ಈ ಎಲ್ಲಾ ಅಕ್ರಮಗಳಿಗೆ ಸೂಕ್ತ ಸಾಕ್ಷಾಧಾರಗಳನ್ನು ಮಾಧ್ಯಮಗಳ ಮುಂದೆ ರಾಹುಲ್ ಗಾಂಧಿ ಬಹಿರಂಗಪಡಿಸಿದ್ದರೂ, ಚುನಾವಣಾ ಆಯೋಗ ಕಣ್ಣು ಮುಚ್ಚಿ ಕುಳಿತಿದೆ ಎಂದು ದೂರಿದರು. ಜ್ಞಾನೇಶ್ ಕುಮಾರ್ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿಲ್ಲ;

> ಬಾಂಗ್ಲಾದೇಶಿಯರು ಸೇರಿದಂತೆ ಅಕ್ರಮ ವಲಸಿಗರು ಮತ್ತು ಮೃತ ಮತದಾರರ ಹೆಸರನ್ನು ಪಟ್ಟಿಯಿಂದ ತೆರವುಗೊಳಿಸುವ ಕಾರ್ಯ ನಡೆದಿದೆ ಎಂಬ ಪ್ರಶ್ನೆಗೆ, ಒಂದು ವೇಳೆ ಬಾಂಗ್ಲಾದೇಶಿ ಅಕ್ರಮ ವಲಸಿಗರಿದ್ದರೆ ಆಕ್ಷೇಪವಿಲ್ಲ, ಅವರ ಹೆಸರನ್ನು ತೆರವುಗೊಳಿಸಲಿ. ಆದರೆ, ನಿರ್ದಿಷ್ಟ ಧರ್ಮದ ಮತಗಳನ್ನು ಅಳಿಸಿಹಾಕುವ ಹುನ್ನಾರ ನಡೆದಿದೆ' ಎಂದು ಹೇಳಿದರು.

ಬದಲಾಗಿ ಕೇಂದ್ರ ಬಿಜೆಪಿ ಸರ್ಕಾರದ ಕೈಗೊಂಬೆಯಾಗಿದ್ದಾರೆ. ಫಾರಂ ಸಂಖ್ಯೆ 6ರ ತಿದ್ದುಪಡಿ ಸೇರಿದಂತೆ ಹಲವು ನಿರ್ಧಾರಗಳಿಗೆ ಚುನಾವಣಾ ಆಯೋಗದ ಇಬ್ಬರು ಆಯುಕ್ತರೇ 14 ಬಾರಿ ವಿರೋಧ ವ್ಯಕ್ತಪಡಿಸಿದ್ದಾರೆ. ಸಂಸತ್ತಿನ ಗಮನಕ್ಕೆ ತರದೆ ಮಾಡಲಾದ ಬದಲಾವಣೆಗಳನ್ನು ಸುಪ್ರೀಂ ಕೋರ್ಟ್ ಕೂಡ ಅಮಾನ್ಯಗೊಳಿಸಿದೆ. ಆದ್ದರಿಂದ, ಅಕ್ರಮಗಳಿಗೆ ಹೊಣೆ ಹೊತ್ತು ಮುಖ್ಯ ಚುನಾವಣಾ ಆಯುಕ್ತ ತಕ್ಷಣವೇ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ವಿರೋಧ ಪಕ್ಷವಾಗಿ ಕಾಂಗ್ರೆಸ್ ಹೋರಾಡುತ್ತಿದ್ದು, ಮತದಾನದ ಹಕ್ಕು ಕಳೆದುಕೊಂಡ ಸಾಮಾನ್ಯ ಜನರು ಏಕೆ ಪ್ರತಿಭಟಿಸುತ್ತಿಲ್ಲ ಎಂಬ ಪ್ರಶ್ನೆಗೆ, ಅನ್ಯಾಯಕ್ಕೊಳಗಾದ ಜನರೇ ನಮ್ಮನ್ನು ಮೊದಲು ಸಂಪರ್ಕಿಸಿದರು, ನಂತರವೇ ನಮಗೆ ಈ ಅಕ್ರಮದ ವಿಚಾರ ತಿಳಿಯಿತು. ಜನರು ಧ್ವನಿ ಎತ್ತುತ್ತಿಲ್ಲ ಎಂಬುದು ತಪ್ಪು ಅಭಿಪ್ರಾಯ. ರಾಹುಲ್ ಗಾಂಧಿ ಸಾಕ್ಷಾಧಾರಗಳೊಂದಿಗೆ ಮಾಧ್ಯಮಗಳ ಮುಂದೆ ವಿಷಯ ಮಂಡಿಸಿದ ಮೇಲೂ ಚುನಾವಣಾ ಆಯೋಗ ಮೌನ ವಹಿಸಿದಾಗ, ಬೀದಿಗಿಳಿದು ಹೋರಾಡುವುದು ಅನಿವಾರ್ಯವಾಯಿತು' ಎಂದರು. ವಿಧಾನ ಪರಿಷತ್ ಸದಸ್ಯ ಎಂ.ಎಲ್.ಅನಿಲ್ ಕುಮಾರ್, ಕೆಪಿಸಿಸಿ ಪದಾಧಿಕಾರಿ ಮಧುಸೂದನ ಮೇಸ್ತ್ರಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮ್ಯಾಕಲ ನಾರಾಯಣಸ್ವಾಮಿ, ಮಹಿಳಾ ಘಟಕದ ಅಧ್ಯಕ್ಷೆ ಹೇಮಮಾಲಿನಿ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಅಧ್ಯಕ್ಷ ವೈ.ಶಿವಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮೈಲಾಂಡಹಳ್ಳಿ ಮುರಳಿ, ಸೈಯದ್ ಅಫರ್ ಇದ್ದರು.

ಅಂತರಾಳದಿಂದ..
EDITORIAL

ಇ-100 ವಾಹನಗಳಿಗೆ ಅನುಮತಿ ಇಂಧನ ಸ್ವಾವಲಂಬನೆಯತ್ತ ದಿಟ್ಟ ಹೆಜ್ಜೆ

ಮಧ್ಯಪ್ರಾಚ್ಯ ಸಂಘರ್ಷದ ಬಳಿಕ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಒಂದೇ ಸಮನೆ ಹೆಚ್ಚುತ್ತಲೇ ಸಾಗಿರುವುದು ಹಾಗೂ ತೈಲ ಸಾಗಣೆಗೆ ಪದೇಪದೆ ಅಡಚಣೆ ಉಂಟಾಗುತ್ತಿರುವ ಹಿನ್ನೆಲೆಯಲ್ಲಿ ಆಮದು ತೈಲ ಅವಲಂಬನೆಯನ್ನು ಸಾಧ್ಯವಾದಷ್ಟು ಕಡಿಮೆ ಮಾಡುವ ಮೂಲಕ ದೇಶವನ್ನು ಇಂಧನ ಸ್ವಾವಲಂಬಿ ರಾಷ್ಟ್ರವನ್ನಾಗಿಸುವ ದಿಸೆಯಲ್ಲಿ ಕೇಂದ್ರ ಸರಕಾರ ಮಹತ್ವದ ಹೆಜ್ಜೆ ಇರಿಸಿದೆ.

ಪಳೆಯುಳಿಕೆ ಇಂಧನಗಳಿಗೆ ಪರ್ಯಾಯ ಇಂಧನಗಳ ಬಳಕೆಗೆ ಹೆಚ್ಚಿನ ಉತ್ತೇಜನ ನೀಡುತ್ತಲೇ ಬಂದಿರುವ ಸರಕಾರ, ಪೆಟ್ರೋಲ್, ಡೀಸೆಲ್ ಚಾಲಿತ ವಾಹನಗಳ ಬದಲಿಗೆ ಅಲ್ಪಪ್ರಮಾಣದಲ್ಲಿ ಎಥೆನಾಲ್ ಮಿಶ್ರಿತ ತೈಲಗಳ ಬಳಕೆಗೆ ಈ ಹಿಂದೆಯೇ ಅನುಮತಿ ನೀಡಿ, ಅದರಲ್ಲಿ ಯಶಸ್ವಿಯೂ ಆಗಿದೆ. ಈ ಎರಡೂ ಮಾದರಿಯ ವಾಹನಗಳು ಮಾರುಕಟ್ಟೆಗೆ ಪ್ರವೇಶಿಸಿದ ಬಳಿಕ ಎಥೆನಾಲ್‌ಗೆ ಭಾರೀ ಬೇಡಿಕೆ ಲಭಿಸಲಿದೆ. ಇ-20 ಇಂಧನ ಚಾಲಿತ ವಾಹನಗಳು ಮಾರುಕಟ್ಟೆಗೆ ಪ್ರವೇಶಿಸಿದ ಬಳಿಕ ಎಥೆನಾಲ್ ಲಭ್ಯತೆಯ ಮೇಲೆ ಪರಿಣಾಮ ಬೀರಿದೆ. ಕಬ್ಬು, ಮೆಕ್ಕೆಜೋಳ, ಹಾಳಾದ ಅಕ್ಕಿ ಮತ್ತಿತರ ಹಾಳಾದ ಧಾನ್ಯಗಳಿಂದ ಎಥೆನಾಲ್ ಅನ್ನು ಉತ್ಪಾದಿಸುವುದರಿಂದ ಈ ಬೆಳೆಗಳಿಗೂ ಹೆಚ್ಚಿನ ಉತ್ತೇಜನ ಲಭಿಸಲಿದೆಯಲ್ಲದೆ. ರೈತರ ಆದಾಯವೂ ವೃದ್ಧಿಸಲಿದೆ. ಸಹಜವಾಗಿಯೇ ರೈತರು ತಮ್ಮ ಸಾಂಪ್ರದಾಯಿಕ ಕೃಷಿ ಬೆಳೆಗಳಿಂದ ಈ ಬೆಳೆಗಳತ್ತ ವಾಲುವ ಸಾಧ್ಯತೆಗಳಿವೆ.

ಈಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಶೇ. 85ರಷ್ಟು ಮತ್ತು ಶೇ.100ರಷ್ಟು ಎಥೆನಾಲ್ ವಾಹನಗಳಿಗೆ ಅನುಮತಿಯನ್ನು ನೀಡಿದೆ. ಈ ಮೂಲಕ ಕಚ್ಚಾತೈಲ ಆಮದು ವೆಚ್ಚವನ್ನು ಭಾರೀ ಪ್ರಮಾಣದಲ್ಲಿ ಉಳಿಸಿ, ದೇಶದ ಬೊಕ್ಕಸದ ಮೇಲಿನ ಆರ್ಥಿಕ ಹೊರೆಯನ್ನು ಕಡಿಮೆ ಮಾಡುವ ದೂರದೃಷ್ಟಿಯ ನಿರ್ಧಾರವನ್ನು ಕೈಗೊಂಡಿದೆ. ದೇಶದಲ್ಲಿ ಇ-85 ಮತ್ತು ಇ-100 ವಾಹನಗಳ ಸಂಚಾರಕ್ಕೆ ಅನುಮತಿ ನೀಡುವ ವಿಷಯವಾಗಿ ಕಳೆದ ಕೆಲವು ತಿಂಗಳುಗಳಿಂದ ಚರ್ಚೆ ನಡೆಯುತ್ತಲೇ ಬಂದಿತ್ತು. ಈಗ ಸರಕಾರ ಇ-85 ಮತ್ತು ಇ-100 ವಾಹನಗಳ ಬಳಕೆಗೆ ಅನುಮತಿ ನೀಡುತ್ತಿರುವಂತೆಯೇ ವಾಹನ ತಯಾರಿಕ ಕಂಪೆನಿಗಳು ಇಂತಹ ವಾಹನಗಳ ಉತ್ಪಾದನೆಗೆ ಸನ್ನದ್ಧವಾಗಿವೆ. ಆದರೆ, ಈ ಎರಡೂ ಮಾದರಿಯ ಇಂಧನಗಳನ್ನು ಅದಕ್ಕಾಗಿಯೇ ವಿನ್ಯಾಸಗೊಳಿಸಲ್ಪಟ್ಟ ಮತ್ತು ಪ್ರಮಾಣೀಕೃತ ವಾಹನಗಳಲ್ಲಿ ಮಾತ್ರವೇ ಬಳಸಲು ಸಾಧ್ಯವಾಗಲಿದೆ. ಹೀಗಾಗಿ ಈಗಾಗಲೇ ಬಳಕೆಯಲ್ಲಿರುವ ವಾಹನಗಳಲ್ಲಿ ಇ-85 ಅಥವಾ ಇ-100 ಇಂಧನವನ್ನು ಬಳಸಲು ಸಾಧ್ಯ ಆಗದಿರುವುದರಿಂದ ಈ ಹಿಂದಿನ ಸಮಸ್ಯೆ ತಲೆದೋರದು.

ಹೀಗಾದದ್ದೇ ಆದಲ್ಲಿ ಆಹಾರ ಧಾನ್ಯಗಳ ಅಭಾವದ ಸಮಸ್ಯೆ ತಲೆದೋರುವ ಆತಂಕವೂ ಇದೆ. ಕಚ್ಚಾತೈಲದ ಅವಲಂಬನೆಯನ್ನು ಕಡಿಮೆ ಮಾಡುವ ಭರದಲ್ಲಿ ಆಹಾರ ಧಾನ್ಯಗಳಿಗಾಗಿ ವಿದೇಶಗಳ ಮುಂದೆ ಕೈಚಾಚುವ ಅನಿವಾರ್ಯತೆ ಸೃಷ್ಟಿಯಾದರೂ ಅಚ್ಚರಿ ಇಲ್ಲ. ಅಲ್ಲದೆ ಈ ಬೆಳೆಗಳಿಗೆ ಭಾರೀ ಪ್ರಮಾಣದಲ್ಲಿ ನೀರಿನ ಅಗತ್ಯವಿರುವುದರಿಂದ ಕೃಷಿ ಮತ್ತು ಕುಡಿಯುವ ನೀರಿನ ಸಮಸ್ಯೆ ಮತ್ತಷ್ಟು ಬಿಗಡಾಯಿಸಿದರೆ ಅಚ್ಚರಿ ಇಲ್ಲ. ಹೀಗಾಗಿ ಸರಕಾರ ಈ ಅಂಶಗಳತ್ತಲೂ ತುರ್ತು ಗಮನ ಹರಿಸಬೇಕು. ಇವೆರಡೂ ಅತ್ಯಂತ ಗಂಭೀರ ವಿಷಯಗಳಾಗಿದ್ದರಿಂದ ಇ-85 ಮತ್ತು ಇ-100 ವಾಹನಗಳು ಮಾರುಕಟ್ಟೆಗೆ ಬಿಡುಗಡೆಯಾಗುವ ಮುನ್ನ ಇಂತಹ ಸಮಸ್ಯೆಗಳು ಸೃಷ್ಟಿ ಆಗದಂತೆ ಸೂಕ್ತ ಪರಿಹಾರೋಪಾಯಗಳನ್ನು ಕಂಡುಕೊಂಡಲ್ಲಿ ಮಾತ್ರವೇ ಈ ಫ್ಲೆಕ್ಸ್-ಫ್ಯುಯೆಲ್ ವಾಹನಗಳ ಬಳಕೆಯ ಚಿಂತನೆಯ ನಿರೀಕ್ಷಿತ ಉದ್ದೇಶ ಮತ್ತು ಆಶಯ ಸಾಕಾರಗೊಳ್ಳಲು ಸಾಧ್ಯ.

ರಾಮಾಯಣ

23. ರಾವಣನೇ ಯುದ್ಧರಂಗಕ್ಕೆ ನಡೆತಂದುದು; ಅವನನ್ನು ಲಕ್ಷ್ಮಣನು ಎದುರಿಸುವು

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಇದರಿಂದ ವಿಚಲಿತನಾಗದ ನೀಲನು ಒಂದು ದೊಡ್ಡ ಬೆಟ್ಟವನ್ನು ಕಿತ್ತು ಕಲಿಯಂತೆ ಪ್ರಹಸ್ತನ ಮೇಲೆ ಅಪ್ಪಳಿಸಿದ. ನೀಲನು ಬೆಟ್ಟದಿಂದ ಹೊಡೆದರೂ ಪ್ರಹಸ್ತನು ಪ್ಲವಗಾಧಿಪತಿಯನ್ನು ಮತ್ತೆ ಮುಸಲದಿಂದ ಬಡಿದ. ಇದರಿಂದ ಆವೇಶಗೊಂಡ ನೀಲನು ಒಂದು ಸಾಲವೃಕ್ಷವನ್ನು ಕಿತ್ತು ತಂದು ದೈತ್ಯನ ಮೇಲೆ ಎಸೆದ. ಹೀಗೆ ಬೆಟ್ಟ ಗದೆ ಬಾಣ ಮುಂತಾದ ಆಯುಧಗಳಲ್ಲಿ ಒಮ್ಮೊಮ್ಮೆ ಒಂದೊಂದನ್ನು ಹಿಡಿದು ಹೋರಾಡುವ ಅವರ ರೀತಿಯು ವೃತ್ರಾಸುರ ದೇವೇಂದ್ರರ ನಡುವಣ ಯುದ್ಧವನ್ನು ನೆನಪಿಗೆ ತರುತ್ತಿತ್ತು. ಕೊನೆಗೆ ನೀಲನು ಭಾರಿ ಬೆಟ್ಟವೊಂದನ್ನು ತಂದು ಕಲ್ಪಾಂತ ಭೈರವನಂತೆ ಕಣ್ಣುಗಳಲ್ಲಿ ಕಿಡಿಯುಗುಳುತ್ತ ಹಾರಿ ದೈತ್ಯಸೇನಾಧಿಪತಿಯ ಮೇಲೆ ಬೀಳಲು ಅವನು ನಿಸ್ತೇಜಗೊಂಡು ನೆಲದ ಮೇಲೆ ದೊಪ್ಪನೆ ಬಿದ್ದ. ಮೇರುಪರ್ವತವು ಬುವಿಯ ಮೇಲೆ ಕೆಡೆದಂತೆ ರಕ್ತವನ್ನು ಕಾರಿಕೊಳ್ಳುತ್ತ ಬಿದ್ದುದನ್ನು ಕಂಡ ದೈತ್ಯಸೇನೆಯು, ಕೆರೆಯ ಕಟ್ಟೆಯು ಒಡೆದುಹೋಗಲು ಅದರಲ್ಲಿನ ನೀರು ಎಲ್ಲೆಡೆಗೆ ಹರಿದುಹೋಗುವಂತೆ, ನೀಲನಿಂದ ಪಾರಾಗಬೇಕೆಂದು ಭೀತಿಯಿಂದ ದಿಕ್ಕುದಿಕ್ಕಿಗೆ ಓಡತೊಡಗಿದರು. ಹೀಗೆ ದಿವಿಜ ಭೂದಿವಿಜ ಗೋಕಂಟಕನು ಅಳಿದುದನ್ನು ಕಂಡು ಅಮರಸಂತತಿಯು ಸಂತಸಗೊಂಡು ನೀಲನ ಮೇಲೆ ಕುಸುಮವೃಷ್ಟಿಯನ್ನು ಕರೆಯಿತು, ಆಗಸದಲ್ಲಿ ದುಂದುಭಿ ಮೊಳಗಿತು. ರವಿಕುಲತೇಜನ ಕೃಪೆಯಿಂದ ರಕ್ಕಸನು ಮಡಿದು ಭೂಮಿಗೆ ಬಿದ್ದ, ಕಪಿಸೇನೆಯ ಭಾಗ್ಯದ ಬಾಗಿಲು ಮತ್ತಷ್ಟು ವಿಸ್ತಾರವಾಗಿ ತೆರೆದಂತಾಯಿತು. ವಿಜಯಿಯಾದ ನೀಲನನ್ನು ಕಪಿವೃಂದವು ಎಷ್ಟು ಹೊಗಳಿದರೂ ಸಾಲದಾಯಿತು, ಅವನನ್ನು ತಮ್ಮ ಭುಜಗಳಲ್ಲಿ ಹೊತ್ತು ಕುಣಿದಾಡಿದರು, ಪರಸ್ಪರರನ್ನು ಅಭಿನಂದಿಸಿಕೊಂಡರು. ಅವನನ್ನು ಭುಜಗಳ ಮೇಲೆ ಹೊತ್ತೇ ಕಪಿಸೇನೆಯು ರಾಮನ ಚರಣದರ್ಶನಕ್ಕೆಂದು ನಡೆತಂದಿತು. ನೀಲನನ್ನು ಪ್ರೀತಿಯಿಂದ ಬರಮಾಡಿಕೊಂಡ ರಾಮಪುರದರಸನು ಧುರವಿಜಯಿಯಾದ ಪ್ರಹಸ್ತನನ್ನು ಸಂಹರಿಸಿದುದಕ್ಕಾಗಿ ಅಭಿನಂದಿಸಿ ಅಪಿಕೊಂಡನು. ಗಿರಿಜೆಯೇ, ಹೀಗೆ ಪ್ರಹಸ್ತನು ರಣಾಂಗಣದಲ್ಲಿ ಮೃತಿಹೊಂದಲು, ಉಳಿದ ದಾನವರು ಭೀತಿಯಿಂದ ಅಲ್ಲಿರಲಾಗದೆ ಓಡಿಹೋಗಿ ಕೆಲವರು ಸಿಕ್ಕ ಸಿಕ್ಕಲ್ಲಿ ಅವಿತುಕೊಂಡರು, ಕೆಲವರು ನೀರಧಿಯ ನೀರಲ್ಲಿ ಮುಳುಗಿದರು. ಅವರಲ್ಲೊಬ್ಬನು ತ್ವರಿತವಾಗಿ ಅಸುರನಾಥನ ಬಳಿಗೆ ಬಂದು, ''ಮಹಾಪ್ರಭುಗಳೇ, ನಮ್ಮ ಸೇನಾನಾಯಕ ಪ್ರಹಸ್ತರು ರಣದಲ್ಲಿ ಕೆಡೆದರು, ನಮ್ಮ ಕಡೆಯ ಬಹು ಪಾಲು ಸೈನ್ಯವೂ ನಾಶವಾಯಿತು, ನಮಗೆ ಘೋರ ನಷ್ಟವಾಯಿತು. ಕಪಿಸೈನ್ಯವು ನಗರದಲ್ಲಿ ನುಗ್ಗಿ ಸೂರೆಮಾಡಲು ಬರುವ ಯೋಚನೆಯಲ್ಲಿದೆ. ಸುರಗಣವು ಆನಂದದಿಂದಿದೆ, ಅದು ಮೃತ್ಯು ಬಳಗವಲ್ಲದೆ ಕಪಿಸಂತತಿಯಲ್ಲ. ಹಂತಹಂತವಾಗಿ ದೈತ್ಯಕುಲ ನಾಶವಾಗುವ ಭಯವು ನಿಜವಾಗುವಂತೆ ತೋರುತ್ತಿದೆ. ಅವರನ್ನು ತಡೆಗಟ್ಟಲು ಮಹಾಪ್ರಭುಗಳು ತ್ವರೆ ಮಾಡಬೇಕು'' ಎಂದು ಕೈಕಟ್ಟಿ ನಿಂತ. ಪ್ರಹಸ್ತನ ವಧೆಯನ್ನು ಕೇಳಿದ ರಾವಣೇಶ್ವರನ ಕೋಪದ ಕಟ್ಟೆಯೊಡೆಯಿತು. ರಘುಕುಲದ ಕಡೆಯವರು ತಮ್ಮ ಬಲಕ್ಕೆ ಉಂಟುಮಾಡುತ್ತಿದ್ದ ಕ್ಲೇಶವನ್ನು ನೆನೆದು ಹಲ್ಲು ಕಡಿಯುತ್ತ, ತಲೆಗಳನ್ನು ತೂಗುತ್ತ, ವಜ್ರದಿಂದ ಹೊಡೆದಂತೆ ಆರ್ಭಟಿಸುತ್ತ. ಕ್ಷುದ್ರ ಕಪಿಗಳು ಪ್ರಹಸ್ತನಂತಹ ಅಸುರಾಂತಕನನ್ನು ಕೊಂದುದು ಈ ಜಗತ್ತಿನಲ್ಲಿ ಚೋದ್ಯವೆನಿಸಿದೆ ಎಂದು ಅಚ್ಚರಿಗೊಂಡು, ಜೊತೆಯಿದ್ದ ದೈತ್ಯನಾಯಕರನ್ನು ಕುರಿತು, ಕರಿತುರಗರಥಪದಾತಿಗಳೊಡನೆ ಯುದ್ಧಕ್ಕೆ ಹೋದ ಪ್ರಹಸ್ತನು ಹತನಾದನು. ದೈತ್ಯಕುಲದ ಪೌರುಷ ಎಲ್ಲಿ ಹೋಯಿತು. ಅವರನ್ನು ಮನುಷ್ಯರು-ಕಪಿಗಳೆಂದು ಇಷ್ಟು ದಿನ ಅಲಕ್ಷಿಸಿದುದೇ ಇದಕ್ಕೆ ಕಾರಣವಿರಬೇಕು. ಇನ್ನು ಹಾಗಾಗಬಾರದು. ಕಾಳ್ಗಿಚ್ಚು ಇಡೀ ಕಾಡನ್ನು ನಾಶಮಾಡುವಂತೆ ನಾನೇ ಹೋಗಿ ತರಣಿಕುಲಸಂಭೂತರೊಡನೆ ವಾನರಸಂಕುಲವನ್ನು ಉರಿಸಿ ಬೂದಿಮಾಡಿಬಿಡುತ್ತೇನೆ. ನನ್ನ ಬಾಣಗಳಿಂದ ಅವರನ್ನೆಲ್ಲ ಅರೆದು ಸಮುದ್ರದಲ್ಲಿರುವ ಜಲಜಂತುಗಳಿಗೆ ಔತಣಮಾಡುತ್ತೇನೆ'' ಎಂದು ಹೇಳಿ ಯುದ್ಧಸನ್ನದ್ಧನಾದ. ಭರಭರನೆ ಹೊರಬಂದು ಹೊಂದೇರನ್ನೇರಿ ಪೆರ್ದಳದೊಡನೆ ದಶಕಂಠನು ಹೊರಡಲು ವೀರಭಟರ ಕಳಕಳ ಹೆಚ್ಚಾಯಿತು, ಕಹಳೆ ಶಂಖ ದುಂದುಭಿ ತಮ್ಮಟೆಗಳ ಸದ್ದು ಆಗಸವನ್ನು ತುಂಬಿತು ಘಂಟಾರವ, ಚಕ್ರಗಳ ಚೀತ್ಕಾರಗಳು ಅದರೊಡನೆ ಸೇರಿಕೊಂಡವು. ರಾಕ್ಷಸಭಟರು ಭುಜವನ್ನು ಚಪ್ಪರಿಸಿಕೊಳ್ಳುತ್ತ, ಸಿಂಹನಾದಗೈಯುತ್ತ. ಹೊಗಳುಭಟರು ಬಿರುದುಗಳನ್ನು ಉಗ್ಗಡಿಸುತ್ತ, ಮಂಗಳಪಾಠಕರು ಸ್ತೋತ್ರ ಮಾಡುತ್ತ ದಾನವೇಂದನ ಎಡಬಲಗಳಲ್ಲಿ ನಡೆದರು; ವೀರರು ಮಾಡುವ ಚಾಪಶೇಂಕಾರ, ಹೂಂಕಾರಗಳ ಧ್ವನಿಯಿಂದ ಭೂಮಿ ಕಂಪಿಸಿತು.

ಹೀಗೆ ಸಮುದ್ರವು ತುಳುಕಾಡುವಂತೆ, ಬೆಟ್ಟಗಳು ಅಲ್ಲಾಡುವಂತೆ, ಸೂರ್ಯಚಂದ್ರರು ನಡುಗುವಂತೆ, ಜಗತ್ತಿನ ಸಕಲ ಜೀವಿಗಳೂ ತಳ್ಳಂಕಗೊಳ್ಳುವಂತೆ ರಾಕ್ಷಸೇಂದ್ರನ ಸೈನ್ಯವು ಹೊಸ ಹುರುಪಿನಿಂದ ಯುದ್ಧರಂಗಕ್ಕೆ ಹೊರಟಿತು. ಅಸುರೇಶನ ಆಗಮನದಿಂದ ವಾನರಸೇನೆಯಲ್ಲಿ ಹೊಸ ಸಂಚಲನವುಂಟಾಯಿತು.

ಮುಂದುವರೆಯುವುದು

ಪರೀಕ್ಷಾ ಸಂಭ್ರಮ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381

22

ಆತಂಕದ ಹೊಟ್ಟೆತೊಳಸಿಗೆ ಪರಿಹಾರ

ತಕ್ಷಣಕ್ಕೆ ಉಗುರುಬೆಚ್ಚನೆಯ ನೀರು ಸೇವಿಸಿ, ಹೊಟ್ಟೆಗೆ ಬೆಚ್ಚನೆಯ ಒದ್ದೆ ಟವಲ್ ಒತ್ತಿ, ಐದು ಬಾರಿ ಆಳವಾಗಿ ಉಸಿರಾಡಿ. ಮೊಸರು, ಬಾಳೆಹಣ್ಣು, ಗಂಜಿ, ಅನ್ನದಂತಹ ಲಘು ಆಹಾರ ಸೇವಿಸಿ. ಖಾರ, ಎಣ್ಣೆ, ಚಹಾ, ಕಾಫಿಯನ್ನು ತಾತ್ಕಾಲಿಕವಾಗಿ ವರ್ಜಿಸಿ. ಊಟದ ಬಳಿಕ ಹತ್ತು ನಿಮಿಷ ಮೆಲ್ಲನೆ ನಡೆದಾಡಿ, ಹೊಟ್ಟೆಯನ್ನು ಮೃದುವಾಗಿ ಮಸಾಜ್ ಮಾಡಿದರೆ ನೆಮ್ಮದಿ ದೊರೆಯುತ್ತದೆ.

ಪರೀಕ್ಷೆ ಸಮೀಪಿಸುತ್ತಿದ್ದಂತೆ ಅನೇಕರಿಗೆ ಹೊಟ್ಟೆಯಲ್ಲಿ ಚಿಟ್ಟೆಗಳು ಹಾರಿದಂತಾಗುತ್ತದೆ, ಗ್ಯಾಸ್, ಅಜೀರ್ಣ, ಭೇದಿ ಕಾಣಿಸಿಕೊಳ್ಳುತ್ತವೆ. ಮೇಜಿನ ಮುಂದೆ ಕುಳಿತರೂ ಹೊಟ್ಟೆ ತೊಳಸಿ ಊಟದ ಮೇಲೆ ನಿರಾಸಕ್ತಿ ಮೂಡುತ್ತದೆ. ಇದು ದೌರ್ಬಲ್ಯದ ಸೂಚನೆಯಲ್ಲ. ಮಿದುಳು ಮತ್ತು ಕರುಳು ಪರಸ್ಪರ ಹೆಣೆದುಕೊಂಡಿದ್ದು ಆತಂಕ ನೇರವಾಗಿ ಜಠರದ ಮೇಲೆ ಪ್ರಭಾವ ಬೀರುತ್ತದೆ.

ಒತ್ತಡದ ಹೊತ್ತಿನಲ್ಲಿ ಕಾರ್ಟಿಸಾಲ್ ಹಾರ್ಮೋನು ಏರಿಕೆಯಾಗಿ ಜೀರ್ಣಕ್ರಿಯೆ ಮಂದಗತಿಯಾಗುತ್ತದೆ, ಆಹಾರ ಸಮರ್ಪಕವಾಗಿ ಪಚನಗೊಳ್ಳದೆ ಹೊಟ್ಟೆ ಉಬ್ಬರ, ನೋವು, ಸಡಿಲತೆ ಉಂಟಾಗುತ್ತದೆ.

ಖಾಲಿ ಹೊಟ್ಟೆಯಲ್ಲಿ ಕಾಫಿ, ಖಾರ, ಕರಿದ ತಿನಿಸು ಸೇವಿಸಿದರೆ ತೊಂದರೆ ದ್ವಿಗುಣಗೊಳ್ಳುತ್ತದೆ. ಹೊಟ್ಟೆ ನೋವಿನಿಂದ ಓದಲು ಆಗುತ್ತಿಲ್ಲ ಎಂಬ ಕೊರಗು

ಆತಂಕವನ್ನು ಇನ್ನಷ್ಟು ಹೆಚ್ಚಿಸುತ್ತದೆ. ಹೊಟ್ಟೆ ಸರಿಯಿದ್ದರೆ ಓದೂ ಸರಾಗವಾಗುತ್ತದೆ.

ಆತಂಕದ ಸಮಯದಲ್ಲಿ ಜಠರವನ್ನು ದೂಷಿಸದೆ ವಿಶ್ರಾಂತಿ ನೀಡಿ. ದಿನಕ್ಕೆ ಮೂರು ಬಾರಿ ಅಲ್ಪ ಪ್ರಮಾಣದಲ್ಲಿ ಆಹಾರ ಸೇವಿಸಿ. ಸಮಸ್ಯೆ ಮೂರು ದಿನ ಮೀರಿದರೆ ವೈದ್ಯರನ್ನು ಭೇಟಿಯಾಗಿ. ಶಾಂತ ಉದರವೇ ಶಾಂತ ಮನಸ್ಸಿಗೆ ದಾರಿ, ಆಗ ಪರೀಕ್ಷೆಯೂ ಸುಲಭವಾಗುತ್ತದೆ.

ಈ ಆಹಾರಗಳನ್ನು ಸೇವಿಸಿದರೆ ಇಮ್ಯುನಿಟಿ ಪವರ್ ಹೆಚ್ಚು ಸಹಾಯ, ಯಾವ ಪದಾರ್ಥಗಳನ್ನು ಸೇರಿಸಿಕೊಳ್ಳಬೇಕು ಗೊತ್ತೇ?

ದೇಶದ ವಿವಿಧ ನಗರಗಳಲ್ಲಿ ಹೆಚ್ಚುತ್ತಿರುವ ವಾಯು ಮಾಲಿನ್ಯವು ಜನರ ಆರೋಗ್ಯದ ಮೇಲೆ ತುಂಬಾ ಪರಿಣಾಮ ಬೀರುತ್ತಿದೆ. ಕಲುಷಿತ ಗಾಳಿಯಲ್ಲಿರುವ ಸೂಕ್ಷ್ಮ ಕಣಗಳು ಗಂಟಲು ಮತ್ತು ಶ್ವಾಸಕೋಶ ಹಾಗೂ ಕಣ್ಣುಗಳ ಮೇಲೆ ಪರಿಣಾಮ ಬೀರುತ್ತವೆ. ಇಂತಹ ಸ್ಥಿತಿಯಲ್ಲಿ ಒಟ್ಟಾರೆ ಆರೋಗ್ಯ ಕಾಪಾಡಿಕೊಳ್ಳುವುದರ ಜೊತೆಗೆ ಸಮತೋಲಿತ ಹಾಗೂ ಪೌಷ್ಟಿಕ ಆಹಾರ ಸೇವಿಸುವುದು ತುಂಬಾ ಮುಖ್ಯವಾಗುತ್ತದೆ. ಸರಿಯಾದ ಪೋಷಣೆಯು ದೇಹದ ನೈಸರ್ಗಿಕ ರೋಗನಿರೋಧಕ ವ್ಯವಸ್ಥೆ ಬಲಪಡಿಸಲು ಹೆಚ್ಚು ಸಹಾಯವಾಗುತ್ತದೆ.

ಅಧಿಕ ಮಾಲಿನ್ಯ ಸಮಯದಲ್ಲಿ ಆಹಾರಕ್ರಮದಲ್ಲಿ ಏನನ್ನು ಸೇರಿಸಿಕೊಳ್ಳಬೇಕು, ಯಾವ ಪೋಷಕಾಂಶಗಳು ಆರೋಗ್ಯಕ್ಕೆ ಪ್ರಯೋಜನಕಾರಿಯಾಗಿವೆ. ಗಾಳಿಯ ಗುಣಮಟ್ಟ ಕಳಪೆಯಾಗಿದ್ದಾಗ ಯಾವ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು. ವೈದ್ಯರು ಸೂಚಿಸುವ ಈ ಆಹಾರಗಳನ್ನು ಸೇವಿಸಿದರೆ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಹಾಯವಾಗುತ್ತದೆ.

ಇದೀಗ ಆಹಾರಕ್ರಮದಲ್ಲಿ ಯಾವ ಪದಾರ್ಥಗಳನ್ನು ಸೇರಿಸಿಕೊಳ್ಳಬಹುದು ಎಂಬುದನ್ನು ಇಲ್ಲಿ ತಿಳಿಯೋಣ. ಪಾಲಕ್ ಸೊಪ್ಪು, ಮೆಂತ್ಯ ಸೊಪ್ಪು, ಬ್ರೊಕೊಲಿ, ಇತರ ಹಸಿರು ಸೊಪ್ಪು ಹಾಗೂ ತರಕಾರಿಗಳು ವಿಟಮಿನ್‌ಗಳು, ಖನಿಜಗಳು, ನಾರಿನಂಶ (ಫೈಬರ್) ಹಾಗೂ ವಿವಿಧ ಆ್ಯಂಟಿ - ಆಕ್ಸಿಡೆಂಟ್ ಸಮೃದ್ಧವಾಗಿವೆ.

ಈ ಪೋಷಕಾಂಶಗಳು ದೇಹದ ಸಾಮಾನ್ಯ ಕಾರ್ಯನಿರ್ವಹಣೆಗೆ ಉತ್ತಮ ಕೊಡುಗೆ ನೀಡುತ್ತವೆ, ರೋಗನಿರೋಧಕ ವ್ಯವಸ್ಥೆಯನ್ನು ಆರೋಗ್ಯಕರವಾಗಿಡಲು ಸಹಾಯವಾಗುತ್ತದೆ. ಊಟದಲ್ಲಿ ನಿಯಮಿತವಾಗಿ ಹಸಿರು ಸೊಪ್ಪು, ತರಕಾರಿಗಳನ್ನು ಸೇರಿಸಿಕೊಳ್ಳಬೇಕು. ತರಕಾರಿಗಳನ್ನು ಅಡುಗೆ ಮಾಡುವ ಮೊದಲು ಚೆನ್ನಾಗಿ ತೊಳೆದುಕೊಳ್ಳಬೇಕಾಗುತ್ತದೆ. ಡಯಟ್‌ನಲ್ಲಿ ವಿವಿಧ ಬಣ್ಣಗಳ ತರಕಾರಿಗಳನ್ನು ಸೇರಿಸಿಕೊಳ್ಳುವುದು ಒಳ್ಳೆಯದು.

ಕಿತ್ತಳೆ, ನೆಲ್ಲಿಕಾಯಿ, ಪೇರಲ, ನಿಂಬೆ ಹಾಗೂ ಕಿವಿಯಂತಹ ಹಣ್ಣುಗಳಲ್ಲಿ ವಿಟಮಿನ್ ಸಿ ಅತ್ಯುತ್ತಮವಾಗಿ ಕಂಡುಬರುತ್ತದೆ. ವಿಟಮಿನ್ ಸಿ ರೋಗನಿರೋಧಕ ವ್ಯವಸ್ಥೆಯ ಸಾಮಾನ್ಯ ಕಾರ್ಯನಿರ್ವಹಣೆಗೆ ಬೆಂಬಲ ನೀಡುತ್ತದೆ, ದೇಹಕ್ಕೆ ಆಂಟಿ - ಆಕ್ಸಿಡೆಂಟ್ ರಕ್ಷಣೆ ಒದಗಿಸುತ್ತದೆ. ಋತುಮಾನಕ್ಕೆ ಅನುಗುಣವಾಗಿ ಲಭಿಸುವ ಹಣ್ಣುಗಳನ್ನು ದೈನಂದಿನ ಆಹಾರಕ್ರಮದಲ್ಲಿ ಸೇರಿಸಿಕೊಳ್ಳುವುದು ಉತ್ತಮ. ಹಣ್ಣಿನ ರಸವನ್ನು ಕುಡಿಯುವುದಕ್ಕಿಂತ ಹಣ್ಣುಗಳನ್ನು ನೇರವಾಗಿ ತಿನ್ನುವುದು ಉತ್ತಮ ಆಯ್ಕೆಯಾಗಿದೆ. ಕೇವಲ ಒಂದೇ ರೀತಿಯ ಹಣ್ಣಿನ ಮೇಲೆ ಅವಲಂಬಿತರಾಗದೇ ವಿವಿಧ ಬಗೆಯ ಹಣ್ಣುಗಳನ್ನು ಸೇವಿಸಬೇಕಾಗುತ್ತದೆ ಎಂದು ವೈದ್ಯರು ತಿಳಿಸುತ್ತಾರೆ. ದ್ವಿದಳ ಧಾನ್ಯಗಳು, ಕಡಲೆ, ರಾಜ್ಮಾ, ಸೋಯಾಬೀನ್, ಮೊಟ್ಟೆ ಹಾಗೂ ಹಾಲು ಸೇರಿದಂತೆ ವಿವಿಧ ಆಹಾರಗಳು ಪ್ರೋಟೀನ್ ಅನ್ನು ಒದಗಿಸುತ್ತವೆ. ಶರೀರದ ಜೀವಕೋಶಗಳು ಹಾಗೂ ಅಂಗಾಂಶಗಳನ್ನು ನಿರ್ಮಿಸಲು ಮತ್ತು ದುರಸ್ತಿಪಡಿಸಲು ಪ್ರೋಟೀನ್ ಅತ್ಯಗತ್ಯ. ಸಮತೋಲಿತ ಆಹಾರದಲ್ಲಿ ಸಾಕಷ್ಟು ಪ್ರಮಾಣದ ಪ್ರೋಟೀನ್ ಸೇರಿಸಿಕೊಳ್ಳುವುದು ಆರೋಗ್ಯಕ್ಕೆ ಪ್ರಯೋಜನಕಾರಿ.

ನಿಮ್ಮ ದೈನಂದಿನ ಊಟದಲ್ಲಿ ದ್ವಿದಳ ಧಾನ್ಯಗಳು ಇಲ್ಲವೇ ಇತರ ಪ್ರೋಟೀನ್ ಮೂಲಗಳನ್ನು ಸೇರಿಸಿಕೊಳ್ಳಿ. ಸಸ್ಯಾಹಾರಿ ಆಹಾರ ಪದ್ಧತಿಯನ್ನು ಅನುಸರಿಸುವವರು ದ್ವಿದಳ ಧಾನ್ಯಗಳು, ಕಡಲೆ, ರಾಜ್ಮಾ ಹಾಗೂ ಸೋಯಾ ಆಧಾರಿತ ಉತ್ಪನ್ನಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ನಿಮ್ಮ ವಯಸ್ಸು ಹಾಗೂ ವೈಯಕ್ತಿಕ ಅಗತ್ಯಗಳಿಗೆ ಅನುಗುಣವಾಗಿ ಸಮತೋಲಿತ ಪ್ರಮಾಣದ ಪ್ರೋಟೀನ್ ಅನ್ನು ಸೇವಿಸಬೇಕಾಗುತ್ತದೆ ಎಂದು ತಜ್ಞರು ತಿಳಿಸುತ್ತಾರೆ. ಬಾದಾಮಿ, ವಾಲ್‌ನಟ್ಸ್ ಹಾಗೂ ಇತರ ಬೀಜಗಳಲ್ಲಿ ಆರೋಗ್ಯಕರ ಕೊಬ್ಬುಗಳು, ಪ್ರೋಟೀನ್ ಹಲವಾರು ಅಗತ್ಯ ಪೋಷಕಾಂಶಗಳಿರುತ್ತವೆ.

ಕಲಾ ಸಾಹಿತ್ಯ

ವೈ.ಕೆ. ಸಂಧ್ಯಾ ಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

ಅಸೀಮ ಚೈತನ್ಯದ ಮೋಹಿತಾಳ ಸೊಗಸಾದ ನೃತ್ಯವಲ್ಲರಿ

'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು'- ಎಂಬ ಗಾದೆಗೆ ಅನ್ವರ್ಥಕ ಪ್ರತಿಭೆ- ಸಾಮರ್ಥ್ಯಗಳನ್ನು ಹೊಂದಿರುವ ಉದಯೋನ್ಮುಖ ನೃತ್ಯ ಕಲಾವಿದೆ ಕು. ಮೋಹಿತಾ ಜೆ. ಇತ್ತೀಚೆಗೆ ಯಲಹಂಕದ ನ್ಯೂ ಟೌನ್ ನಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ತನ್ನ ರಂಗಪ್ರವೇಶವನ್ನು ಯಶಸ್ವಿಯಾಗಿ ನೆರವೇರಿಸಿಕೊಂಡಳು. 'ಶ್ರೀಕೃಷ್ಣ ಕಲಾಲಯ'ದ ನುರಿತ ನೃತ್ಯಗುರು ವಿದುಷಿ. ಸುನೀತ ಸುಕುಮಾರನ್ ಅವರ ಬಳಿ ಉತ್ತಮ ತರಬೇತಿ ಪಡೆದ ಶಿಷ್ಯೆ ಮೋಹಿತಾ ಜೆ. ರಂಗದ ಮೇಲೆ ನಗುಮುಖದಿಂದ ಅಷ್ಟೇ ಆತ್ಮವಿಶ್ವಾಸದಿಂದ ಸುಮಾರು ಎರಡು ಗಂಟೆಗಳ ಕಾಲ ಸತತವಾಗಿ ಲವಲವಿಕೆಯಿಂದ ಸುಮನೋಹರ ನೃತ್ಯ ಪ್ರದರ್ಶಿಸಿದಳು. ಶುಭಾರಂಭಕ್ಕೆ ಗುರು- ಹಿರಿಯರಿಗೆ, ದೇವಾನುದೇವತೆಗಳಿಗೆ ತನ್ನ ವಿಶಿಷ್ಟ ನೃತ್ತಗಳ ಮೂಲಕ ವಿನಮ್ರ ನಮನವನ್ನು 'ಪುಷ್ಪಾಂಜಲಿ' ಮೂಲಕ ಸಲ್ಲಿಸಿದ ಕಲಾವಿದೆ ಮುಂದಿನ 'ಜತಿಸ್ವರ'ದಲ್ಲಿ ತನ್ನ ಅನುಪಮ ಹೆಜ್ಜೆ- ಗೆಜ್ಜೆಗಳ ಮಿಂಚಿನ ಸಂಚಾರದ ಜತಿಗಳ ಮಿಡಿತಗಳಿಂದ, ತಾಳ- ಲಯಭಿಜ್ಞತೆಯಿಂದ, ಮನಮೋಹಕ ಅಂಗಿಕಾಭಿನಯದಿಂದ ಗಮನ ಸೆಳೆದಳು. ಗುರು ಸುನೀತ ಅವರ ಸ್ಫುಟವಾದ ಅಷ್ಟೇ ಲಯಾತ್ಮಕವಾಗಿದ್ದ ಮಧುರ ಕಂಠದ ನಟುವಾಂಗ ಕಲಾವಿದೆಯ ಹೆಜ್ಜೆಯ ಕಸುವಿಗೆ ಮತ್ತಷ್ಟು ಪ್ರೇರಣೆ ನೀಡಿತು. ಮುಂದಿನ ದೇವೀ ಸ್ತುತಿಯ ' ದುರ್ಗಾ ಕೌತ್ವಂ'- ಸುಂದರಾಭಿನಯಗಳಿಂದ ದೈವೀಕವಾಗಿ ಮೂಡಿ ಬಂತು. ಪ್ರಸ್ತುತಿಯ ಪ್ರಮುಖ ಘಟ್ಟ ವರ್ಣ ಶ್ರೀಮತಿ ಅಕ್ಷತಾ ಉಪಾಧ್ಯಾಯ ವಿರಚಿತ ಕನ್ನಡ ವರ್ಣದ ಆಯ್ಕೆ ವಿಶೇಷವಾಗಿತ್ತು.

ಸುಂದರ ಶ್ರೀಕೃಷ್ಣ ವಾಸುದೇವನ ಜನ್ಮ ವೃತ್ತಾಂತ, ಗೋಕುಲದಲ್ಲಿ ಬೆಳೆದ ಬಗೆ , ಬಾಲ್ಯದ ಸಾಹಸ- ಪವಾಡಗಳಿಂದ ಕೂಡಿದ ಮತ್ತು ವಿಶ್ವರೂಪ- ಗೀತೋಪದೇಶದ ಮಹಿಮೆಯನ್ನು ಎತ್ತಿ ಹಿಡಿದ ಭಕ್ತಿಪ್ರಧಾನ 'ವರ್ಣ'ವನ್ನು ಮೋಹಿತಾ, ತನ್ನ ರಮ್ಯವಾದ ನೃತ್ತ ಹಾಗೂ ಮೋಹಕ ಅಭಿನಯಗಳಿಂದ ಸಾಕ್ಷಾತ್ಕರಿಸಿದಳು. ಅನಂತರದ ಮಡಕೆಯ ಮೇಲೆ ನಿಂತು ದೇಹದ ಸಮತೋಲನ ಕಾಯ್ದುಕೊಂಡು ಮಾಡುವ ಚಮತ್ಕಾರಿಕ 'ಫೇರಿಣಿ' ನೃತ್ಯವನ್ನು ಮೋಹಿತಾ ರೋಮಾಂಚಕರವಾಗಿ ನಿರೂಪಿಸಿದಳು. ಮುಂದೆ - ಶ್ರೀ ಸ್ವಾತಿ ತಿರುನಾಳ್ ರಚನೆಯ 'ಶಂಕರ ಶ್ರೀಗಿರಿ' ಕೃತಿಯ ಸಾಕಾರದಲ್ಲಿ ಮೋಹಿತಾ, ಯೋಗದ ವಿವಿಧ ಭಂಗಿಗಳನ್ನು ಆಕರ್ಷಕವಾಗಿ, ಪ್ರದರ್ಶಿಸಿದಳು. ಜನಪದ ಧಾಟಿಯಲ್ಲಿ ಪ್ರದರ್ಶಿತವಾದ ಮೋಡಿಕಾರ ಕೃಷ್ಣನ ವಿವಿಧ ಲೀಲಾ ವಿನೋದಗಳನ್ನು ವರ್ಣರಂಜಿತವಾಗಿ ಬಿತ್ತರಿಸಿದ ಕೃತಿ- 'ವಿಷಮಕಾರ ಕಣ್ಣನ್' ಬಹು ಲವಲವಿಕೆಯಿಂದ ಕಣ್ಮನ ಸೆಳೆಯಿತು. ಪ್ರಸ್ತುತಿಯು 'ತಿಲ್ಲಾನ ಮತ್ತು ಮಂಗಳದೊಂದಿಗೆ ಸುಸಂಪನ್ನಗೊಂಡಿತು.

ಕು. ಮೋಹಿತಾಳ ಪಾದರಸದ ನೃತ್ಯಮಂಜರಿಗೆ ಸುಶ್ರಾವ್ಯ ಸಂಗೀತ ಸಾಂಗತ್ಯ ನೀಡಿದ ಸಂಪೂರ್ಣ ಮಹಿಳಾ ಕಲಾವಿದೆಯರಿಗೆ, ಅಪೂರ್ವ ಈ ಮಹಿಳಾ ಶಕ್ತಿಗೆ ನಿಜಕ್ಕೂ ಅಭಿನಂದನೆ ಸಲ್ಲಲೇಬೇಕು. ಗುರು ಸುನೀತಾ ಸುಕುಮಾರನ್ ಭೋರ್ಗರೆವ ಜಲಪಾತದಂತೆ ಸುಲಲಿತ ನಟುವಾಂಗ ನಿರ್ವಹಿಸುವ ಜೊತೆಗೆ ಮಹಿಳಾ ವಾದ್ಯ ಕಲಾವಿದೆಯರ ಸಂಘಟಿತ ಪ್ರತಿಭಾ ಪ್ರಕಾಶಕ್ಕೆ ಅವಕಾಶ ನೀಡಿದ್ದು ನಿಜಕ್ಕೂ ಅವರ ಅಸ್ಮಿತೆ ಎನ್ನಬಹುದು.

**ಸೋತ ರಾಜನನ್ನು ಪ್ರಜೆಗಳು ತೊರೆಯುತ್ತಾರೆ
ಸೋತ ರಾಜಕಾರಣಿಯನ್ನು ಮತದಾರರು ಮರೆಯುತ್ತಾರೆ
ಹಣ್ಣು ಬಿಡದ ಮರವನ್ನು ಪಕ್ಷಿಗಳು ತೊರೆಯುತ್ತವೆ
ಹಾಲು ಕೊಡದ ಹಸುವನ್ನ ಕಡೆಗಣಿಸುತ್ತಾರೆ
ದುಡಿಮೆ ಇಲ್ಲದ ಮಗನನ್ನು ತಂದೆ ತಾಯಿಗಳು ನಿರ್ಲಕ್ಷ್ಯ ಮಾಡುತ್ತಾರೆ ಇತ್ಯಾದಿ.**

ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ಗೆದ್ದವರು ನಮ್ಮವರೇ!, ಸೋತವರು ನಮ್ಮವರೇ! ಯಾಕಿಷ್ಟು ಕಿಚ್ಚು!

ನಾವೆಲ್ಲಾ ಮನುಷ್ಯರಲ್ಲವೇ! ನಾವೆಲ್ಲಾ ಭಾರತ ಮಾತೆಯ ಮಕ್ಕಳಲ್ಲವೇ ಅಂದರೆ ಭಾರತೀಯರಲ್ಲವೇ! ನಮ್ಮ ತಾಯಿ, ತಾಯಿ ಅಲ್ಲವೇ! ನಮ್ಮ ತಂದೆ, ತಂದೆ ಅಲ್ಲವೇ! ನಮ್ಮ ಗುರು, ಗುರು ಅಲ್ಲವೇ! ಇಲ್ಲಿ ಯಾರೂ ಕೂಡ ಗೆಲುವು ಅಲ್ಲ, ಸೋಲು ಅಲ್ಲ. ಗೆಲುವು ಮತ್ತು ಸೋಲು ಎರಡು ಒಂದೇ! ಇಬ್ಬರೂ ನಮ್ಮವರಲ್ಲವೇ! ಈ ಬಗ್ಗೆ ಅರ್ಥೈಸಿಕೊಳ್ಳುವಲ್ಲಿ ವಿಫಲವಾಗಿರುವುದರಿಂದ ಕಿಚ್ಚು ತಾನಾಗಿ ಬರುತ್ತದೆ. ಪಂಚಭೂತಗಳ ಲೆಕ್ಕದಲ್ಲಿ ಯಾವುದೇ ತಾರತಮ್ಯ, ವ್ಯತ್ಯಾಸ ಹಾಗೂ ಹಂಚಿಕೆ ಇಲ್ಲದೇ ಬದುಕುವ ಮನುಷ್ಯ ಪ್ರಾಣಿ ನಾವಲ್ಲವೇ ಈ ಭೂಮಿ ನಮ್ಮದಲ್ಲ, ಈ ಆಕಾಶ ನಮ್ಮದಲ್ಲ, ಈ ಗಾಳಿ ನಮ್ಮದಲ್ಲ, ಈ ನೀರು ನಮ್ಮದಲ್ಲ, ಈ ಬೆಂಕಿ ನಮ್ಮದಲ್ಲ. ಹೀಗಿರುವಾಗ ನಾವು ಕಟ್ಟಿರುವ ಮನೆ ಕೂಡ ನಮ್ಮದಲ್ಲ. ಈ ದೇಹ ನನ್ನದಲ್ಲ, ಈ ಹೆಸರು ಸಹ ನನ್ನದಲ್ಲ ಹಾಗಾದರೆ ನಾನು ಯಾರು ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಸುಮ್ಮನೆ ನನ್ನದು ಎಂದು ಹೇಳಿಕೊಳ್ಳಬೇಕಷ್ಟೆ. ಆದರೆ ಆಳವಾಗಿ ಅರ್ಥೈಸಿಕೊಂಡರೆ ನಾವು ಏನೇನೂ ಇಲ್ಲ. ನಾವು ಶಾಶ್ವತವಲ್ಲದ ತಾತ್ಕಾಲಿಕ ಇದರ ಅರಿವು ಮಾನವನಲ್ಲಿ ಬೇರೂರಬೇಕು.

ಅಂದರೆ ಪ್ರಪಂಚದಲ್ಲಿ ಎಲ್ಲರೂ ಲಾಭವನ್ನು ಮಾತ್ರ ನೋಡುತ್ತಾರೆ. ಎಲ್ಲಿಯವರೆಗೆ ನಮ್ಮ ಉಪಯೋಗ ಜನರಿಗೆ ಸಿಗುತ್ತದೆಯೋ ಅಲ್ಲಿಯವರೆಗೆ ಮಾತ್ರ ನಮ್ಮ ಬೆಲೆ.ಸಂತನಿರಲಿ, ಮಹಂತರಿರಲಿ, ಅನುಭವಿಗಳಿರಲಿ, ಜ್ಞಾನಿಗಳಿರಲಿ ಸಾವು ಯಾರಿಗೆ ಯಾವಾಗ ಹೇಗೆ ಬರುತ್ತದೆ ಎಂದು ತಿಳಿಯದು. ಅದು ನೀರಿನ ಮೇಲೆ ಗುಳ್ಳೆ.ಸಾವಿನ ಬಗ್ಗೆ ಚಿಂತೆ ಮಾಡದೇ ಸಾಧನೆ ಮಾಡಿ ಸಮಾಜಕ್ಕೆ ತೋರಿಸಬೇಕು.ಸಾವು ಬಂದಾಗ ಮರಣವೇ ಮಹಾನವಮಿ ಎನ್ನುವ ಭಾವವಿರಬೇಕು. ಸಾಧನೆ ಇಲ್ಲದೇ ಸಾವಾದರೆ ಸಾವಿಗೆ ಅವಮಾನ ಅದೇ ರೀತಿ ಆದರ್ಶ ಇಲ್ಲದ ರೀತಿ ಬದುಕಿದರೆ ಬದುಕಿಗೆ ಅವಮಾನ.ನಮ್ಮಲ್ಲಿ ಸ್ವಜಾತಿ ಮತ್ತು ವಿಜಾತಿ ನಡುವೆ ಇರುವ ವೈರತ್ವ, ವೈಶಮ್ಯ, ತಾರತಮ್ಯ. ಧರ್ಮ ಧರ್ಮಗಳ ನಡುವೆ ಇರುವ ವೈರತ್ವ, ವೈಶಮ್ಯ, ತಾರತಮ್ಯ, ಪಕ್ಷ ಪಕ್ಷಗಳ ನಡುವೆ ಇರುವ ವೈರತ್ವ ಇಡೀ ದೇಶದಲ್ಲಿ ಹಚ್ಚ ಹಸಿರಾಗಿ ಜೀವಂತವಾಗಿವೆ. ಈ ತಾರತಮ್ಯ ಈ ಕಾಲಕ್ಕೆ ಸರಿ ಹೋಗುವುದಿಲ್ಲ. ಸರಿಯಾಗಬೇಕಾದರೆ ಕಲಿಯುಗ ನಾಶವಾಗಬೇಕು.ಸೋಲಾಗಲೀ ಅಥವಾ

ಗೆದ್ದರೆ ಬಾಗಬೇಕು ಸೋತರೆ ಏಳಬೇಕು. ನಮ್ಮ ವಾದವನ್ನು ಕೇಳದಿದ್ದರೂ ಸುಮ್ಮನಾಗಬೇಕು, ತಪ್ಪು ಇರದಿದ್ದರೂ ಕ್ಷಮೆ ಕೇಳಬೇಕು. ಮನಸ್ಸಿನಲ್ಲಿ ನೋವಿದ್ದರೂ ಮಂದಹಾಸವಿರಬೇಕು. ಯಾರನ್ನೇ ಆಗಲೀ ಸೋಲಿಸಲು ಪ್ರಯತ್ನಿಸುವುದಕ್ಕಿಂತ ಎಲ್ಲರ ಹೃದಯ ಮತ್ತು ಮನಸ್ಸನ್ನು ಗೆಲ್ಲಲು ಯತ್ನಿಸಬೇಕು. ಸೋಲಿಸುವ ಸುಖಕ್ಕಿಂತ ಗೆಲ್ಲುವ ಖುಷಿ ದೊಡ್ಡದು.ನಿಮ್ಮನ್ನ ದೈಹಿಕವಾಗಿ, ಬೌದ್ಧಿಕವಾಗಿ, ಆಧ್ಯಾತ್ಮಿಕವಾಗಿ ಮತ್ತು ಮಾನಸಿಕವಾಗಿ ದುರ್ಬಲಗೊಳಿಸುವ ಯಾವುದನ್ನೇ ಆಗಲಿ ವಿಷ ಎಂಬಂತೆ ತಿರಸ್ಕರಿಸಿ. ಕಬ್ಬಿಣದ ನಾಶಕ್ಕೆ ಅದಕ್ಕೆ ಹಿಡಿಯುವ ತುಕ್ಕೇ ಮೂಲ ಕಾರಣ, ಅದೇ ರೀತಿ ಮನುಷ್ಯನ ನಾಶಕ್ಕೆ ಅವನ ಮನಸ್ಸೇ ಮೂಲ ಕಾರಣ.

ಗೆಲುವಾಗಲೀ ಜೀವನದಲ್ಲಿ ಖುಷಿಯಾಗಿರಬೇಕೆಂದರೆ ಹೇಗೆ ಬಂತೋ ಹಾಗೆ ಬದುಕಬೇಕು. ನುಡಿದಂತೆ ನಡೆಯಬೇಕು, ನಡೆದಂತೆ ನುಡಿಯಬೇಕು, ನುಡಿದಂತೆ ಬದುಕಬೇಕು.

ನಮ್ಮ ಬದುಕು ನಾಶವಾಗಬಾರದು ತಿಳಿದು ಬದುಕಬೇಕು. ಅಜ್ಞಾನಿಯಾಗಬಾರದು ಜ್ಞಾನಿಗಳಾಗಿ ಸದಾ ಆನಂದವಾಗಿರಬೇಕು ದುಃಖಿಗಳಾಗಬಾರದು. ಮನುಷ್ಯ ಮನುಷ್ಯನ ನಡುವೆ ಯಾವುದೇ ಸಂಘರ್ಷ, ಪೈಪೋಟಿ ಇರಬಾರದು. ಇಲ್ಲಿ ಸೋತವರು ನಮ್ಮವರೇ ಮತ್ತು ಗೆದ್ದವರು ನಮ್ಮವರೇ ಅದಕ್ಕೆ ಏಕೆ ವೈಮನಸು, ದ್ವೇಷ, ಅಸೂಯೆ, ಹೊಟ್ಟೆ ಉರಿ, ಹೊಟ್ಟೆ ಕಿಚ್ಚು.2025ನೇ ಐಪಿಎಲ್ ಕ್ರಿಕೆಟ್ ಮ್ಯಾಚ್ ಮುಗಿಯಿತು ಇದರಲ್ಲಿ ಭಾಗವಹಿಸಿದ ಎಲ್ಲಾ 10 ಟೀಮಿನ ಎಲ್ಲಾ ಆಟಗಾರರು ಕಠಿಣ ತರಬೇತಿ ಪಡೆದ ಅನುಭವಿಗಳೆ. ಇವರಲ್ಲಿ ಗೆದ್ದವರು ನಮ್ಮವರೇ ಸೋತವರು ನಮ್ಮವರೇ ಯಾವುದೇ ಕಿಚ್ಚು ಉದ್ಭವವಾಗುವುದಿಲ್ಲ.

ಒಟ್ಟಾರೆ ಮನುಷ್ಯ ಆಸೆ, ವ್ಯಾಮೋಹವನ್ನು ಸಂಪೂರ್ಣವಾಗಿ ತ್ಯಜಿಸಬೇಕು. ಒಟ್ಟಿನಲ್ಲಿ ಮನೋಬಲದಿಂದ ಕಲ್ಪಿಸಿಕೊಳ್ಳಿ, ಹೃದಯ ಬಲದಿಂದ ಅದನ್ನು ನಂಬಿ ಕೊನೆಗೆ ದೈಹಿಕ ಬಲದಿಂದ ಸಾಧನೆ ಮಾಡಿ ತೋರಿಸಿ. ಅಖಂಡ ಭಾರತ ಉಳಿಯಬೇಕಾದರೆ ನಾವೆಲ್ಲಾ ಒಂದಾಗಿ ಕಾಲದೇಶ,ಜಾತಿ, ಧರ್ಮ,ಭಾಷೆ,ಪಕ್ಷ ಮೀರಿ ಬದುಕಬೇಕು ಅದೇ ನಿಜವಾದ ಬದುಕು.

ಏನಿದು ಮೆದುಳಿನ ಪಾರ್ಶ್ವವಾಯು ತೀವ್ರ ತಲೆ ನೋವು, ಕೈ, ಕಾಲುಗಳಲ್ಲಿ ಜುಮ್ಮೆನಿಸುವಿಕೆ ಬ್ರೈನ್‌ಸ್ಟ್ರೋಕ್ ಚಿಹ್ನೆಗಳಿವು: ವೈದ್ಯರು ತಿಳಿಸುವುದೇನು?

ಪಾರ್ಶ್ವವಾಯು ಅಪಾಯಕಾರಿಯಾದ ಆರೋಗ್ಯದ ಸ್ಥಿತಿಯಾಗಿದೆ. ಪಾರ್ಶ್ವವಾಯುವಿಗೆ ತುತ್ತಾದವರಿಗೆ ತಕ್ಷಣವೇ ವೈದ್ಯಕೀಯ ಚಿಕಿತ್ಸೆ ನೀಡಬೇಕಾಗುತ್ತದೆ. ಈ ಗಂಭೀರ ಕಾಯಿಲೆಯ ಕುರಿತು ಜಾಗೃತಿ ಮೂಡಿಸಲು ಪ್ರತಿವರ್ಷ ಅಕ್ಟೋಬರ್ 29ರಂದು 'ವಿಶ್ವ ಪಾರ್ಶ್ವವಾಯು ದಿನ' ಆಚರಿಸಲಾಗುತ್ತದೆ. ಮೆದುಳಿನ ಪಾರ್ಶ್ವವಾಯು ಎನ್ನುವ ಸ್ಥಿತಿಯು ಮೆದುಳಿಗೆ ರಕ್ತ ಪೂರೈಕೆ ಸ್ಥಗಿತಗೊಂಡಾಗ, ತೊಂದರೆಗೊಳಗಾದಾಗ ಸಂಭವಿಸುವ ಒಂದು ತುರ್ತು ಆರೋಗ್ಯದ ಸಮಸ್ಯೆಯಾಗಿದೆ. ಈ ಆರೋಗ್ಯದ ಸ್ಥಿತಿಯನ್ನು ಸಾಮಾನ್ಯ ಭಾಷೆಯಲ್ಲಿ 'ಲಕ್ವ' ಹೇಳಲಾಗುತ್ತದೆ. ಮೆದುಳಿನ ಜೀವಕೋಶಗಳು ಸರಿಯಾಗಿ ಕೆಲಸ ಮಾಡಲು ಆಮ್ಲಜನಕ, ಪೋಷಕಾಂಶಗಳು ಅವಶ್ಯವಾಗಿರುತ್ತದೆ. ರಕ್ತದ ಹರಿವು ಸ್ಥಗಿತವಾದರೆ ಮೆದುಳಿನ ಜೀವಕೋಶಗಳು ಕೆಲವೇ ನಿಮಿಷಗಳಲ್ಲಿ ಸಾಯಲು ಶುರುವಾಗುತ್ತವೆ.

ವೈದ್ಯರು ತಿಳಿಸುವ ಪ್ರಕಾರ, ರಕ್ತನಾಳಗಳಲ್ಲಿ ರಕ್ತ ಹೆಪ್ಪುಗಟ್ಟಿದಾಗ, ಕೊಬ್ಬಿನ ಪದಾರ್ಥಗಳು ಶೇಖರಣೆಯಾದಾಗ ಪ್ಲೇಕ್‌ಗಳು ಉಂಟಾಗಿ ಪಾರ್ಶ್ವವಾಯು ಸಂಭವಿಸುತ್ತದೆ. ಇದು ಮೆದುಳಿಗೆ ರಕ್ತ ಹರಿಯುವುದನ್ನು ತಡೆಯುತ್ತದೆ ಹಾಗೂ ಸಂಪೂರ್ಣವಾಗಿ ನಿಲ್ಲಿಸುತ್ತದೆ. ಇದರಿಂದಾಗಿ ಆಮ್ಲಜನಕ ಮತ್ತು ಅಗತ್ಯ ಪೋಷಕಾಂಶಗಳ ಪೂರೈಕೆಗೆ ಅಡಚಣೆಯುಂಟಾಗುತ್ತದೆ. ಇದರ ಪರಿಣಾಮವಾಗಿ ಕೆಲವೇ ನಿಮಿಷಗಳಲ್ಲಿ ಮೆದುಳಿನ ಜೀವಕೋಶಗಳು ನಾಶವಾಗಲು ಪ್ರಾರಂಭಿಸುತ್ತವೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಮೆದುಳಿನ ಒಳಗೆ ರಕ್ತಸ್ರಾವ ಆಗುವುದರಿಂದಲೂ ಪಾರ್ಶ್ವವಾಯು ಉಂಟಾಗಬಹುದು. ಹಾನಿ ವ್ಯಾಪಕವಾಗಿದ್ದರೆ ತೀವ್ರ ಸ್ವರೂಪದ್ದಾಗಿರುತ್ತದೆ. ಇನ್ನು ಕೆಲವು ಜನರಿಗೆ ಮಿನಿ ಸ್ಟ್ರೋಕ್ ಕಾಣಿಸಬಹುದು. ಮಿನಿ ಸ್ಟ್ರೋಕ್ ಅಂದರೆ ಹಾನಿಯು ಕೆಲವೇ ನಿಮಿಷಗಳವರೆಗೆ ಮಾತ್ರ ಇರುತ್ತದೆ. ಮೆದುಳಿನ ಮೇಲೆ ಶಾಶ್ವತ ಪರಿಣಾಮ ಬೀರದಿರುವ ಸ್ಥಿತಿ ಇದಾಗಿದೆ. ಈ ಸಂದರ್ಭದಲ್ಲಿ ಲಕ್ಷಣಗಳು ಪೂರ್ಣ ಪ್ರಮಾಣದ ಪಾರ್ಶ್ವವಾಯುವಿನಂತೆಯೇ ಇರುತ್ತವೆ. ಭವಿಷ್ಯದಲ್ಲಿ ಸಂಭವಿಸಬಹುದಾದ ಹೆಚ್ಚು ಗಂಭೀರವಾದ ಪಾರ್ಶ್ವವಾಯುವಿನ ಮುನ್ನೆಚ್ಚರಿಕೆ ಲಕ್ಷಣಗಳಾಗಿ ಕಾರ್ಯನಿರ್ವಹಿಸುತ್ತವೆ.

ಪಾರ್ಶ್ವವಾಯು ಮೆದುಳಿಗೆ ಶಾಶ್ವತ ಹಾನಿಯನ್ನು ಉಂಟುಮಾಡಬಹುದು, ದೀರ್ಘಕಾಲೀನ ಅಂಗವೈಕಲ್ಯಕ್ಕೆ ಕಾರಣವಾಗಬಹುದು ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ ಎಂದು ವೈದ್ಯರು ತಿಳಿಸುತ್ತಾರೆ. ಮೆದುಳಿಗೆ ರಕ್ತ ಒಯ್ಯುವ ರಕ್ತನಾಳಗಳಲ್ಲಿ ರಕ್ತ ಹೆಪ್ಪುಗಟ್ಟುವಿಕೆಯಿಂದ ಅಡಚಣೆ ಉಂಟಾಗುವುದನ್ನು ಇಸ್ಕೆಮಿಕ್ ಸ್ಟ್ರೋಕ್ ಹೇಳಲಾಗುತ್ತದೆ. ರಕ್ತನಾಳಗಳಲ್ಲಿ ರಕ್ತ ಹೆಪ್ಪುಗಟ್ಟಿ ಮೆದುಳಿಗೆ ರಕ್ತ ಹರಿಯುವುದನ್ನು ತಡೆಯುತ್ತದೆ.

ನೋಡಲು ಚಿಕ್ಕದಾಗಿದ್ದರೂ ಪೋಷಕಾಂಶಗಳು ಹೇರಳ! ಕಿವಿ ಹಣ್ಣನ್ನು ವಾರಕ್ಕೊಮ್ಮೆಯಾದರೂ ತಿನ್ನಿ

ಕಿವಿ ಹಣ್ಣು ಗಾತ್ರದಲ್ಲಿ ಚಿಕ್ಕದಾಗಿದ್ದರೂ ಪೋಷಕಾಂಶಗಳ ದೃಷ್ಟಿಯಿಂದ ಮಹತ್ವದ ಹಣ್ಣಾಗಿದೆ. ಇದರಲ್ಲಿ ವಿಟಮಿನ್ ಸಿ, ವಿಟಮಿನ್ ಕೆ, ವಿಟಮಿನ್ ಇ, ನಾರಿನಾಂಶ, ಪೊಟ್ಯಾಸಿಯಂ ಮತ್ತು ಫೋಲೇಟ್‌ಗಳಿವೆ. ಸಮತೋಲಿತ ಆಹಾರದ ಭಾಗವಾಗಿ ಕಿವಿ ಹಣ್ಣನ್ನು ಸೇವಿಸುವುದರಿಂದ ರೋಗನಿರೋಧಕ ವ್ಯವಸ್ಥೆ, ಜೀರ್ಣಕ್ರಿಯೆ ಮತ್ತು ಹೃದಯದ ಆರೋಗ್ಯಕ್ಕೆ ಪ್ರಯೋಜನವಾಗಬಹುದು. ಆದರೆ ಈ ಹಣ್ಣು ಸೇವನೆಯಿಂದ ಎಲ್ಲಾ ಕಾಯಿಲೆಗಳನ್ನು ಗುಣಪಡಿಸಬಹುದು ಎಂದಲ್ಲ. ಇದರ ಸೇವನೆಯಿಂದ ದೇಹಕ್ಕೆ ಸಾಕಷ್ಟು ಪ್ರಯೋಜನಗಳಿವೆ. ಹಾಗಾದರೆ ಇದು ಯಾರಿಗೆ ಒಳ್ಳೆಯದು ಇದರಿಂದ ಸಿಗುವ ಪ್ರಯೋಜನಗಳೇನು ಎಂಬುದನ್ನು ಸ್ಟೋರಿ ಮೂಲಕ ತಿಳಿದುಕೊಳ್ಳಿ. ಕಿವಿ ಹಣ್ಣಿನಲ್ಲಿ ವಿಟಮಿನ್ ಸಿ ಸಮೃದ್ಧವಾಗಿದೆ. ಇದು ದೇಹದ ರೋಗನಿರೋಧಕ ವ್ಯವಸ್ಥೆಯ ಸಾಮಾನ್ಯ ಕಾರ್ಯನಿರ್ವಹಣೆಗೆ ಸಹಾಯ

ಮಾಡುತ್ತದೆ. ಜೀವಕೋಶಗಳನ್ನು ಹಾನಿಯಿಂದ ರಕ್ಷಿಸುವ ಪ್ರಕ್ರಿಯೆಯಲ್ಲಿಯೂ ಪಾತ್ರವಹಿಸುತ್ತದೆ. ನಿಯಮಿತವಾಗಿ ಹಣ್ಣುಗಳು ಮತ್ತು ತರಕಾರಿಗಳನ್ನು ಸೇವಿಸುವುದು ಒಟ್ಟಾರೆ ಆರೋಗ್ಯಕ್ಕೆ ಪ್ರಯೋಜನಕಾರಿ. ಕಿವಿ ಹಣ್ಣಿನಲ್ಲಿರುವ ನಾರಿನಾಂಶ ಕರುಳಿನ ಆರೋಗ್ಯವನ್ನು ಕಾಪಾಡಲು ಮತ್ತು ಮಲಬದ್ಧತೆಯನ್ನು ಕಡಿಮೆ ಮಾಡಲು ನೆರವಾಗಬಹುದು. ಕೆಲವು ಅಧ್ಯಯನಗಳಲ್ಲಿ ಕಿವಿ ಹಣ್ಣಿನ ಸೇವನೆಯು ಮಲವಿಸರ್ಜನೆಯ ನಿಯಮಿತತೆಯನ್ನು ಸುಧಾರಿಸಲು ಸಹಾಯ ಮಾಡಿರುವುದು ಕಂಡುಬಂದಿದೆ. ಹೊಟ್ಟೆ ಉಬ್ಬರ ಅಥವಾ ಅಜೀರ್ಣದ ಸಮಸ್ಯೆಗಳು ನಿರಂತರವಾಗಿದ್ದರೆ ವೈದ್ಯರ ಸಲಹೆ ಪಡೆಯುವುದು ಉತ್ತಮ. ಕಿವಿ ಹಣ್ಣಿನಲ್ಲಿ ನೀರಿನ ಅಂಶ ಮತ್ತು ನಾರಿನಾಂಶವಿದ್ದು, ಸಾಮಾನ್ಯವಾಗಿ ಕಡಿಮೆ ಕ್ಯಾಲೊರಿಗಳನ್ನು ಹೊಂದಿರುತ್ತದೆ. ಇದನ್ನು ಉಪಾಹಾರ ಅಥವಾ ಮಧ್ಯಾಹ್ನದ ಲಘು ಆಹಾರವಾಗಿ ಸೇವಿಸಬಹುದು. ನಾರಿನಾಂಶ ಹೊಟ್ಟೆ ತುಂಬಿದ ಅನುಭವ ನೀಡಲು ಸಹಾಯ ಮಾಡುತ್ತದೆ. ಆದರೆ ತೂಕ ಇಳಿಕೆಗೆ ಕಿವಿ ಹಣ್ಣೊಂದೇ ಸಾಕಾಗುವುದಿಲ್ಲ. ಸಮತೋಲಿತ ಆಹಾರ ಮತ್ತು ನಿಯಮಿತ ವ್ಯಾಯಾಮವೂ ಅಗತ್ಯ. ಕಿವಿ ಹಣ್ಣಿನಲ್ಲಿ ವಿಟಮಿನ್ ಸಿ ಸೇರಿದಂತೆ ಹಲವು ಪೋಷಕಾಂಶಗಳಿವೆ. ಆದರೆ ಇದು ರಕ್ತದಲ್ಲಿನ ಪ್ಲೇಟ್‌ಲೆಟ್‌ಗಳನ್ನು ತ್ವರಿತವಾಗಿ ಹೆಚ್ಚಿಸುತ್ತದೆ ಎಂಬುದಕ್ಕೆ ದೃಢವಾದ ವೈಜ್ಞಾನಿಕ ಪುರಾವೆಗಳಿಲ್ಲ.

ನ.5ರಂದು ಒಂದು ಲಕ್ಷ ಎತ್ತಿನ ಬಂಡಿಗಳಿಂದ ಹೆದ್ದಾರಿ ತಡೆ

ನಂದಿ ಸೇನೆ ವತಿಯಿಂದ ಬಿಜ್ಜರಗಿಯ ಶ್ರೀ ಸನ್ಯಾಸಪ್ಪನ ಮಠದಲ್ಲಿ 11 ದಿನಗಳ ಕಾಲ ಧರಣಿ ಸತ್ಯಾಗ್ರಹ ನಡೆಸಲಾಗಿದೆ

• **ಉದಯವಾಹಿನಿ, ವಿಜಯಪುರ, :**

ಜೋಡೆತ್ತಿನ ಕೃಷಿಗೆ ಪ್ರಥಮ ಆದ್ಯತೆ ನೀಡಬೇಕು. ಜೋಡೆತ್ತಿನ ಕೃಷಿಕರಿಗೆ ಪ್ರತಿ ತಿಂಗಳು 11 ಸಾವಿರ ಪ್ರೋತ್ಸಾಹಧನ ನೀಡಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕಳೆದ ಮೂರು ವರ್ಷಗಳಿಂದ ನಡೆಸುತ್ತಿರುವ ಹೋರಾಟಕ್ಕೆ ಸರ್ಕಾರ ಸ್ಪಂದಿಸದಿದ್ದರೆ ನ.5ರಂದು ಒಂದು ಲಕ್ಷ ಎತ್ತಿನ ಬಂಡಿಗಳೊಂದಿಗೆ ರಾಷ್ಟ್ರೀಯ ಹೆದ್ದಾರಿ ತಡೆದು ಉಗ್ರ ಹೋರಾಟ ನಡೆಸಲಾಗುವುದು ಎಂದು ನಂದಿ ಸೇನೆ ಪ್ರಮುಖ ಬಸವರಾಜ ಬಿರಾದಾರ ಎಚ್ಚರಿಸಿದರು.

1 : ಸರ್ಕಾರ ಪರ್ಯಾಯ ಮಾರ್ಗ ಹೆದ್ದಾರಿ
2 : 80ರಷ್ಟು ಜೋಡೆತ್ತು ಕೃಷಿ ಪದ್ಧತಿ ನಾಶ
3 : 11 ಸಾವಿರ ಪ್ರೋತ್ಸಾಹಧನಕ್ಕೆ ಆಗ್ರಹ

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ರಾಜ್ಯದ ವಿವಿಧ ತಾಲ್ಲೂಕುಗಳಲ್ಲಿ ಎತ್ತಿನ ಬಂಡಿಗಳೊಂದಿಗೆ ಬೃಹತ್ ಹೋರಾಟ ಹಾಗೂ ರಸ್ತೆ ತಡೆ ನಡೆಸಲಾಗಿದೆ. ನೂರಾರು

ಉದಯವಾಹಿನಿ ಚಿತ್ರ

ಗ್ರಾಮಗಳ ರೈತರು ತಹಶೀಲ್ದಾರರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಆದರೂ ಸರ್ಕಾರ ಬೇಡಿಕೆಗಳ ಬಗ್ಗೆ ಯಾವುದೇ ರೀತಿಯ ಸ್ಪಂದನೆ ನೀಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ನಂದಿ ಸೇನೆ ವತಿಯಿಂದ ಬಿಜ್ಜರಗಿಯ ಶ್ರೀ ಸನ್ಯಾಸಪ್ಪನ ಮಠದಲ್ಲಿ 11 ದಿನಗಳ ಕಾಲ ಧರಣಿ ಸತ್ಯಾಗ್ರಹ ನಡೆಸಲಾಗಿದೆ. ಸರ್ಕಾರ ಇನ್ನೂ ಎಚ್ಚೆತ್ತುಕೊಳ್ಳದ ಹಿನ್ನೆಲೆಯಲ್ಲಿ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಚಿಕ್ಕಲಕಿ ಸಮೀಪ ಇದೇ 30ರಿಂದ ನೂರಾರು ಎತ್ತಿನ ಬಂಡಿಗಳ ಮೂಲಕ ಹೆದ್ದಾರಿ ತಡೆ ನಡೆಸಲಾಗುವುದು. ಇದಕ್ಕೂ ಸರ್ಕಾರ

> **ನಂದಿ ಕೃಷಿ ಸಂಸ್ಕೃತಿಯ ಪುನಶ್ಚೇತನಕ್ಕಾಗಿ ರಾಜ್ಯ ಬಜೆಟ್‌ನ ಶೇ.10ರಷ್ಟು ಅನುದಾನವನ್ನು ಜೋಡೆತ್ತಿನ ಕೃಷಿಕರಿಗಾಗಿ ಮೀಸಲಿಡಬೇಕು. ಜೋಡೆತ್ತಿನ ಕೃಷಿಕರಿಗೆ ಪ್ರತಿ ತಿಂಗಳು 11 ಸಾವಿರ ಪ್ರೋರೀತ್ಸಾಹಧನ ನೀಡುವ ಯೋಜನೆ ಜಾರಿಗೆ ತರಬೇಕು. ನಂದಿ ವಿದ್ಯುತ್, ಗ್ಯಾಸ್, ಅಡುಗೆ ಎಣ್ಣೆ, ಗೊಬ್ಬರ, ಔಷಧ ಹಾಗೂ ಆಹಾರ ತಯಾರಿಕೆಗೆ ಪ್ರೋತ್ಸಾಹ ನೀಡುವ ಯೋಜನೆಗಳನ್ನು ಸರ್ಕಾರ ರೂಪಿಸಬೇಕು ಎಂದು ಒತ್ತಾಯಿಸಿದರು.**
> -ಬಸವರಾಜ ಬಿರಾದಾರ

ಸ್ಪಂದಿಸದಿದ್ದರೆ ನ.5ರಂದು ಒಂದು ಲಕ್ಷ ಎತ್ತಿನ ಬಂಡಿಗಳೊಂದಿಗೆ ರಾಜ್ಯದ ಹೆದ್ದಾರಿಗಳನ್ನು ತಡೆಯುವುದು ನಿಶ್ಚಿತ ಎಂದು ಹೇಳಿದರು. ಕಳೆದ 20 ವರ್ಷಗಳಲ್ಲಿ ಶೇ.80ರಷ್ಟು ಜೋಡೆತ್ತು ಕೃಷಿ ಪದ್ಧತಿ ನಾಶವಾಗಿದ್ದು, ಇದರಿಂದ ಮಣ್ಣಿನ ಫಲವತ್ತತೆ, ಬೆಳೆ ಪದ್ಧತಿ ಹಾಗೂ ಕೃಷಿ ಸಂಸ್ಕೃತಿ ನಾಶವಾಗುತ್ತಿದೆ.

ರೈತರ ನಿಜವಾದ ಆಸ್ತಿಯಾದ ಎತ್ತುಗಳ ಶಕ್ತಿಯಿಂದಲೇ ಬಯಲುಸೀಮೆಯ ಗ್ರಾಮಗಳು ಉಳಿಯಲು ಸಾಧ್ಯ ಎಂಬ ಅರಿವು ಮೂಡಿಸಿದ ಜ್ಞಾನಯೋಗಿ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಪ್ರೇರಣೆಯಿಂದ

> **ಇಲ್ಲವಾದರೆ ಮುಖ್ಯಮಂತ್ರಿ ಕೂಡಲೇ ವಿಶೇಷ ಅಧಿವೇಶನ ಕರೆದು ರಾಜ್ಯದ ಜೋಡೆತ್ತಿನ ಕೃಷಿಕರ ಬೇಡಿಕೆಗಳ ಕುರಿತು ಚರ್ಚಿಸಿ, ಸೂಕ್ತ ನಿರ್ಧಾರ ಕೈಗೊಂಡು ರಾಜ್ಯವನ್ನು ನಿಜವಾದ ಅಭಿವೃದ್ಧಿಯ ಪಥದಲ್ಲಿ ಕೊಂಡೊಯ್ಯಬೇಕು ಎಂದು ಆಗ್ರಹಿಸಿದರು.**

ನಂದಿ ಕೃಷಿ ಸಂಸ್ಕೃತಿಯ ಪುನಶ್ಚೇತನಕ್ಕಾಗಿ 'ನಂದಿ ಕೂಗು' ಅಭಿಯಾನ ಹಾಗೂ ನಂದಿ ಸೇನೆ ಸಂಘಟನೆ ಆರಂಭಿಸಲಾಗಿದೆ. ರಾಜ್ಯಾದ್ಯಂತ ಎತ್ತಿನ ಕೃಷಿಯ ಮಹತ್ವದ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ ಎಂದರು. ನಂದಿ ಸೇನೆಯ ಬೇಡಿಕೆಗಳು ಜ್ಞಾನಯೋಗಿ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರು ತೋರಿದ ಮಾರ್ಗವಾಗಿದೆ. ಇದಕ್ಕಿಂತ ಉತ್ತಮವಾದ ಪರ್ಯಾಯ ಕೃಷಿ ಪದ್ಧತಿ ಅಥವಾ ಮಾರ್ಗವೊಂದನ್ನು ಸರ್ಕಾರ ರಾಜ್ಯದ ಅಥವಾ ದೇಶದ ಯಾವುದೇ ಕೃಷಿ ವಿಶ್ವವಿದ್ಯಾಲಯದ ಮೂಲಕ ತೋರಿಸಿದರೆ, ಹೆದ್ದಾರಿ ತಡೆ ಸೇರಿದಂತೆ ಹೋರಾಟವನ್ನು ತಕ್ಷಣವೇ ಹಿಂಪಡೆಯಲಾಗುವುದು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಎಸ್.ಜಿ. ನಾಡಗೌಡ, ಸಂಗಮೇಶ ಕಾಮನ್ನವರ್, ಮಹಾದೇವ ಹಾಳ್ಳಿ ಹಾಗೂ ಅಭಿಷೇಕ ಬಿರಾದಾರ ಉಪಸ್ಥಿತರಿದ್ದರು.

ರಾಜ್ಯದ 10ಪ್ರತಿಶತಃ ಬಜೆಟ್ ಕೃಷಿಕರನ್ನು ಉಳಿಸಲು ಮೀಸಲಿಡಿ:ಜೋಡೆತ್ತಿನ ಕೃಷಿಕರಿಗೆ 11ಸಾವಿರ ಪ್ರೋತ್ಸಾಹ ಧನ ನೀಡಲು ಗಂಗಾಣಿ ಒತ್ತಾಯ

• **ಉದಯವಾಹಿನಿ, ಚಿಂಚೋಳಿ:**

ಜೋಡೆತ್ತಿನ ಕೃಷಿಕರಿಗೆ ಮಾಸಿಕ 11ಸಾವಿರ ರೂ.ಪ್ರೋತ್ಸಾಹ ಧನ ಹಾಗೂ ಜೋಡೆತ್ತಿನ ಕೃಷಿಕರಿಗೆ ಉಳಿಸಿ ಬೆಳೆಸಲು ರಾಜ್ಯದ 10ಪ್ರತಿಶತಃದಷ್ಟು ಬಜೆಟ್ ಮೀಸಲಿಡಲು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ವತಿಯಿಂದ ವೀರಣ್ಣ ಗಂಗಾಣಿ ನೇತೃತ್ವದಲ್ಲಿ ನೂರಾರು ಜೋಡೆತ್ತು ಬಂಡಿಯೊಂದಿಗೆ ಬೃಹತ್ ಪ್ರತಿಭಟನೆ ನಡೆಸಿ ತಹಸೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿಪತ್ರ ಸಲ್ಲಿಸಿದರು.

ರೈತ ಹೋರಾಟಗಾರ ವೀರಣ್ಣ ಗಂಗಾಣಿ ಮಾತನಾಡಿ ಎತ್ತಿನ ಕೃಷಿಕರ ಕೊಡುಗೆಯನ್ನು ನಿರ್ಲಕ್ಷ್ಯಿಸಿ ಜಾರಿಗೆ ತರುತ್ತಿರುವ ಯೋಜನೆಗಳಿಂದ ಸ್ವಾತಂತ್ರ್ಯ ಪೂರ್ವದಲ್ಲಿ 1.0ಪ್ರತಿಶತಃದಷ್ಟುಯಿದ ಮಣ್ಣಿನ ಸರಾಸರಿ ಸಾವಯುವ ಇಂಗಾಲಲ ಪ್ರಮಾಣ ಇಂದು 0.33ಪ್ರತಿಶತಃದಷ್ಟು ಕುಸಿದಿದೆ,ಇದರಿಂದ ಪ್ರಕೃತಿ ವಿಕೋಪ ಹೆಚ್ಚಾಗಿ ಗ್ರಾಮದ ಎಲ್ಲಾ ಸಮಾಜದ ಜನರಿಗೆ ದಿಕ್ಕು ತೋಚದ ಪರಿಸ್ಥಿತಿ ನಿರ್ಮಾಣವಾಗಿದೆ.

ರೈತರು ಹಗಲಿರುಳು ದುಡಿದು ದೇಶಕ್ಕೆ ಅನ್ನವನ್ನು ನೀಡುತ್ತಾರೆ ಆದರೆ ಪ್ರತಿಯೊಂದು ಪಕ್ಷಗಳು ಆಡಳಿತ ಮುಂಚೆ ರೈತರ ಬೆನ್ನಲುಬು ಎಂದು ದೊಡ್ಡ ದೊಡ್ಡ ಭಾಷಣ ಮಾಡುತ್ತಾರೆ ಆದರೆ ಅದೆ ರಾಜಕೀಯ ಪಕ್ಷಗಳು ಆಡಳಿತದ ಚುಕ್ಕಾಣಿ ಹಿಡಿದ ಮೇಲೆ ರೈತರನ್ನು ತುಳಿಯುವ ಕೆಲಸ ಮಾಡುತ್ತಿವೆ ಹಾಗಾಗಿ ರೈತರ ಜೋಡೆತ್ತಿನ ಕೃಷಿಕರಿಗೆ ಪ್ರತಿ ತಿಂಗಳು ಸರ್ಕಾರ 11ಸಾವಿರ



ಉದಯವಾಹಿನಿ ಚಿತ್ರ

ರೂ.ಪ್ರೋತ್ಸಾಹ ಧನ ನೀಡಬೇಕು,ರಾಜ್ಯ ಬಜೆಟ್ನಲ್ಲಿ ಶೇಕಡಾ 10ಪ್ರತಿಶತಃದಷ್ಟು ರೈತರಿಗೆ ಪ್ರೋತ್ಸಾಹ ಧನ ನೀಡಲು ಅನುದಾನ ಮೀಸಲಿಡಬೇಕು ಎಂದು ಆಗ್ರಹಿಸಿದರು.

ಮುಖಂಡ ಗೋಪಾಲರಾವ ಕಟ್ಟಿಮನಿ ಮಾತನಾಡಿ ಈಗಾಗಲೇ ಬರಗಾಲ ಘೋಷಣೆ ಮಾಡಿದ್ದಾರೆ ರೈತರು ಸಂಕಷ್ಟದಲ್ಲಿದ್ದಾರೆ,ರೈತರ ಸಾಲಮನ್ನಾ ಮಾಡಬೇಕು,ಚಂದ್ರಂಪಳ್ಳಿ ಮತ್ತು ನಾಗರಾಳ ಜಲಾಶಯ ನೀರು ಕಾಲುವೆಗಳಿಗೆ ಮತ್ತು ಮುಲ್ಲಾಮಾರಿ ನದಿಗೆ ಬಿಡಬೇಕು ಈಗಾಗಲೇ ರೈತರ ಪಂಪ್‌ಸೆಟ್ ವಿದ್ಯುತ್ ಸಂಪರ್ಕ ಕಡಿತಗೊಳಿಸುತ್ತಿದ್ದು ಅದನ್ನು ಪುನಃ ವಿದ್ಯುತ್ ಸಂಪರ್ಕ ಕಲ್ಪಿಸಬೇಕು,ರೈತರಿಗೆ 08ಗಂಟೆ ವಿದ್ಯುತ್ ನೀಡದೆ ವಿದ್ಯುತ್ ಕಣ್ಣಾಮುಚ್ಚಲೆ ಆಟ ಆಡುವುದು ಬಿಟ್ಟು ಸತತವಾಗಿ 08ಗಂಟೆ ರೈತರಿಗೆ ವಿದ್ಯುತ್ ಕಲ್ಪಿಸಬೇಕು ಎಂದರು.ಗೌತಮ್ ಪಾಟೀಲ,ಅಬ್ದುಲ್ ಬಾಷೀದ್,ಲಕ್ಷ್ಮಣ ಆವುಂಟಿ,ಕೆಎಂ ಬಾರಿ,ಸಂತೋಷ ಗಡಂತಿ,ರಾಮರೆಡ್ಡಿ ಪಾಟೀಲ,ಹಣಮಂತ ಪೂಜಾರಿ,ರಾಜಕುಮಾರ ತಳವಾರ,ಮಾತನಾಡಿದರು.

ನಿಡಗುಂದಾ ಪರಮಪೂಜ್ಯ ಷ.ಬ್ರ.ಕರುಣೇಶ್ವರ ಶಿವಾಚಾರ್ಯರು,ಚಿಮ್ಮಾಯಿದ್ಲಾಯಿ ಮಠದ ಷ.ಬ್ರ.ವಿಜಯಮಹಾಂತೇಶ್ವರ ಶಿವಾಚಾರ್ಯರು,ಶಿವರಾಜ ಪಾಟೀಲ ಗೋಣಗಿ ,ಅಮರ ಲೋಡನೂರ,ಬಸವರಾಜ ಹಿತ್ತಲ,ಶಂಕರ ಶಿವಪೂರಿ,ಸೇರಿದಂತೆ ನೂರಾರು ರೈತರು ಇದ್ದರು.

ಇದಕ್ಕೂ ಮುಂಚೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ವತಿಯಿಂದ ಮಹಾಂತೇಶ್ವರ ಮಠದಲ್ಲಿ ಜೋಡೆತ್ತಿನ ರೈತರಿಗೆ ವಿಶೇಷ ಸನ್ಮಾನ ಹಮ್ಮಿಕೊಂಡಿದ್ದು 120ರೈತರಿಗೆ ಸನ್ಮಾನಿಸಿ ಗೌರವಿಸಿ ನಂತರ ರೈತರ ಜೋಡೆತ್ತಿನ ಬಂಡಿಯೊಂದಿಗೆ ಮಹಾಂತೇಶ್ವರ ಮಠದಿಂದ ಪ್ರಜಾಸೌಧವರೆಗೆ ಪ್ರತಿಭಟನೆ ನಡೆಸುತ್ತಾ ಆಗಮಿಸಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ತಹಸೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ನಟ ಧನ್ವೀರ್ ವಿರುದ್ಧ ಕಾನೂನು ಕ್ರಮಕ್ಕೆ ಯುವ ಮುಖಂಡ ಆಗ್ರಹ

• **ಉದಯವಾಹಿನಿ, ಮಂಗಳೂರು-**

ಕರ್ನಾಟಕದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಚಿವ ಜಮೀರ್ ಅಹಮದ್ ಖಾನ್ ಅವರ ವಿರುದ್ಧ ನಟ ಧನ್ವೀರ್ ಅವರು ನೀಡಿದ್ದಾರೆ ಎನ್ನಲಾದ ಅವಹೇಳನಕಾರಿ ಹಾಗೂ ಆಕ್ಷೇಪಾರ್ಹ ಹೇಳಿಕೆಗಳ ಕುರಿತು ಸೂಕ್ತ ತನಿಖೆ ನಡೆಸಿ, ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು ಎಂದು ಎನ್‌ಎಸ್‌ಯುಐ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಉಪಾಧ್ಯಕ್ಷರಾದ ಕೀರ್ತನ್ ಗೌಡ ಕೊಡಪಾಲ ಅವರು ಆಗ್ರಹಿಸಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರಿಗೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕಿದೆ. ಆದರೆ, ಆ ಹಕ್ಕನ್ನು ಬಳಸುವಾಗ ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಸಂಯಮ, ಜವಾಬ್ದಾರಿ ಮತ್ತು ಪರಸ್ಪರ ಗೌರವವನ್ನು ಕಾಪಾಡಿಕೊಳ್ಳುವುದು ಅತ್ಯಗತ್ಯ. ರಾಜಕೀಯ ಭಿನ್ನಾಭಿಪ್ರಾಯಗಳಿರಬಹುದು, ವಿಚಾರಧಾರೆಗಳು ಬೇರೆಬೇರೆಯಾಗಿರಬಹುದು. ಆದರೆ,

ಉದಯವಾಹಿನಿ ಚಿತ್ರ

ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸುವ ನೆಪದಲ್ಲಿ ವೈಯಕ್ತಿಕ ನಿಂದನೆ ಅಥವಾ ಆಕ್ಷೇಪಾರ್ಹ ಪದಪ್ರಯೋಗಗಳಿಗೆ ಅವಕಾಶ ನೀಡಬಾರದು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರಾಜ್ಯದ ಪ್ರಮುಖ ಸಾಂವಿಧಾನಿಕ ಹುದ್ದೆಯಲ್ಲಿದ್ದು, ಸಚಿವ ಜಮೀರ್ ಅಹಮದ್ ಖಾನ್ ಅವರು ರಾಜ್ಯ ಸರ್ಕಾರದ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಂತಹ ಸಾರ್ವಜನಿಕ ವ್ಯಕ್ತಿಗಳ ಕುರಿತು ಯಾವುದೇ ಟೀಕೆ

> **ಯುವಜನತೆ ಸೇರಿದಂತೆ ಸಾವಿರಾರು ಜನರು ಕಲಾವಿದರನ್ನು ಅನುಸರಿಸುತ್ತಾರೆ. ಹೀಗಾಗಿ, ಸಾರ್ವಜನಿಕ ವೇದಿಕೆಗಳಲ್ಲಿ ಅಥವಾ ಸಾಮಾಜಿಕ ಮಾಧ್ಯಮಗಳಲ್ಲಿ ಮಾತನಾಡುವಾಗ ಜವಾಬ್ದಾರಿಯುತ ನಡವಳಿಕೆ ಅಗತ್ಯವಾಗಿದೆ.**

ಮಾಡುವಾಗ ವಿಷಯಾಧಾರಿತವಾಗಿ ಗೌರವಯುತವಾಗಿ ಮಾತನಾಡುವುದು ಆರೋಗ್ಯಕರ ಪ್ರಜಾಪ್ರಭುತ್ವದ ಲಕ್ಷಣವಾಗಿದೆ. ಟೀಕೆ ಮತ್ತು ವಿಮರ್ಶೆ ಪ್ರಜಾಪ್ರಭುತ್ವದ ಅವಿಭಾಜ್ಯ ಅಂಗಗಳಾಗಿದ್ದರೂ, ಅವು ಕಾನೂನಿನ ಮಿತಿಯೊಳಗೆ ಇರಬೇಕು.

ಸಿನಿಮಾ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಕಲಾವಿದರು ಹಾಗೂ ಸಾರ್ವಜನಿಕವಾಗಿ ಪ್ರಭಾವ ಹೊಂದಿರುವ ವ್ಯಕ್ತಿಗಳು ತಮ್ಮ ಮಾತುಗಳು ಸಮಾಜದ ಮೇಲೆ ಬೀರುವ ಪರಿಣಾಮವನ್ನು ಅರಿತುಕೊಳ್ಳಬೇಕು.

ಸ್ವಾವಲಂಬಿ ಬದುಕಿಗೆ ಉದ್ಯಮಶೀಲತೆಯ ಉತ್ತೇಜನ

• **ಉದಯವಾಹಿನಿ,ಯಾದಗಿರಿ:**

ಉದಯವಾಹಿನಿ ಚಿತ್ರ

ವಿಕಲಚೇತನರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು, ಸ್ವಂತ ಉದ್ಯಮಗಳನ್ನು ಪ್ರಾರಂಭಿಸಿ ಆರ್ಥಿಕವಾಗಿ ಸಬಲರಾಗಲು ಉತ್ತೇಜನ ನೀಡುವ ಉದ್ದೇಶದಿಂದ ಸೆಲ್ಕೋ ಫೌಂಡೇಶನ್ ವತಿಯಿಂದ 'ಸ್ವಾವಲಂಬಿ ಬದುಕಿನತ್ತ ವಿಕಲಚೇತನರ ಜೀವನೋಪಾಯ ಮತ್ತು ಉದ್ಯಮಶೀಲತೆಯ ಮಾರ್ಗಗಳು' ಎಂಬ ವಿಶೇಷ ಕಾರ್ಯಕ್ರಮವನ್ನು ಅ. 28ರಂದು ಆಯೋಜಿಸಲಾಗಿದೆ ಎಂದು ಸೆಲ್ಕೋ ಫೌಂಡೇಶನ್ ಹಿರಿಯ ಯೋಜನಾ ವ್ಯವಸ್ಥಾಪಕ ಪಣೀಂದ್ರ ಸಿಂಗ್ ತಿಳಿಸಿದರು.ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಕಲಚೇತನರ ಸಬಲೀಕರಣ ಇಲಾಖೆ ಹಾಗೂ ಜಿಲ್ಲಾ ಪಂಚಾಯಿತಿ ಸಹಕಾರದೊಂದಿಗೆ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ನಗರದ ಶ್ರೀ ಬಾಲಾಜಿ ಕಲ್ಯಾಣ ಮಂಟಪದಲ್ಲಿ ಅಂದು ಬೆಳಿಗ್ಗೆ 10 ಗಂಟೆಗೆ ನಡೆಯುವ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಪಾಂಡ್ವೆ ರಾಹುಲ್ ತುಕಾರಾಂ ಉದ್ಘಾಟಿಸಲಿದ್ದಾರೆ.

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಶರಣಗೌಡ ಪಾಟೀಲ್ ಹಾಗೂ ಲೀಡ್ ಬ್ಯಾಂಕ್ ಮ್ಯಾನೇಜರ್ ವಿಶೇಷ ಭಾಷಣ ಮಾಡಲಿದ್ದಾರೆ. ಕರ್ನಾಟಕ ಗ್ರಾಮೀಣ ಬ್ಯಾಂಕ್ ಪ್ರಾದೇಶಿಕ ವ್ಯವಸ್ಥಾಪಕ ಜಿ.ಎಸ್. ಕೊಡ್ಲಿ ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ರಾಜ್ಯ ಸಂಯೋಜಕ ಬಿ.ಸಿ. ನರಸಿಂಹಮೂರ್ತಿ ಅವರು ವಿಕಲಚೇತನರಿಗೆ ಲಭ್ಯವಿರುವ ಜೀವನೋಪಾಯದ ಅವಕಾಶಗಳ ಕುರಿತು ಮಾತನಾಡಲಿದ್ದಾರೆ ಎಂದರು. ವಿಕಲಚೇತನರಲ್ಲಿ ಸಾಕಷ್ಟು ಕೌಶಲ್ಯ, ಸಾಮರ್ಥ್ಯ ಹಾಗೂ ಉದ್ಯಮಶೀಲತೆಯ ಆಸಕ್ತಿ ಇದ್ದರೂ ಸೂಕ್ತ ಯಂತ್ರೋಪಕರಣಗಳು, ಹಣಕಾಸಿನ ನೆರವು, ಮಾರುಕಟ್ಟೆ ಸಂಪರ್ಕ ಮತ್ತು ಸರ್ಕಾರಿ ಯೋಜನೆಗಳ ಕುರಿತು ಮಾಹಿತಿ ಕೊರತೆಯಿಂದ ಅನೇಕರು ಸ್ವಂತ ಉದ್ಯಮ ಆರಂಭಿಸಲು ಸಾಧ್ಯವಾಗುತ್ತಿಲ್ಲ. ಈ ಅಂತರವನ್ನು ಕಡಿಮೆ ಮಾಡಿ, ಅವರಿಗೆ ಸೂಕ್ತ ಮಾರ್ಗದರ್ಶನ ನೀಡುವುದು ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ ಎಂದು ತಿಳಿಸಿದರು.

537 ಕಳೆದುಹೋದ ಮೊಬೈಲ್‌ಗಳ ಪತ್ತೆ

• **ಉದಯವಾಹಿನಿ, ವಿಜಯಪುರ, :**

ಜಿಲ್ಲೆಯಲ್ಲಿ ಕಳೆದುಹೋದ ಹಾಗೂ ಕಳ್ಳತನವಾದ ಮೊಬೈಲ್‌ಗಳ ಪತ್ತೆ ಕಾರ್ಯಕ್ಕೆ ಪೊಲೀಸ್ ಇಲಾಖೆಅಇಖಖ ಪೋರ್ಟಲ್ ಅನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದು, ಇದುವರೆಗೆ ಸುಮಾರು 1.07 ಕೋಟಿ ಮೌಲ್ಯದ 537 ಮೊಬೈಲ್‌ಗಳನ್ನು ಪತ್ತೆಹಚ್ಚಲಾಗಿದೆ. ಪತ್ತೆಯಾದ ಮೊಬೈಲ್‌ಗಳನ್ನು ಸಂಬಂಧಪಟ್ಟ ವಾರಸುದಾರರಿಗೆ ಮರಳಿಸಲಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಮೊಬೈಲ್ ಸಾಧನವು ಸಾರ್ವಜನಿಕರ ದೈನಂದಿನ ಜೀವನದ ಅತ್ಯವಶ್ಯಕ ಸಾಧನವಾಗಿದೆ. ಹೀಗಾಗಿ ಮೊಬೈಲ್ ಕಳೆದುಹೋದ ಅಥವಾ ಕಳ್ಳತನವಾದ ಕುರಿತು ಪ್ರತಿದಿನ ಪೊಲೀಸ್ ಠಾಣೆಗಳಲ್ಲಿ ದೂರುಗಳು ದಾಖಲಾಗುತ್ತಿವೆ. ಇಂತಹ ಪ್ರಕರಣಗಳಲ್ಲಿ ತ್ವರಿತವಾಗಿ ಕ್ರಮ ಕೈಗೊಳ್ಳುವ ಉದ್ದೇಶದಿಂದ ಪೊಲೀಸ್ ಇಲಾಖೆ ವ್ಯವಸ್ಥೆಯನ್ನು ಬಳಸಿಕೊಳ್ಳುತ್ತಿದೆ. ಭಾರತ ಸರ್ಕಾರದ ದೂರಸಂಪರ್ಕ ಇಲಾಖೆ ರೂಪಿಸಿರುವ ಒಂದು ಕೇಂದ್ರೀಕೃತ ಡಿಜಿಟಲ್ ವ್ಯವಸ್ಥೆಯಾಗಿದ್ದು, ಮೊಬೈಲ್ ಕಳೆದುಹೋದ ಅಥವಾ ಕಳ್ಳತನವಾದ ಸಂದರ್ಭದಲ್ಲಿ ಅದರ ಸಂಖ್ಯೆಯ ಆಧಾರದ ಮೇಲೆ ಸಾಧನವನ್ನು ಪತ್ತೆಹಚ್ಚಲು, ಬ್ಲಾಕ್ ಮಾಡಲು ಹಾಗೂ ಮರುಪಡೆಯಲು ಸಹಕಾರಿಯಾಗಿದೆ.

ಕಳವು ಅಥವಾ ಕಳ್ಳತನವಾದ ಮೊಬೈಲ್‌ಗಳ ದುರುಪಯೋಗವನ್ನು ತಡೆಗಟ್ಟುವಲ್ಲಿಯೂ ವ್ಯವಸ್ಥೆ ಪರಿಣಾಮಕಾರಿಯಾಗಿದೆ. ವಿಜಯಪುರ ಜಿಲ್ಲೆಯ ಎಲ್ಲ 28 ಪೊಲೀಸ್ ಠಾಣೆಗಳಲ್ಲೂ ಪೋರ್ಟಲ್ ಅನ್ನು ಬಳಸಿಕೊಂಡು ಸಾರ್ವಜನಿಕರಿಂದ ದಾಖಲಾಗುವ ದೂರುಗಳ ಆಧಾರದ ಮೇಲೆ ನಿಯಮಿತವಾಗಿ ಮೊಬೈಲ್‌ಗಳ ಪತ್ತೆ ಕಾರ್ಯ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಜಿಲ್ಲೆಯಲ್ಲಿ ಸುಮಾರು 1,07,40,000 ಮೌಲ್ಯದ 537 ಮೊಬೈಲ್‌ಗಳನ್ನು ಪತ್ತೆಹಚ್ಚಲಾಗಿದ್ದು, ಅವುಗಳನ್ನು ಸಂಬಂಧಪಟ್ಟ ಸಾರ್ವಜನಿಕರಿಗೆ ಮರಳಿಸುವ ಪ್ರಕ್ರಿಯೆ ನಡೆಯುತ್ತಿದೆ.

> **ಮೊಬೈಲ್ ಪತ್ತೆ ಕಾರ್ಯ ನಿರಂತರವಾಗಿದ್ದು, ಸಾರ್ವಜನಿಕರಿಂದ ದಾಖಲಾಗುವ ದೂರುಗಳ ಆಧಾರದ ಮೇಲೆ ಮುಂದೆಯೂ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದ್ದಾರೆ.**

ಎಸ್‌ಐಆರ್ ಪ್ರಕ್ರಿಯೆ ಬಗ್ಗೆ ಕಾಂಗ್ರೆಸ್ ಆರೋಪದಲ್ಲಿ ಹುರುಳಿಲ್ಲ

• **ಉದಯವಾಹಿನಿ, ಬೆಳಗಾವಿ:**

ಉದಯವಾಹಿನಿ ಚಿತ್ರ

'ಕರ್ನಾಟಕದಲ್ಲಿ ಎಸ್‌ಐಆರ್ ಪ್ರಕ್ರಿಯೆ ಕಾನೂನುಬದ್ಧವಾಗಿ ನಡೆದಿದೆ. ಕಾಂಗ್ರೆಸ್ ಮಾಡುತ್ತಿರುವ ಇಲ್ಲಸಲ್ಲದ ಆರೋಪಗಳಲ್ಲಿ ಯಾವುದೇ ಹುರುಳಿಲ್ಲ' ಎಂದು ಶಾಸಕ ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇವಿಎಂ ಮತಯಂತ್ರ, ಎಸ್‌ಐಆರ್ ಹೀಗೆ ಯಾವುದೇ ವಿಷಯಗಳಲ್ಲೂ ಕಾಂಗ್ರೆಸ್ ನವರು ಟೀಕೆ ಮಾಡುತ್ತಲೇ ಬಂದಿದ್ದಾರೆ. ಪ್ರತಿ ಚುನಾವಣೆಯಲ್ಲಿ ಅಕ್ರಮ ನಡೆಯುತ್ತಿದೆ ಎಂದು ದೂರುತ್ತಾರೆ. ಹಾಗಾದರೆ ಕರ್ನಾಟಕದಲ್ಲಿ ಕಳೆದ ವರ್ಷ ನಡೆದ ವಿಧಾನಸಭೆ ಚುನಾವಣೆಯಲ್ಲಿ ನೀವು ಅಧಿಕಾರಕ್ಕೆ ಬಂದಿದ್ದು ಅಕ್ರಮ ಮೂಲಕವೇ?' ಎಂದು ಪ್ರಶ್ನಿಸಿದರು. 'ಪ್ರಜಾಪ್ರಭುತ್ವ ಅಳಿಸಿ ಅರಾಜಕತೆ ಸೃಷ್ಟಿಗೆ ಕಾಂಗ್ರೆಸ್ ಪ್ರಯತ್ನಿಸುತ್ತಿದೆ. ಹಾಗಾಗಿ 'ಪ್ರಜಾಪ್ರಭುತ್ವವನ್ನು ಉಳಿಸಿ, ಅರಾಜಕತೆಯನ್ನು ಅಳಿಸಿ' ಎಂಬ ಅಭಿಯಾನ ನಡೆಸುತ್ತಿದ್ದೇವೆ' ಎಂದು ತಿಳಿಸಿದರು.

'ಕಳೆದ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಉತ್ತಮ ಸಾಧನೆ ಮಾಡಿತ್ತು. ಈಗ ತನ್ನ ನೆಲೆ ಕಳೆದುಕೊಂಡಿದೆ. ಅಧಿಕಾರದ ಕಿತ್ತಾಟದಲ್ಲಿ ತೊಡಗಿದ್ದು, ಜನಪರ ಆಡಳಿತ ನೀಡುವಲ್ಲಿ ವಿಫಲವಾಗಿದೆ' ಎಂದು ದೂರಿದರು. ರಾಜ್ಯಸಭಾ ಮಾಜಿ ಸದಸ್ಯ ಈರಣ್ಣ ಕಡಾಡಿ, 'ಚನ್ನಮ್ಮನ ಕಿತ್ತೂರು ಮತ್ತು ಬೆಳಗಾವಿಯಲ್ಲಿ ಸಭೆ ಮಾಡಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಕಬ್ಬು ಬೆಳೆಗಾರರ ಕಣ್ಣೊರೆಸುವ ತಂತ್ರ ಅನುಸರಿಸಿದ್ದಾರೆ. ಕಬ್ಬಿನ ಬೆಳೆಗೆ ಎಸ್‌ಎಪಿ ಘೋಷಿಸದೆ ವಾಪಸ್ ಹೋಗಿದ್ದಾರೆ' ಎಂದು ಆಪಾದಿಸಿದರು. ಮಾಜಿ ಶಾಸಕ ಸಂಜಯ ಪಾಟೀಲ, ಮುಖಂಡರಾದ ಡಾ.ರವಿ ಪಾಟೀಲ, ಗೀತಾ ಸುತಾರ ಇದ್ದರು.

ಆತ್ಮಹತ್ಯೆ ಆರೋಪ; ಮೃತದೇಹವಿಟ್ಟು ಪ್ರತಿಭಟನೆ

• **ಉದಯವಾಹಿನಿ, ಮಂಗಳೂರು-**

ಉದಯವಾಹಿನಿ ಚಿತ್ರ

ಪೊಲೀಸ್ ವಿಚಾರಣೆಯಿಂದ ಮನನೊಂದು ವ್ಯಕ್ತಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿ, ಮೃತದೇಹವನ್ನಿಟ್ಟು ಸ್ಥಳೀಯರು ಪ್ರತಿಭಟನೆ ನಡೆಸಿದ ಘಟನೆ ಸುರತ್ಕಲ್ ಪೊಲೀಸ್ ಠಾಣೆಯ ಮುಂಭಾಗದಲ್ಲಿ ನಡೆದಿದೆ. ಪ್ರತಿಭಟನೆಯಿಂದಾಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ಸ್ಥಗಿತಗೊಂಡು ವಾಹನ ಸವಾರರು ಪರದಾಡುವಂತಾಯಿತು. ಸುರತ್ಕಲ್‌ನ ಹೊಸಬೆಟ್ಟು ನಿವಾಸಿ ಸೋಮನಾಥ (48) ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ. ಅಕ್ಟೋಬರ್ 25ರ ರಾತ್ರಿ ಹೊಸಬೆಟ್ಟು ಬೀಚ್ ಬಳಿ ಕಂಡುಬಂದಿದ್ದ ಜೋಡಿಯನ್ನು ಸೋಮನಾಥ ಪ್ರಶ್ನಿಸಿದ್ದರು ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಯುವತಿಯೊಬ್ಬರು ಸೋಮನಾಥ ವಿರುದ್ಧ ಸುರತ್ಕಲ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಬಳಿಕ ಪೊಲೀಸರು ಸೋಮನಾಥ ಅವರನ್ನು ವಿಚಾರಣೆ ನಡೆಸಿ ಮನೆಗೆ ಕಳುಹಿಸಿದ್ದರು. ಪೊಲೀಸ್ ವಿಚಾರಣೆಯಿಂದ ಮನನೊಂದು ಸೋಮನಾಥ ಅವರು ಬೆಳಗ್ಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಪೊಲೀಸ್ ದೌರ್ಜನ್ಯವೇ ಆತ್ಮಹತ್ಯೆಗೆ ಕಾರಣ ಎಂದು ಆರೋಪಿಸಿರುವ ಸ್ಥಳೀಯರು, ಮೃತದೇಹವನ್ನು ಸುರತ್ಕಲ್ ಪೊಲೀಸ್ ಠಾಣೆಯ ಮುಂಭಾಗದಲ್ಲಿಟ್ಟು ಪ್ರತಿಭಟನೆ ನಡೆಸಿದರು. ನೂರಾರು ಮಂದಿ ಸ್ಥಳೀಯರು ಪ್ರತಿಭಟನೆಯಲ್ಲಿ ಭಾಗವಹಿಸಿ ಆಕ್ರೋಶ ವ್ಯಕ್ತಪಡಿಸಿದರು.ಸ್ಥಳಕ್ಕೆ ಶಾಸಕ ಡಾ. ವೈ. ಭರತ್ ಶೆಟ್ಟಿ ಭೇಟಿ ನೀಡಿ, ಪೊಲೀಸರೊಂದಿಗೆ ಮಾತುಕತೆ ನಡೆಸಿದರು.

ಸಾಕು ನಾಯಿ ಮಾಲೀಕರಿಗೆ ನಗರ ಪಾಲಿಕೆ ಸೂಚನೆ: ನಿಯಮ ಕಡ್ಡಾಯ

ಎಲ್ಲಾ ಸಾಕು ನಾಯಿಗಳಿಗೆ ರೇಬೀಸ್ ನಿರೋಧಕ ಲಸಿಕೆ ಹಾಗೂ ಪಶುವೈದ್ಯರು ಸೂಚಿಸುವ ಇತರ ಲಸಿಕೆಗಳನ್ನು ಕಡ್ಡಾಯವಾಗಿ ಹಾಕಿಸಿ

• **ಉದಯವಾಹಿನಿ, ಮಂಗಳೂರು-**

ಸರ್ವೋಚ್ಚ ನ್ಯಾಯಾಲಯವು ನೀಡಿರುವ ಆದೇಶಗಳು, ಪ್ರಾಣಿ ಜನನ ನಿಯಂತ್ರಣ ನಿಯಮಗಳು 2023, ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿಯ ಮಾರ್ಗಸೂಚಿ, ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ 1960, ಶ್ವಾನ ಸಂತಾನೋತ್ಪತ್ತಿ ಮತ್ತು ಮಾರಾಟ ನಿಯಮಗಳು 2017 ಹಾಗೂ ಕರ್ನಾಟಕ ಮಹಾನಗರಪಾಲಿಕೆಗಳ ಕಾಯ್ದೆಯನ್ವಯ, ಪಾಲಿಕೆ ವ್ಯಾಪ್ತಿಯ ಎಲ್ಲಾ ಸಾಕು ನಾಯಿ

1 : ಆರೈಕೆ, ಸುರಕ್ಷತೆ ಮತ್ತು ಸ್ವಚ್ಛತೆ
2 : ಪೌಷ್ಟಿಕ ಆಹಾರ, ಶುದ್ಧ ನೀರು
3 : ಶಸ್ತ್ರಚಿಕಿತ್ಸೆಯನ್ನು ಮಾಡಿಸಬೇಕು

ಮಾಲೀಕರು ಈ ಕೆಳಗಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಲಾಗಿದೆ.

ಎಲ್ಲಾ ಸಾಕು ನಾಯಿಗಳಿಗೆ ರೇಬೀಸ್ ನಿರೋಧಕ ಲಸಿಕೆ ಪಶುವೈದ್ಯರು ಸೂಚಿಸುವ ಇತರ ಲಸಿಕೆಗಳನ್ನು ಕಡ್ಡಾಯವಾಗಿ ಹಾಕಿಸಿ, ಪ್ರತಿ ವರ್ಷ ಬೂಸ್ಟರ್ ಡೋಸ್ ನೀಡಬೇಕು. ಪಾಲಿಕೆಯ ಅಧಿಕಾರಿಗಳು ತಪಾಸಣೆ ನಡೆಸುವ ಸಂದರ್ಭದಲ್ಲಿ ಮಾಲೀಕರು ಸಿಂಧುತ್ವ ಹೊಂದಿರುವ ಲಸಿಕಾ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಹಾಜರುಪಡಿಸಬೇಕು.

ಉದಯವಾಹಿನಿ ಚಿತ್ರ

ನಾಯಿಗೆ ಪೌಷ್ಟಿಕ ಆಹಾರ, ಶುದ್ಧ ನೀರು, ಸುರಕ್ಷಿತ ಆಶ್ರಯ ಮತ್ತು ಸೂಕ್ತ ಪಶುವೈದ್ಯಕೀಯ ಚಿಕಿತ್ಸೆಯನ್ನು ಒದಗಿಸುವುದು ಮಾಲೀಕರ ಕರ್ತವ್ಯವಾಗಿದೆ. ಸಾಕು ನಾಯಿಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಮುಕ್ತವಾಗಿ ಬಿಡಬಾರದು.

ಹೊರಗೆ ಕರೆದೊಯ್ಯುವಾಗ ಕಡ್ಡಾಯವಾಗಿ ಬಾರು ಬಳಸಬೇಕು. ಒಂದು ವೇಳೆ ಸಾಕು ಪ್ರಾಣಿಯು ಸಾರ್ವಜನಿಕ ಸ್ಥಳದಲ್ಲಿ ಮಲವಿಸರ್ಜನೆ ಮಾಡಿದಲ್ಲಿ, ಅದರ ಮಾಲೀಕರೇ ತಕ್ಷಣ ಆ ಜಾಗವನ್ನು ಸ್ವಚ್ಛಗೊಳಿಸಬೇಕು. ತಪ್ಪಿದಲ್ಲಿ ಪಾಲಿಕೆಯ ಘನತ್ಯಾಜ್ಯ ನಿರ್ವಹಣಾ ಉಪನಿಯಮಗಳಡಿ ರೂ.1 ಸಾವಿರದಿಂದ ರೂ.5 ಸಾವಿರದವರೆಗೆ ಸ್ಥಳದಲ್ಲೇ ದಂಡ ವಿಧಿಸಲಾಗುತ್ತದೆ.

> **ಸಾರ್ವಜನಿಕರು ಫೋಟೋ ಅಥವಾ ವಿಡಿಯೋ ಸಾಕ್ಷ್ಯದೊಂದಿಗೆ ಪಾಲಿಕೆಯ ಸಹಾಯವಾಣಿ ಸಂಖ್ಯೆ: 9449007722 ಗೆ ಮಾಹಿತಿ ನೀಡಬಹುದು (ಸಾರ್ವಜನಿಕ ದೂರುಗಳಿಗಾಗಿ ರಾಜ್ಯದ ಸಹಾಯವಾಣಿ ಸಂಖ್ಯೆ 1902 ಅನ್ನು ಸಹ ಬಳಸಬಹುದು) ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**
> -ಮಹಾನಗರಪಾಲಿಕೆ ಆಯುಕ್ತರು

ಸಂತಾನೋತ್ಪತ್ತಿದಾರರ ಕಡ್ಡಾಯ ನೋಂದಣಿ: ಶ್ವಾನಗಳ ಸಂತಾನೋತ್ಪತ್ತಿ ಅಥವಾ ಮರಿಗಳ ಮಾರಾಟ ಪ್ರಕ್ರಿಯೆಯಲ್ಲಿ ತೊಡಗಿರುವ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯು, ಶ್ವಾನ ಸಂತಾನೋತ್ಪತ್ತಿ ಮತ್ತು ಮಾರಾಟ ನಿಯಮಗಳನ್ವಯ ಕರ್ನಾಟಕ ರಾಜ್ಯ ಪ್ರಾಣಿ ಕಲ್ಯಾಣ ಮಂಡಳಿಯಿಂದ ಕಡ್ಡಾಯವಾಗಿ ನೋಂದಣಿ ಪ್ರಮಾಣಪತ್ರವನ್ನು ಪಡೆದಿರಬೇಕು. ಈ ನೋಂದಣಿ ಇಲ್ಲದೆ ಪಾಲಿಕೆಯಿಂದ ಯಾವುದೇ ವ್ಯಾಪಾರ ಪರವಾನಗಿ ನೀಡಲಾಗುವುದಿಲ್ಲ. ಮಾರಾಟವಾಗದ ಮರಿಗಳನ್ನು ಮಾನ್ಯತೆ ಪಡೆದ ಪ್ರಾಣಿ ಕಲ್ಯಾಣ ಸಂಸ್ಥೆಗಳ ಮೂಲಕವೇ ಪುನರ್ವಸತಿ ಕಲ್ಪಿಸಬೇಕು.

ಪ್ರಾಣಿಗಳನ್ನು ಕೈಬಿಡುವುದು ಶಿಕ್ಷಾರ್ಹ ಅಪರಾಧ: ಸಾಕು ನಾಯಿ ಅಥವಾ ಅದರ ಮರಿಗಳನ್ನು ರಸ್ತೆ, ಖಾಲಿ ನಿವೇಶನ, ಕಸದ ರಾಶಿ ಅಥವಾ ಯಾವುದೇ ಸಾರ್ವಜನಿಕ ಸ್ಥಳಗಳಲ್ಲಿ ತ್ಯಜಿಸುವುದು

> **ಕಾನೂನುಬದ್ಧವಾಗಿ ನೋಂದಾಯಿತ ಶ್ವಾನ ಸಂತಾನೋತ್ಪತ್ತಿ ಉದ್ದೇಶಕ್ಕಾಗಿ ಬಳಸದ ಎಲ್ಲಾ ಸಾಕು ನಾಯಿಗಳಿಗೆ (ಗಂಡು ಮತ್ತು ಹೆಣ್ಣು) ಅಧಿಕೃತ ಪಶುವೈದ್ಯರ ಮೂಲಕ ಕಡ್ಡಾಯವಾಗಿ ಸಂತಾನಹರಣ ಶಸ್ತ್ರಚಿಕಿತ್ಸೆಯನ್ನು ಮಾಡಿಸಬೇಕು.**

ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ ಅಡಿಯಲ್ಲಿ ಗಂಭೀರ ಅಪರಾಧವಾಗಿದೆ. ಈ ನಿರ್ಲಕ್ಷ್ಯದಿಂದಾಗಿ ಪ್ರಾಣಿಗೆ ಮರಣ ಅಥವಾ ಅಂಗವೈಕಲ್ಯ ಸಂಭವಿಸಿದಲ್ಲಿ, ಭಾರತೀಯ ನ್ಯಾಯ ಸಂಹಿತೆ ಅನ್ವಯ 5 ವರ್ಷಗಳವರೆಗೆ ಕಾರಾಗೃಹ ಶಿಕ್ಷೆ, ದಂಡ ಅಥವಾ ಎರಡನ್ನೂ ವಿಧಿಸಲು ಕಾನೂನಿನಲ್ಲಿ ಅವಕಾಶವಿರುತ್ತದೆ. ಅಲ್ಲದೆ, ನಾಯಿಯ ನಿರ್ಲಕ್ಷ್ಯದ ನಿರ್ವಹಣೆಯಿಂದ ಮಾನವ ಜೀವಕ್ಕೆ ಅಪಾಯ ಉಂಟಾದಲ್ಲಿ ಕಠಿಣ ಕಾನೂನು ಕ್ರಮ ಜರುಗಿಸಲಾಗುತ್ತದೆ. ಈ ಮೇಲಿನ ನಿಯಮಗಳ ಉಲ್ಲಂಘನೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಪ್ರಾಣಿಗಳನ್ನು ತ್ಯಜಿಸುವ ಪ್ರಕರಣಗಳು ಕಂಡುಬಂದಲ್ಲಿ ಮಹಾನಗರಪಾಲಿಕೆಯು ಕಾಯ್ದೆಯ ಅಡಿಯಲ್ಲಿ ಗರಿಷ್ಠ ರೂ.50 ಸಾವಿರದವರೆಗೆ ದಂಡ ವಿಧಿಸಲಾಗುತ್ತದೆ. ತ್ಯಜಿಸಿದ ಪ್ರಾಣಿಗಳ ಪೋಷಣೆ ಮತ್ತು ಆರೈಕೆಯ ಸಂಪೂರ್ಣ ವೆಚ್ಚವನ್ನು ಮಾಲೀಕರಿಂದಲೇ ಕಾನೂನುಬದ್ಧವಾಗಿ ವಸೂಲಿ ಮಾಡಲಾಗುತ್ತದೆ ಹಾಗೂ ಸೂಕ್ತ ಸಾಕ್ಷ್ಯಾಧಾರಗಳೊಂದಿಗೆ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಪ್ರಥಮ ಮಾಹಿತಿ ವರದಿ ದಾಖಲಿಸಲಾಗುತ್ತದೆ.

ಮಿನಿ ನ್ಯೂಸ್

ಪಿಡಿಒ ಅಮಾನತಿಗೆ ರೈತ ಸಂಘ ಆಗ್ರಹ

• **ಉದಯವಾಹಿನಿ, ಯಾದಗಿರಿ:**

ಜಿಲ್ಲೆಯ ಮೋಟ್ನಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆ.ಹೊಸಳ್ಳಿ ಗ್ರಾಮದ ದಲಿತ ಕ್ರಿಶ್ಚಿಯನ್ ಕಾಲೋನಿಯಲ್ಲಿ ಎರಡು ಬೋರ್‌ವೆಲ್‌ಗಳು ಕೆಟ್ಟು 16 ದಿನ ಕಳೆದರೂ ದುರಸ್ತಿಯಾಗದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಕುಡಿಯುವ ನೀರಿಗಾಗಿ ಪರದಾಡುತ್ತಿದ್ದಾರೆ.

ಎರಡು ಮೋಟಾರ್‌ಗಳು ಹಾಗೂ ಮೂರು ಪೈಪ್‌ಗಳು ಬೋರ್‌ವೆಲ್‌ಗಳ ಆಳದಲ್ಲಿ ಬಿದ್ದಿದ್ದು, ಸಮಸ್ಯೆ ಅಧಿಕಾರಿಗಳ ಗಮನಕ್ಕೆ ತಂದರೂ ಪರಿಹಾರ ದೊರೆತಿಲ್ಲ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ಆರೋಪಿಸಿದೆ. ಈ ಕುರಿತು ಜಿಲ್ಲಾ ಉಪಾಧ್ಯಕ್ಷ ಸುಭಾಷ್ ನಡುವಿನಕೇರಿ ನೇತೃತ್ವದಲ್ಲಿ ಮಂಗಳವಾರ ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ, ಕೂಡಲೇ ಬೋರ್‌ವೆಲ್‌ಗಳನ್ನು ದುರಸ್ತಿಗೊಳಿಸಿ ನೀರು ಪೂರೈಕೆ ಆರಂಭಿಸಬೇಕು. ಕರ್ತವ್ಯ ನಿರ್ಲಕ್ಷ್ಯದ ಆರೋಪದಡಿ ಪಿಡಿಒ ವಿರುದ್ಧ ತನಿಖೆ ನಡೆಸಿ ಅಮಾನತು ಮಾಡಬೇಕು ಎಂದು ಆಗ್ರಹಿಸಿದರು.

ಸಮಸ್ಯೆ ಶೀಘ್ರ ಪರಿಹಾರವಾಗದಿದ್ದರೆ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಪ್ರಫುಲ್ಲಕುಮಾರ್ (ಜುಮ್ಮಿ) ಸೇರಿದಂತೆ ಇತರರು ಉಪಸ್ಥಿತರಿದ್ದರು.

ಗೋಕಾಕ ದೇವಸ್ಥಾನಗಳ ಅಭಿವೃದ್ಧಿಗೆ 6.25 ಕೋಟಿ ಅನುದಾನ ಮಂಜೂರು

• **ಉದಯವಾಹಿನಿ, ಗೋಕಾಕ:**

ಕ್ಷೇತ್ರದಲ್ಲಿರುವ ದೇವಸ್ಥಾನಗಳ ಅಭಿವೃದ್ಧಿ ಮತ್ತು ಸಮುದಾಯ ಭವನಗಳ ನಿರ್ಮಾಣಕ್ಕಾಗಿ ಸಿಎಂ ಐಡಿಎಫ್ ಯೋಜನೆಯಡಿಯಲ್ಲಿ 6.25 ಕೋಟಿ ಅನುದಾನ ಮಂಜೂರಾಗಿದೆ ಎಂದು ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ಹೇಳಿದರು.

ಇಲ್ಲಿನ ಎನ್‌ಎಸ್‌ಎಫ್ ಕಚೇರಿಯಲ್ಲಿ ಜರುಗಿದ ಕ್ಷೇತ್ರದ ವಿವಿಧ ಸಮುದಾಯಗಳ ಮುಖಂಡರ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಕ್ಷೇತ್ರದ ಸುಮಾರು 31 ಹೊಸ ದೇವಸ್ಥಾನಗಳ ವಿವಿಧ ಕಾಮಗಾರಿಗಳಿಗಾಗಿ ಈ ಅನುದಾನ ಮಂಜೂರಾಗಿದ್ದು, ಆದಷ್ಟು ಬೇಗನೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಂತೆ ಮುಖಂಡರಿಗೆ ಕರೆ ನೀಡಿದರು.

ರಾಜ್ಯ ಸರ್ಕಾರವು ವಿವಿಧ ಅಭಿವೃದ್ಧಿ ಕೆಲಸಗಳಿಗೆ ಕಾಂಗ್ರೆಸ್ ಶಾಸಕರಿಗೆ 50 ಕೋಟಿ ಮತ್ತು ಬಿಜೆಪಿ ಶಾಸಕರಿಗೆ 25 ಕೋಟಿ ಅನುದಾನ ಬಿಡುಗಡೆ ಮಾಡಿದೆ. ಆ ಪೈಕಿ 6. 25 ಕೋಟಿ ದೇವಸ್ಥಾನಗಳ ಅಭಿವೃದ್ಧಿ ಮತ್ತು ಸಮುದಾಯ ಭವನಗಳ ನಿರ್ಮಾಣಕ್ಕೆ ಬಳಕೆ ಮಾಡಲಾಗುತ್ತಿದ್ದು, ಉಳಿದ ಅನುದಾನ ರಸ್ತೆಗಳ ಅಭಿವೃದ್ಧಿಗೆ ಮೀಸಲಿಡಲಾಗಿದೆ ಎಂದು ವಿವರಿಸಿದರು. ರಡ್ಡೆರಟ್ಟಿ ಡಾ. ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣಕ್ಕೆ 25 ಲಕ್ಷ, ತಿಮ್ಮಾಪೂರ ಎಸ್ಸಿ ಕಾಲೊನಿಯ ಸಮುದಾಯ ಭವನ ನಿರ್ಮಾಣಕ್ಕೆ 5 ಲಕ್ಷ, ತಿಗಡಿ ದುರ್ಗಾದೇವಿ ದೇವಸ್ಥಾನದ ಸಮುದಾಯ ಭವನ ನಿರ್ಮಾಣಕ್ಕೆ 10 ಲಕ್ಷ, ಮುನ್ಯಾಳ ದುರ್ಗಾದೇವಿ ದೇವಸ್ಥಾನದ ಸಮುದಾಯ ಭವನ ನಿರ್ಮಾಣಕ್ಕೆ 15 ಲಕ್ಷ ಹೀಗೆ ಅನೇಕ ಕಾಮಗಾರಿಗಳು ಶೀಘ್ರವೇ ಆರಂಭಗೊಳ್ಳಲಿವೆ ಎಂದರು.

ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಸೂಕ್ತ ವ್ಯವಸ್ಥೆ ಕಲ್ಪಿಸುವುದು ಹಾಗೂ ರೈತರಿಗೆ ಕೃಷಿ ಚಟುವಟಿಕೆಗಳನ್ನು ನಿರ್ವಹಿಸಲು ಸಮರ್ಪಕ ವಿದ್ಯುತ್ ಪೂರೈಕೆಯಾಗುವಂತೆ ಕ್ರಮವಹಿಸಲು ಪ್ರಮುಖ ಆದ್ಯತೆ ನೀಡಲಾಗುತ್ತಿದೆ ಎಂದರು.

ಕರ್ನಾಟಕ ರತ್ನ ಪ್ರದಾನ ಸಮಾರಂಭಕ್ಕೆ ಭರ್ಜರಿ ಸಿದ್ಧತೆ

• **ಉದಯವಾಹಿನಿ ಕಾರಟಗಿ**

ರಾಜ್ಯದ ಅತ್ಯುನ್ನತ ಗೌರವವಾದ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಅತ್ಯಂತ ಅರ್ಥಪೂರ್ಣ ಹಾಗೂ ಅಚ್ಚುಕಟ್ಟಾಗಿ ಆಯೋಜಿಸಲು ಸಿದ್ಧತೆ ಆರಂಭವಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ಅವರು ಇಂದು ತಮ್ಮ ಬೆಂಗಳೂರಿನ ಗೃಹ ಕಚೇರಿಯಲ್ಲಿ ಸಮಾರಂಭದ ರೂಪುರೇಷೆ ಕುರಿತು ಮಹತ್ವದ ಸಭೆ ನಡೆಸಿದರು.

ಸಭೆಯಲ್ಲಿ ಹಿರಿಯ ಚಲನಚಿತ್ರ ನಿರ್ದೇಶಕ ಎಸ್. ನಾರಾಯಣ್, ಖ್ಯಾತ ನಟ ಅನಿರುದ್ಧ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಮಂಜುಶ್ರೀ ಹಾಗೂ ನಿರ್ದೇಶಕಿ ವಸುಂಧರಾ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ತಂಗಡಗಿ, ಕರ್ನಾಟಕ ರತ್ನ ರಾಜ್ಯದ ಅತ್ಯುನ್ನತ ಗೌರವ. ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಕೊಡುಗೆ ನೀಡಿದ ಸಾಧಕರನ್ನು ಗೌರವಿಸುವ ಈ ಸಮಾರಂಭವನ್ನು ವಿಶೇಷ ಹಾಗೂ ಸ್ಮರಣೀಯವಾಗಿ ಮಾಡಬೇಕಿದೆ ಎಂದು ತಿಳಿಸಿದರು.

ವೇದಿಕೆ ಸಿದ್ಧತೆ, ಕಾರ್ಯಕ್ರಮದ ರೂಪುರೇಷೆ, ಗಣ್ಯರ ಆಹ್ವಾನ ಸೇರಿದಂತೆ ಎಲ್ಲಾ ವ್ಯವಸ್ಥೆಗಳ ಬಗ್ಗೆ ಸಭೆಯಲ್ಲಿ ವಿಸ್ತೃತವಾಗಿ ಸಮಾಲೋಚನೆ ನಡೆಸಲಾಯಿತು.

ಉದಯವಾಹಿನಿ ಚಿತ್ರ

ಶಿಷ್ಟಾಚಾರ ಪಾಲಿಸದ ತಹಶೀಲ್ದಾರ್ ಅಮಾನತಿಗೆ ಆಗ್ರಹ

• **ಉದಯವಾಹಿನಿ, ವಿಜಯಪುರ, :**

ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಶಿಷ್ಟಾಚಾರಕ್ಕೆ ವಿರುದ್ಧವಾಗಿ ನಡೆಸಿ, ವಾಲ್ಮೀಕಿ ಜನಾಂಗದವರನ್ನು ಜಾತಿ ನಿಂದನೆ ಹಾಗೂ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎನ್ನಲಾದ ದೇವರಹಿಪ್ಪರಗಿ ತಹಶೀಲ್ದಾರ ನಿಂಗಣ್ಣ ಬಿರಾದಾರ ಅವರನ್ನು ಕೂಡಲೇ ಅಮಾನತುಗೊಳಿಸುವಂತೆ ಆಗ್ರಹಿಸಿ ವಾಲ್ಮೀಕಿ ಸಮಾಜದ ಮುಖಂಡರು ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ್ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ದೇವರಹಿಪ್ಪರಗಿ ತಾಲ್ಲೂಕು ಮಹರ್ಷಿ ವಾಲ್ಮೀಕಿ ನಾಯಕ ಮಹಾಸಭಾ ಅಧ್ಯಕ್ಷ ಶರಣಗೌಡ ಪಾಟೀಲ ಮಾತನಾಡಿ, ವಾಲ್ಮೀಕಿ ಜಯಂತಿಯನ್ನು ಶಿಷ್ಟಾಚಾರ ಪ್ರಕಾರ ಆಚರಿಸುವಂತೆ ಸಮಾಜದ ಮುಖಂಡರು ಮನವಿ ಮಾಡಿಕೊಂಡಿದ್ದರೂ ತಹಶೀಲ್ದಾರ್ ಅವರು ಅದಕ್ಕೆ ಸ್ಪಂದಿಸದೆ ವಾಲ್ಮೀಕಿ ಮುಖಂಡರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಜಾತಿ ನಿಂದನೆ ಮಾಡಿದ್ದಾರೆ. ಇದು ಖಂಡನೀಯವಾಗಿದ್ದು, ತಕ್ಷಣವೇ ಅವರನ್ನು ಅಮಾನತುಗೊಳಿಸಬೇಕು ಎಂದು ಒತ್ತಾಯಿಸಿದರು. ರಾಜ್ಯದಲ್ಲಿ ವಾಲ್ಮೀಕಿ ಸಮುದಾಯದ 20 ಶಾಸಕರಿದ್ದರೂ ಸಮುದಾಯದ ಮೇಲೆ ನಡೆಯುತ್ತಿರುವ ಅನ್ಯಾಯವನ್ನು ಸರಿಪಡಿಸಲು ಯಾರೂ ಮುಂದಾಗುತ್ತಿಲ್ಲ. ಇದು ನೋವಿನ ಸಂಗತಿಯಾಗಿದೆ.

ದಿನ ಭವಿಷ್ಯ

ರಾಹುಕಾಲ	ಮಧ್ಯಾಹ್ನ	01:30 ರಿಂದ 03:00
ಗುಳಿಕ ಕಾಲ	ಬೆಳಿಗ್ಗೆ	09:00 ರಿಂದ 10:30
ಯಮಗಂಡ ಕಾಲ	ಬೆಳಿಗ್ಗೆ	06:00 ರಿಂದ 07:30

ಮೇಷ ದ್ವೇಷ ಪ್ರೀತಿಗಿಂತ ಹೆಚ್ಚು ಶಕ್ತಿಶಾಲಿಯಾಗಿದ್ದು ನಿಮ್ಮ ದೇಹದ ಮೇಲೆ ಪ್ರಾಣಾಂತಿಕ ಪರಿಣಾಮ ಬೀರುವದರಿಂದ ನಿಮ್ಮ ದ್ವೇಷವನ್ನು ಸಾಯಿಸಲು ಒಂದು ಸಮರಸದ ಸ್ವಭಾವವನ್ನು ರೂಪಿಸಿಕೊಳ್ಳಿ. ದುಷ್ಟತೆಯು ಒಳಿತಿಗಿಂತ ಬೇಗ ವಿಜಯ ಸಾಧಿಸುತ್ತದೆಂದು ನೆನಪಿಡಿ.

ವೃಷಭ ಒತ್ತಡದ ದಿನದ ಹೊರತಾಗಿಯೂ ಆರೋಗ್ಯ ಪರಿಪೂರ್ಣವಾಗಿರುತ್ತದೆ. ಯಾವುದೇ ಆಪ್ತ ಸಂಬಂಧಿಕರ ಬೆಂಬಲದಿಂದ ನೀವು ನಿಮ್ಮ ವ್ಯಾಪಾರದಲ್ಲಿ ಉತ್ತಮವಾಗಿ ಮಾಡಬಹುದು. ಇದು ನಿಮಗೆ ಆರ್ಥಿಕ ಲಾಭವನ್ನು ನೀಡುತ್ತದೆ. ಕೌಟುಂಬಿಕ ಜೀವನ ಸರಾಗವಾಗಿ ನಡೆಯುತ್ತಿರುವಂತೆ ತೋರುತ್ತದೆ

ಮಿಥುನ ಜನರಲ್ಲಿ ಬೆರೆಯುವ ಭಯ ನಿಮ್ಮನ್ನು ಧೈರ್ಯಗೆಡಿಸಬಹುದು. ಇದನ್ನು ತೆಗೆದುಹಾಕಲು ನಿಮ್ಮ ಸ್ವಾಭಿಮಾನವನ್ನು ಪ್ರೋತ್ಸಾಹಿಸಿ. ಇಂದು ಹಣ ನಿಮ್ಮ ಕೈಯಲ್ಲಿ ಉಳಿಯುದಿಲ್ಲ. ಇಂದು ನೀವು ಹಣವನ್ನು ಉಳಿಸುವಲ್ಲಿ ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ .

ಕಟಕ ಇಂದಿನ ದಿನ, ನಿಮ್ಮ ಬಳಿ ಸಾಲವನ್ನು ಕೇಳುವ ಮತ್ತು ಅದನ್ನು ಹಿಂತಿರುಗಿಸದೆ ಇರುವಂತಹ ಸ್ನೇಹಿತರಿಂದ ನೀವು ನಿಮ್ಮನ್ನು ತಪ್ಪಿಸುವ ಅಗತ್ಯವಿದೆ. ಇಂದು ನೀವು ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರಿಂದ ಬೆಂಬಲ ಪಡೆದು ಹೊಸ ಉತ್ಸಾಹ ಮತ್ತು ಆತ್ಮವಿಶ್ವಾಸದಿಂದ ಮುಂದುವರಿಯುತ್ತೀರಿ.

ಸಿಂಹ ಅನಗತ್ಯ ಆಲೋಚನೆಗಳು ನಿಮ್ಮ ಮನಸ್ಸನ್ನು ಆವರಿಸಬಹುದು. ಖಾಲಿ ಮೆದುಳು ದೆವ್ವಗಳ ಕಾರ್ಖಾನೆಯಾದ್ದರಿಂದ ದೈಹಿಕ ವ್ಯಾಯಾಮದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಲು ಪ್ರಯತ್ನಿಸಿ. ವಿದೇಶದಲ್ಲಿ ವ್ಯಾಪಾರ ಮಾಡುವ ಈ ರಾಶಿಚಕ್ರದ ಜನರಿಗೆ ಇಂದು ಸಾಕಷ್ಟು ಹಣದ ಲಾಭವನ್ನು ಪಡೆಯಬಹುದು.

ಕನ್ಯಾ ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ಹೆಚ್ಚುವರಿ ಹಣವನ್ನು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಬೇಕು. ಕೌಟುಂಬಿಕ ಒತ್ತಡ ನಿಮ್ಮ ಗಮನ ಬೇರೆಡೆಗೆ ಸೆಳೆಯದಿರಲಿ. ಕೆಟ್ಟ ಸಮಯಗಳು ನಮಗೆ ಇನ್ನೂ ಹೆಚ್ಚನ್ನು ನೀಡುತ್ತವೆ. ಸಮಯ ವ್ಯರ್ಥ ಮಾಡದೇ ಜೀವನದ ಪಾಠ ಕಲಿಯಲು ಪ್ರಯತ್ನಿಸಿ.

ತುಲಾ ಒತ್ತಡ ಸಣ್ಣ ಅನಾರೋಗ್ಯಕ್ಕೆ ಕಾರಣವಾಗಬಹುದು. ಆರಾಮವಾಗಿರಲು ಸ್ನೇಹಿತರು ಮತ್ತು ಕುಟುಂಬದ ಸದಸ್ಯರ ಜೊತೆಗಿರಿ. ಕುಟುಂಬದ ಯಾವುದೇ ಸದಸ್ಯರ ಕಾಯಿಲೆ ಬೀಳುವ ಕಾರಣದಿಂದಾಗಿ ನೀವು ಆರ್ಥಿಕ ತೊಂದರೆಗೊಳಗಾಗಬಹುದು. ನೀವು ಹಣಕ್ಕಿಂತ ಹೆಚ್ಚಾಗಿ ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು.

ವೃಶ್ಚಿಕ ಒತ್ತಡವನ್ನು ಉಪೇಕ್ಷಿಸಬಾರದು. ಇದು ವೇಗವಾಗಿ ತಂಬಾಕು ಮತ್ತು ಮದ್ಯದಷ್ಟೇ ಗಂಭೀರವಾದ ಒಂದು ಸಾಂಕ್ರಾಮಿಕ ರೋಗವಾಗಿರುವುದರಿಂದ ಸಂಶಯಾಸ್ಪದ ಹಣಕಾಸು ವ್ಯವಹಾರಗಳಲ್ಲಿ ಸಿಲುಕಿಕೊಳ್ಳದಂತೆ ಎಚ್ಚರಿಕೆ ವಹಿಸಿ. ನಿಮ್ಮ ಸ್ನೇಹಿತರು ನಿಮಗೆ ಅವರ ಅವಶ್ಯಕತೆ ಅತ್ಯಂತ ಹೆಚ್ಚಿದ್ದಾಗ ನಿಮ್ಮನ್ನು ನಿರಾಸೆಗೊಳಿಸಬಹುದು.

ಧನಸ್ಸು ಮನರಂಜನೆ ಮತ್ತು ಮೋಜಿನ ಒಂದು ದಿನ. ನೀವು ಇಂದು ಗಣನೀಯ ಪ್ರಮಾಣದ ಹಣವನ್ನು ಸಹ ಹೊಂದಿರುತ್ತೀರಿ ಮತ್ತು ಅದರೊಂದಿಗೆ ಮನಸ್ಸಿನ ಶಾಂತಿ ಇರುತ್ತದೆ. ಥಿಯೇಟರ್ ಅಥವಾ ನಿಮ್ಮ ಸಂಗಾತಿಯ ಜೊತೆಗಿನ ಊಟ ನಿಮ್ಮನ್ನು ಒಂದು ಶಾಂತವಾದ ಮತ್ತು ಅದ್ಭುತ ಲಹರಿಯಲ್ಲಿರಿಸುವಂತೆ ತೋರುತ್ತದೆ.

ಮಕರ ನಿಮ್ಮ ದಯಾಳು ಪ್ರಕೃತಿ ಇಂದು ಅನೇಕ ಸಂತೋಷದ ಕ್ಷಣಗಳನ್ನು ತರುತ್ತದೆ. ಇಂದು ಹೂಡಿಕೆಗಳನ್ನು ಮಾಡಬಾರದು. ನೀವು ಅವರನ್ನು ಭೇಟಿ ಮಾಡುವ ಜನರನ್ನು ಸಂಪರ್ಕಿಸಲು ಒಳ್ಳೆಯ ದಿನ. ಮನ್ಮಥನು ನಿಮ್ಮ ಜೀವನದಲ್ಲಿ ಪ್ರೀತಿಯ ಮಳೆ ಸುರಿಸುತ್ತ ನಿಮ್ಮೆಡೆಗೆ ನುಗ್ಗುತ್ತಿದ್ದಾನೆ.

ಕುಂಭ ನಿಮ್ಮ ವ್ಯಕ್ತಿತ್ವವನ್ನು ಸುಧಾರಿಸಲು ಗಂಭೀರ ಪ್ರಯತ್ನಗಳನ್ನು ಮಾಡಿ. ದೊಡ್ಡ ಗುಂಪಿನಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳುವುದು ಅತ್ಯಂತ ಮನರಂಜನಾತ್ಮಕವಾಗಿರುತ್ತದೆ – ಆದರೆ ನಿಮ್ಮ ವೆಚ್ಚಗಳು ಹೆಚ್ಚಾಗುತ್ತವೆ. ಬಿಕ್ಕಟ್ಟಿನ ಸಮಯದಲ್ಲಿ ನಿಮಗೆ ಸಹಾಯ ಮಾಡಿದ ಸಂಬಂಧಿಗಳಿಗೆ ನಿಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿ.

ಮೀನ ಇದು ವಿಶ್ವಾಸ ಮತ್ತು ನಮ್ಯತೆಯನ್ನು ಹೆಚ್ಚಿಸುತ್ತದಾದರೂ ಅದೇ ಸಮಯದಲ್ಲಿ ಭಯ, ದ್ವೇಷ, ಅಸೂಯೆ, ಸೇಡಿನಂಥ ನಕಾರಾತ್ಮಕ ಭಾವನೆಗಳನ್ನು ಹಿಂದೆ ಬಿಡಲು ಸಿದ್ಧವಾಗಿ. ಸಣ್ಣ ಉದ್ಯೋಗವನ್ನು ಮಾಡುವ ಜನರು, ಇಂದು ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು.

ಗೋಕರ್ಣದ ತದಡಿ ಬಂದರಿನಲ್ಲಿ ಭೀಕರ ದುರಂತ

• **ಉದಯವಾಹಿನಿ, ಕಾರವಾರ:**

ಉತ್ತರ ಕನ್ನಡ ಜಿಲ್ಲೆಯ ತದಡಿ ಬಂದರಿನಲ್ಲಿ ಮಂಗಳವಾರ ಬೋಟ್ ನ ಟ್ಯಾಂಕ್ ಸ್ವಚ್ಛಗೊಳಿಸುತ್ತಿದ್ದ ವೇಳೆ ಮೂವರು ಮೀನುಗಾರರು ವಿಷಕಾರಿ ವಾಸನೆಯಿಂದ ಉಸಿರುಗಟ್ಟಿ ಮೃತಪಟ್ಟಿದ್ದಾರೆ. ಮೃತ ಮೀನುಗಾರರನ್ನು ನೌಶಾದ್ (48), ಅಮೀನ್ (40) ಮತ್ತು ಅಮನ್ (26) ಎಂದು ಗುರುತಿಸಲಾಗಿದೆ.

ಗೋಕರ್ಣ ಪೊಲೀಸ್ ಠಾಣಾ ವ್ಯಾಪ್ತಿಯ ತದಡಿ ಬಂದರಿನಲ್ಲಿ ಈ ಭೀಕರ ದುರಂತ ಸಂಭವಿಸಿದ್ದು, ಅಸ್ವಸ್ಥಗೊಂಡ ಅಬ್ದುಲ್ ಯಾಕುಬ್ ದಾಡಿಯಾ (60) ಅವರನ್ನು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಗೋಕರ್ಣದ ತದಡಿಯ 'ಕುಚ್ಚೈಮಾ' ಬೋಟ್‌ನಲ್ಲಿ ಈ ಮೀನುಗಾರರು ಕೆಲಸ ಮಾಡುತ್ತಿದ್ದರು. ಚಮನ್ ಮೀನುಗಳನ್ನು ಹಿಡಿದು ಬಂದರಿಗೆ ವಾಪಸಾಗಿದ್ದರು. ಬಳಿಕ ಮೀನು ಸಂಗ್ರಹಿಸುವ ಸ್ಥಳಕ್ಕೆ ಇಳಿದು ಮೀನನ್ನು ಖಾಲಿ ಮಾಡಿದ್ದರು. ನಂತರ ಮೀನು ಸಂಗ್ರಹಿಸಿದ್ದ ಜಾಗವನ್ನು ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಈ ದುರಂತ ಸಂಭವಿಸಿದೆ ಎಂದು ತಿಳಿದುಬಂದಿದೆ. ಮೀನಿನ ಕೊಳೆತ ವಾಸನೆ ಅಥವಾ ವಿಷಕಾರಿ ವಾಸನೆಯಿಂದ ಉಸಿರುಗಟ್ಟಿ ಮೂವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ.

ಉದಯವಾಹಿನಿ ಚಿತ್ರ

5 ನೇ ಬಾರಿಗೆ ನಮೋಶಿ ಗೆಲುವು
ನಗರದಲ್ಲಿ ಬಿಜೆಪಿಯಿಂದ ವಿಜಯೋತ್ಸವ

• **ಉದಯವಾಹಿನಿ, ಬಳ್ಳಾರಿ, :**

ಈಶಾನ್ಯ ಕರ್ನಾಟಕ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಶಶೀಲ್ ಜಿ. ನಮೋಶಿ ಐದನೇ ಬಾರಿಗೆ ಕಾಂಗ್ರೆಸ್ ಅಭ್ಯರ್ಥಿ ಶರಣಪ್ಪ ಮಟ್ಟೂರು ವಿರುದ್ಧ ಜಯಭೇರಿ ಬಾರಿಸಿರುವ ಹಿನ್ನೆಲೆಯಲ್ಲಿ ನಿನ್ನೆ ಸಂಜೆ ನಗರದ ಗಡಗಿ ಚೆನ್ನಪ್ಪ ವೃತ್ತದಲ್ಲಿ ನಗರದ ಮಾಜಿ ಶಾಸಕ ಗಾಲಿ ಸೋಮಶೇಖರ ರೆಡ್ಡಿ ನೇತೃತ್ವದಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ಸಿಹಿ ಹಂಚಿ, ಪಟಾಕಿ ಸಿಡಿಸಿ, ಘೋಷಣೆ ಕೂಗಿ ವಿಜಯೋತ್ಸವ ಆಚರಿಸಿದರು.

ಈ ವೇಳೆ ಮಾತನಾಡದ ಸೋಮಶೇಖರ ರೆಡದಡಿ ಅವರು, ಈ ಗೆಲುವು ಶಿಕ್ಷಕರ ಬೆಂಬಲ ಮತ್ತು ವಿಶ್ವಾಸದ ಪ್ರತೀಕವಾಗಿದ್ದು, ಶಿಕ್ಷಣ ಕ್ಷೇತ್ರದ ಅಭಿವೃದ್ಧಿ ಹಾಗೂ ಶಿಕ್ಷಕರ ಹಿತಾಸಕ್ತಿಗಾಗಿ ಮತ್ತಷ್ಟು ಶ್ರಮಿಸಲು ಹೊಸ ಉತ್ಸಾಹ ತುಂಬಿದೆ ಎಂದರು. ಶ್ರೀನಿವಾಸ್ ಮೋತ್ಕರ್, ಹನುಂತ ಗುಡುಗಂಟಿ ಎಸ್.ಮಲ್ಲನಗೌಡ, ಅಡವಿ ಸ್ವಾಮಿ, ದರೂರು ಶಾಂತನಗೌಡ, ಮಹೇಶ್ವರಸ್ವಾಮಿ, ಗುತ್ತಿಗನೂರು ತಿಪ್ಪೆಸ್ವಾಮಿ ಮೊದಲಾದವರು ಪಾಲ್ಗೊಂಡಿದ್ದರು.

ಎಸ್‌ಐಆರ್ ಬಳಿಕ ಅಂತಿಮ ಮತದಾರರ ಪಟ್ಟಿ ಪ್ರಕಟ

• **ಉದಯವಾಹಿನಿ, ಉಡುಪಿ-**

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ಉಡುಪಿ ಜಿಲ್ಲೆಯಲ್ಲಿ ಒಟ್ಟು 49,733 ಮತದಾರರ ಹೆಸರುಗಳು ಪಟ್ಟಿಯಿಂದ ಕಡಿತಗೊಂಡಿವೆ. ಇದರೊಂದಿಗೆ ಜಿಲ್ಲೆಯಲ್ಲಿ ಮತದಾರರ ಸಂಖ್ಯೆ 10,63,876ರಿಂದ 10,14,143ಕ್ಕೆ ಇಳಿಕೆಯಾಗಿದೆ. ಮಣಿಪಾಲದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ. ಅವರು ಅಂತಿಮ ಮತದಾರರ ಪಟ್ಟಿಯ ವಿವರಗಳನ್ನು ಪ್ರಕಟಿಸಿದರು. ಜೂನ್ 16ರಂದು ಆರಂಭಗೊಂಡ ಎಸ್‌ಐಆರ್ ಪ್ರಕ್ರಿಯೆಯ ಗಣತಿ ಹಂತದಲ್ಲೇ ಜಿಲ್ಲೆಯಲ್ಲಿ 63,331 ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗಿತ್ತು. ಆಗಸ್ಟ್ 24ರಂದು ಪ್ರಕಟಗೊಂಡ ಕರಡು ಮತದಾರರ ಪಟ್ಟಿಯಲ್ಲಿ 10,00,545 ಮತದಾರರಿದ್ದರು. ಕರಡು ಪಟ್ಟಿ ಪ್ರಕಟಗೊಂಡ ಬಳಿಕ 17,334 ಹೊಸ ಮತದಾರರ ಹೆಸರು ಸೇರ್ಪಡೆಯಾಗಿದ್ದು, ವಿವಿಧ ಕಾರಣಗಳಿಂದ 3,736 ಹೆಸರುಗಳನ್ನು ತೆಗೆದುಹಾಕಲಾಗಿದೆ.

ರೈಲ್ವೆ ಇಲಾಖೆ ಬೇಜವಾಬ್ದಾರಿತನಕ್ಕೆ ಕೋರ್ಟ್ ಚಾಟಿ; 16,000 ದಂಡ..!

• **ಉದಯವಾಹಿನಿ ಶಿವಮೊಗ್ಗ:**

ರೈಲಿನಲ್ಲಿ ಪ್ರಯಾಣಿಕರಿಗೆ ಕನಿಷ್ಠ ಮೂಲಸೌಕರ್ಯವಾದ ಕುಡಿಯುವ ನೀರು ಹಾಗೂ ಶೌಚಾಲಯಕ್ಕೆ ನೀರು ಒದಗಿಸದ ರೈಲ್ವೆ ಇಲಾಖೆಗೆ ಶಿವಮೊಗ್ಗ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಚಾಟಿ ಬೀಸಿದೆ.

ರೈಲ್ವೆ ಇಲಾಖೆಯ ಈ ಬೇಜವಾಬ್ದಾರಿತನವನ್ನು 'ಸೇವೆಯಲ್ಲಾದ ಗಂಭೀರ ಲೋಪ' ಎಂದು ಪರಿಗಣಿಸಿರುವ ನ್ಯಾಯಾಲಯ, ತೊಂದರೆಗೊಳಗಾದ ಪ್ರಯಾಣಿಕರಿಗೆ ಒಟ್ಟು ರೂ.16,000 ಪರಿಹಾರ ಹಾಗೂ ಕಾನೂನು ವೆಚ್ಚ ಪಾವತಿಸುವಂತೆ ಆದೇಶಿಸಿದೆ. ಶಿವಮೊಗ್ಗದ ಬಸವನಗುಡಿಯ ಲೋಕೋಪಯೋಗಿ ಇಲಾಖೆ ವಸತಿ ಗೃಹದ ನಿವಾಸಿ ನಾಗೇಂದ್ರ ಅವರು 23 ಮಂದಿ ಕುಟುಂಬಸ್ಥರು ಮತ್ತು ಸಂಬಂಧಿಕರೊಂದಿಗೆ ತಿರುಪತಿಯ ತಿರುಮಲ ವೆಂಕಟೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ, ಯಲಹಂಕದಿಂದ ಶಿವಮೊಗ್ಗಕ್ಕೆ ರೈಲಿನಲ್ಲಿ ವಾಪಸಾಗುತ್ತಿದ್ದರು.

ಉದಯವಾಹಿನಿ ಚಿತ್ರ

ಈ ವೇಳೆ ಅವರು ಸಾಮಾನ್ಯ ಟಿಕೆಟ್‌ಗಳಿಗಾಗಿ 1,000 ರೂ. ಪಾವತಿಸಿದ್ದರು. ರೈಲು ಸಂಖ್ಯೆ 6675ರಲ್ಲಿ ಪ್ರಯಾಣಿಸುತ್ತಿದ್ದಾಗ ಶೌಚಾಲಯಗಳಲ್ಲಿ ನೀರಿನ ಪೂರೈಕೆ ಇಲ್ಲದಿರುವುದು ಗಮನಕ್ಕೆ ಬಂದಿದೆ. ಈ ಕುರಿತು ತುಮಕೂರು ರೈಲು ನಿಲ್ದಾಣದ ನಿಲ್ದಾಣಾಧಿಕಾರಿಗೆ ದೂರು ನೀಡಿದರೂ ಯಾವುದೇ ಪ್ರತಿಕ್ರಿಯೆ ಸಿಗಲಿಲ್ಲ ಎಂದು ನಾಗೇಂದ್ರ ತಿಳಿಸಿದ್ದಾರೆ. ಬಳಿಕ ಅವರು ತುಮಕೂರಿನಲ್ಲಿ ರೈಲಿನಿಂದ ಇಳಿದು, ಮತ್ತೊಂದು ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಯಾಣ ಮುಂದುವರಿಸಲು ಹೆಚ್ಚುವರಿಯಾಗಿ 1,760 ರೂ. ಪಾವತಿಸಬೇಕಾಯಿತು.

ಟಿಕೆಟ್ ದರ ಮರುಪಾವತಿಸುವಂತೆ ನೋಟಿಸ್ ನೀಡಿದರೂ ಉತ್ತರ ಬಾರದ ಹಿನ್ನೆಲೆಯಲ್ಲಿ ನಾಗೇಂದ್ರ ಅವರು ಗ್ರಾಹಕ ಆಯೋಗದ ಮೊರೆ ಹೋಗಿದ್ದರು. ರೈಲ್ವೆ ಸೇವೆಯಲ್ಲಿ ಲೋಪವಾಗಿದೆ ಎಂದು ಅವರು ದೂರಿನಲ್ಲಿ ಆರೋಪಿಸಿದ್ದರು.

ಈಶಾನ್ಯ ಶಿಕ್ಷಕರ ಕ್ಷೇತ್ರ ಚುನಾವಣೆ: ಬಿ.ಜೆ.ಪಿ. ಅಭ್ಯರ್ಥಿ ಶಶೀಲ್ ಜಿ. ನಮೋಶಿ ಗೆಲುವು
3,297 ಮತಗಳ ಮುನ್ನಡೆ ಸಾಧಿಸುವುದರ ಜೊತೆಗೆ ವಿನ್ನಿಂಗ್ ಕೋಟಾ ತಲುಪಿದ ಕಾರಣ ವಿಜಯಶಾಲಿಯಾಗಿದ್ದಾರೆ

• **ಉದಯವಾಹಿನಿ ಕಲಬುರಗಿ,:**

ಈಶಾನ್ಯ ಶಿಕ್ಷಕರ ಕ್ಷೇತ್ರ ಚುನಾವಣೆಯ ಮತ ಎಣಿಕೆ ಕಾರ್ಯ ಮಂಗಳವಾರ ಗುಲ್ಬರ್ಗಾ ವಿಶ್ವವಿದ್ಯಾಲಯದ ಗಣಕ ವಿಭಾಗದ ಭಾಸ್ಕರ್ ಹಾಲ್ ನಲ್ಲಿ ಶಾಂತಿಯುತವಾಗಿ ಜರುಗಿದ್ದು, ಪ್ರಥಮ ಪ್ರಾಶಸ್ತ್ಯ ಮತ ಎಣಿಕೆಯಲ್ಲಿಯೇ ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ಶಶೀಲ್ ಜಿ. ನಮೋಶಿ ಅವರು ವಿನ್ನಿಂಗ್ ಕೋಟಾಕ್ಕಿಂತ 1,415 ಮತಗಳು ಹೆಚ್ಚು ಪಡೆಯುವ ಮೂಲಕ ಸತತ ಎರಡನೇ ಬಾರಿ ಗೆಲುವು ಸಾಧಿಸಿದ್ದಾರೆ.

1 : ಧನ್ಯವಾದ ತಿಳಿಸಿದ ಚುನಾವಣಾಧಿಕಾರಿ
2 : 1,873 ಮತಗಳು ತಿರಸ್ಕೃತ ವಾಗಿವೆ
3 : ವಿನ್ನಿಂಗ್ ಕೋಟಾ ಎಂದು ಘೋಷಿಸಿ

ಕ್ಷೇತ್ರದ ಒಟ್ಟು 34,784 ಮತದಾರರ ಪೈಕಿ ಚಲಾವಣೆಯಾದ 30,253 ಮತಗಳ ಪ್ರಥಮ ಪ್ರಾಶಸ್ತ್ಯ ಮತ ಎಣಿಕೆ ಕಾರ್ಯ ಒಟ್ಟು ಮೂರು ಸುತ್ತಿನಲ್ಲಿ ನಡೆದಿದ್ದು, ಬಿ.ಜೆ.ಪಿ ಅಭ್ಯರ್ಥಿ ಶಶೀಲ ಜಿ. ನಮೋಶಿ ಅವರು ಕಾಂಗ್ರೆಸ್ ಅಭ್ಯರ್ಥಿ ಶರಣಪ್ಪ ಮಟ್ಟೂರು ಅವರಿಗಿಂತ ಒಟ್ಟಾರೆ 3,297 ಮತಗಳ ಮುನ್ನಡೆ ಸಾಧಿಸುವುದರ ಜೊತೆಗೆ ವಿನ್ನಿಂಗ್ ಕೋಟಾ ತಲುಪಿದ ಕಾರಣ ವಿಜಯಶಾಲಿಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಜಹೀರಾ

ಉದಯವಾಹಿನಿ ಚಿತ್ರ

ನಸೀಮ್ ಅವರು ಘೋಷಿಸಿ ವಿಜೇತ ಅಭ್ಯರ್ಥಿಗೆ ಪ್ರಮಾಣ ಪತ್ರ ವಿತರಿಸಿದರು. ಪ್ರಥಮ ಪ್ರಾಶಸ್ತ್ಯ ಮತ ಎಣಿಕೆಯ ಮೂರು ಸುತ್ತಿನಲ್ಲಿಯೂ ಶಶೀಲ್ ಜಿ. ನಮೋಶಿ ಅವರು ಮುನ್ನಡೆ ಸಾಧಿಸಿದ್ದು ವಿಶೇಷವಾಗಿತ್ತು. ಮತದಾನವಾದ 30,253 ಮತದಲ್ಲಿ 28,380 ಮತ ಸಿಂಧುವಾಗಿದ್ದು, 1,873 ಮತಗಳು ತಿರಸ್ಕೃತ ವಾಗಿವೆ. ಎಂ.ಎಲ್.ಸಿ ಆಯ್ಕೆಗೆ ಚುನಾವಣಾ ಆಯೋಗದ ಮಾರ್ಗಸೂಚಿಯಂತೆ ಒಟ್ಟು ಸಿಂಧು ಮತಗಳಲ್ಲಿ ಶೇ.50+1 ರಂತೆ 14,191 ಮತಗಳು ವಿನ್ನಿಂಗ್ ಕೋಟಾ ಎಂದು ಘೋಷಿಸಿ, ಪ್ರಥಮ ಪ್ರಾಶಸ್ತ್ಯ ಮತ ಎಣಿಕೆಯಲ್ಲಿ 15,596 ಮತಗಳನ್ನು ಪಡೆದು ವಿನ್ನಿಂಗ್ ಕೋಟಾ ತಲುಪಿದ್ದರಿಂದ ಬಿ.ಜೆ.ಪಿ ಅಭ್ಯರ್ಥಿ ಶಶೀಲ್ ಜಿ. ನಮೋಶಿ ಅವರ ಗೆಲುವನ್ನು ಘೋಷಿಸಲಾಯಿತು.

> **ಮಹಾನಗರ ಪಾಲಿಕೆ ಆಯುಕ್ತರು, ಸಹಾಯಕ ಆಯುಕ್ತರು, ತಹಶೀಲ್ದಾರರು, ಪೊಲೀಸ್, ಮತ ಎಣಿಕೆ ಅಧಿಕಾರಿ-ಸಿಬ್ಬಂದಿ ಹಾಗೂ ವಿಶೇಷವಾಗಿ ರಾಜಕೀಯ ಪಕ್ಷದ ಮುಖಂಡರು, ಅಭ್ಯರ್ಥಿಗಳು ಹಾಗೂ ಮತದಾರರಿಗೆ ಇದೇ ಸಂದರ್ಭದಲ್ಲಿ ಧನ್ಯವಾದ ತಿಳಿಸಿದರು.** -ಚುನಾವಣಾಧಿಕಾರಿ ಜಹೀರಾ ನಸೀಮ್

ಅದೇ ರೀತಿ ಪಕ್ಷೇತರ ಅಭ್ಯರ್ಥಿಗಳಾದ ಕವಿರಾಜ ನಾಗಣ್ಣ ಮೋತಕಪಲ್ಲಿ- 49, ಟಿ.ಕೆ. ದಾಸರ- 06, ಮಹಬೂಬ್ ಮೊಹಮ್ಮದ ಖಾಜಾ ಹುಸೇನ್ ವಂಟೇಲಿ-10, ರಾಜಕುಮಾರ ಕೆ. ಕಲಬುರಗಿ-167, ರಾಜು ದೇವಪ್ಪ ಸೊನ್ನ-127, ಶರಣು ಪಿ. ಸುಗೂರು-13, ಶಶಿಧರ

> **ಪ್ರಥಮ ಪ್ರಾಶಸ್ತ್ಯ ಮತ ಎಣಿಕೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಶರಣಪ್ಪ ಮಟ್ಟೂರ್-12,299, ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ಶಶೀಲ್ ಜಿ. ನಮೋಶಿ-15,596, ಆಮ್ ಆದ್ಮಿ ಪಕ್ಷದ ಅಭ್ಯರ್ಥಿ ಸಾಯಬಣ್ಣ ಜಮಾದಾರ-40, ಜನತಾ ದಳ(ಸಂಯುಕ್ತ) ಪಕ್ಷದ ಅಭ್ಯರ್ಥಿ ಶಂಕರೆಡ್ಡಿ ಪಾಟೀಲ-44 ಮತಗಳನ್ನು ಪಡೆದರು.**

ಬಸವರಾಜ-04, ಶಿವಶಂಕರ ಅಣ್ಣಪ್ಪ ತರಸಳ್ಳ-12 ಹಾಗೂ ಡಾ.ಸುರೇಶ ದಾವಿದದ ಅವರು 13 ಮತಗಳನ್ನು ಪಡೆದಿದ್ದಾರೆ. ಚುನಾವಣಾ ವೀಕ್ಷಕ ಶಿವಕುಮಾರ ಕೆ.ಬಿ. ಅವರ ಸಮಕ್ಷಮ ಬೆಳಿಗ್ಗೆ 8 ಗಂಟೆಯಿಂದಲೆ ಆರಂಭವಾದ ಮತ ಎಣಿಕೆಯು ಸುಸೂತ್ರವಾಗಿ ನಡೆಯಿತು. ಕಾನೂನು ಸುವ್ಯವಸ್ಥೆ ಕಾಪಾಡಲು ನೂರಾರು ಸಂಖ್ಯೆಯಲ್ಲಿ ಅಗತ್ಯ ಪೊಲೀಸ್ ಭದ್ರತೆ ಕಲ್ಪಿಸಲಾಗಿತ್ತು. ಕಲಬುರಗಿ ಡಿ.ಸಿ. ಇಕ್ರಂ ಶರೀಫ್, ಯಾದಗಿರಿ ಡಿ.ಸಿ. ರಾಹುಲ ಪಾಂಡ್ವೆ, ಬೀದರ ಡಿ.ಸಿ. ಶಿಲ್ಪಾ ಶರ್ಮಾ, ರಾಯಚೂರು ಡಿ.ಸಿ. ಪೂವಿತಾ ಎಸ್., ಬಳ್ಳಾರಿ ಡಿ.ಸಿ ಡಾ.ಕೆ.ನಾಗೇಂದ್ರ ಪ್ರಸಾದ, ಕೊಪ್ಪಳ ಡಿ.ಸಿ. ಡಾ.ಸುರೇಶ ಬಿ. ಇಟ್ನಾಳ , ಕಲಬುರಗಿ ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಕಲಬುರಗಿ ಜಿಲ್ಲಾ ಪಂಚಾಯತ್ ಸಿ.ಇ.ಓ ರಾಹುಲ ಸಂಕನೂರ ಸೇರಿದಂತೆ ಅನೇಕ ಅಧಿಕಾರಿಗಳು ಎಣಿಕೆ ಪ್ರಕ್ರಿಯಲ್ಲಿ ಭಾಗಿಯಾಗಿದ್ದರು.

ತ್ರಿಪಕ್ಷೀಯ ಒಪ್ಪಂದ ಸೂತ್ರ ರೂಪಿಸಿದ ರಾಜ್ಯ ಸರ್ಕಾರ..!

• **ಉದಯವಾಹಿನಿ, ಬೆಳಗಾವಿ:**

ರಾಜ್ಯದಲ್ಲಿ ತೀವ್ರ ಸ್ವರೂಪ ಪಡೆದುಕೊಂಡಿದ್ದ ಕಬ್ಬು ಬೆಲೆ ನಿಗದಿ ವಿವಾದಕ್ಕೆ ಬ್ರೇಕ್ ಹಾಕಲು ರಾಜ್ಯ ಸರ್ಕಾರ ಮುಂದಾಗಿದ್ದು, 'ತ್ರಿಪಕ್ಷೀಯ ಒಪ್ಪಂದ' ವೆಂಬ ಹೊಸ ಸೂತ್ರವನ್ನು ಪ್ರಸ್ತಾಪಿಸಿದೆ. ರೈತರು, ಸಕ್ಕರೆ ಕಾರ್ಖಾನೆ ಮಾಲೀಕರು ಮತ್ತು ರಾಜ್ಯ ಸರ್ಕಾರದ ನಡುವೆ 'ತ್ರಿಪಕ್ಷೀಯ ಒಪ್ಪಂದ' ಮಾಡಿಕೊಳ್ಳುವ ಹೊಸ ಸೂತ್ರವನ್ನು ಸರ್ಕಾರ ಪ್ರಸ್ತಾಪಿಸಿದೆ.

ಈ ಕುರಿತು ಬೆಂಗಳೂರಿಗೆ ತೆರಳುವ ಮುನ್ನ ಬೆಳಗಾವಿಯ ಸರ್ಕಾರಿ ಅತಿಥಿಗೃಹದಲ್ಲಿ ಸುದ್ದಿಗಾರರೊಂದಿಗೆ ಮಂಗಳವಾರ ಮಾತನಾಡಿದ ಅವರು ಮುಖ್ಯಮಂತ್ರಿ ಡಿಕೆ.ಶಿವಕುಮಾರ್ ಅವರು, ಕಬ್ಬು ಬೆಳೆಗಾರರು ತಮ್ಮ ಉತ್ಪನ್ನಕ್ಕೆ ನ್ಯಾಯಯುತ ಬೆಲೆ ನೀಡುವಂತೆ ಒತ್ತಾಯಿಸುತ್ತಿರುವುದು ಸಮಂಜಸವಾಗಿದೆ.

ಆದರೆ, ರೈತರು ಮತ್ತು ಸಕ್ಕರೆ ಕಾರ್ಖಾನೆಗಳ ಹಿತಾಸಕ್ತಿಗಳ ನಡುವೆ ಸಮತೋಲನ ಕಾಯ್ದುಕೊಳ್ಳುವುದು ಅಗತ್ಯ. ಎರಡೂ ಕಡೆಯವರೊಂದಿಗೆ ಸಮನ್ವಯ ಸಾಧಿಸುವ ಮೂಲಕ ಸಮಸ್ಯೆ ಬಗೆಹರಿಸಲು ರಾಜ್ಯ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಹೇಳಿದರು. ಕಬ್ಬು ಬೆಳೆಗಾರರು ಮತ್ತು ಸಕ್ಕರೆ ಕಾರ್ಖಾನೆಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ತಡರಾತ್ರಿಯವರೆಗೆ ಸಭೆ ನಡೆಸಲಾಗಿದೆ. ರೈತರು ದೇಶದ ಸಂಪತ್ತು. ಅವರ ಜೀವನೋಪಾಯವನ್ನು ರಕ್ಷಿಸಬೇಕು. ರೈತರು ಮತ್ತು ಸಕ್ಕರೆ ಕಾರ್ಖಾನೆಗಳು ಪರಸ್ಪರ ಅವಲಂಬಿತವಾಗಿವೆ. ಹೀಗಾಗಿ, ಇಬ್ಬರ ಹಿತಾಸಕ್ತಿಗಳನ್ನೂ ಗಮನ

ಉದಯವಾಹಿನಿ ಚಿತ್ರ

ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ಪಡೆಯಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಹೆಚ್ಚಿನ ಬಡ್ಡಿದರದಲ್ಲಿ ಸಹಕಾರಿ ಸಂಸ್ಥೆಗಳಿಂದ ಸಾಲ ಪಡೆಯಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ಕಾರ್ಖಾನೆಗಳ ಪ್ರತಿನಿಧಿಗಳು ಸಭೆಯಲ್ಲಿ ವಿವರಿಸಿದ್ದಾರೆ.

ದಲ್ಲಿಟ್ಟುಕೊಳ್ಳಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಕರ್ನಾಟಕದ ಸುಮಾರು 80 ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳು ತಮ್ಮ ಸಮಸ್ಯೆಗಳನ್ನು ಮುಂದಿಟ್ಟಿದ್ದಾರೆ. ಕಳೆದೊಂದು ದಶಕದಿಂದ ಸಕ್ಕರೆ ಬೆಲೆಯಲ್ಲಿ ಗಮನಾರ್ಹ ಏರಿಕೆಯಾಗಿಲ್ಲ.

ಕಬ್ಬು ಅರೆಯುವ ಕಾರ್ಯಾಚರಣೆ ಆರಂಭವಾಗುವುದು ವಿಳಂಬವಾಗುತ್ತಿರುವುದರಿಂದ ಹೊಲಗಳಲ್ಲೇ ಕಬ್ಬು ಒಣಗುವ ಆತಂಕವೂ ಎದುರಾಗಿದೆ ಎಂದು ಪ್ರತಿನಿಧಿಗಳು ಹೇಳಿದ್ದಾರೆ.

ಆಹಾರ ಸುರಕ್ಷತಾ ಅಧಿಕಾರಿಗಳ ದಾಳಿ 50 ಸಾವಿರ ರೂ ದಂಡ

• **ಉದಯವಾಹಿನಿ, ಬಳ್ಳಾರಿ,:**

ನಗರದಲ್ಲಿ ನಿಯಮಬಾಹಿರವಾಗಿ ಹಾಗೂ ಅಶುಚಿತ್ವದಿಂದ ಆಹಾರ ಪದಾರ್ಥಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದ ಹೋಟೆಲ್ಗಳ ಮತ್ತು ಬೇಕರಿಗಳ ಮೇಲೆ ಅ.19 ರಮನದು ಆಹಾರ ಸುರಕ್ಷತೆ ಮತ್ತು ಔಷಧಿ ಆಡಳಿತ ಇಲಾಖೆ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳ ದಾಳಿ ನಡೆಸಿ .ಲನಿಯಮ ಉಲ್ಲಂಘಿಸಿದ ಮಯೂರ, ರೇಣುಕಾ ದರ್ಶಿನಿ ಹೊಟೇಲ್ ಗಳಿಗೆ ದಂಡ ವಿಧಿಸಿದರೆ. ರೇಣುಕಾ ಬೇಕರಿಯ ಸ್ವಚ್ಚತೆಗೆ ಮೆಚ್ಚುಗೆ ವ್ಯಕ್ತಪಡಿಸಿದೆ. ಹಳೇ ಬಸ್ ನಿಲ್ದಾಣದ ಎದುರಿಗಿರುವ ಹೋಟೆಲ್ ಮಯೂರಕ್ಕೆ ಭೇಟಿ ನೀಡಿದಾಗ ಹಲವು ಗಂಭೀರ ಲೋಪಗಳು ಪತ್ತೆಯಾಗಿದ್ದು, ಆಹಾರ ಸುರಕ್ಷತಾ ಕಾಯ್ದೆಯಡಿ ಯಾವುದೇ ಪರವಾನಿಗೆ ಪಡೆಯದೆ ಹೋಟೆಲ್ ನಡೆಸಲಾಗುತ್ತಿತ್ತು. ಆಹಾರ ತಯಾರಿಸುವ ಜಾಗದಲ್ಲಿ ತೀವ್ರ ಅಶುಚಿತ್ವ, ಗೋಡೆ ಹಾಗೂ ಕಿಟಕಿಗಳಲ್ಲಿ ಧೂಳು ಆವರಿಸಿತ್ತು ಮತ್ತು ಚರಂಡಿ ವ್ಯವಸ್ಥೆ ಸರಿಯಾಗಿರಲಿಲ್ಲ. ಅಡುಗೆ ತಯಾರಕರು ಗ್ಲೌಸ್ ಹಾಗೂ ಮಾಸ್ಕ್ ಧರಿಸಿರಲಿಲ್ಲ. ಕಲಬೆರಕೆ ಶಂಕೆಯ ಮೇಲೆ ಸ್ಥಳದಲ್ಲೇ 8 ಆಹಾರ ಮಾದರಿಗಳನ್ನು ಪರೀಕ್ಷೆಗಾಗಿ ಸಂಗ್ರಹಿಸಲಾಯಿತು.ನಿಯಮ ಉಲ್ಲಂಘನೆಯ ಹಿನ್ನಲೆಯಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರ ಅಡಿಯಲ್ಲಿ ಹೋಟೆಲ್ ಗೆ ಸ್ಥಳದಲ್ಲೇ ರೂ.25,000 ದಂಡ ವಿಧಿಸಿ, ನ್ಯೂನತೆಗಳನ್ನು ತಕ್ಷಣವೇ ಸರಿಪಡಿಸಿಕೊಳ್ಳುವಂತೆ ಎಚ್ಚರಿಕೆ ನೀಡಲಾಗಿದೆ.

ಉದಯವಾಹಿನಿ ಚಿತ್ರ

ಪರಿಶೀಲನೆ ವೇಳೆ ಅಡುಗೆಗೆ ಕೊಳೆತ ತರಕಾರಿ ಬಳಸುತ್ತಿರುವುದು ಹಾಗೂ ಟೀ ಪುಡಿಗೆ ಬಣ್ಣ ಮಿಶ್ರಣ ಮಾಡಿರುವುದು ಬೆಳಕಿಗೆ ಬಂದಿದೆ. ಈ ಹೋಟೆಲ್ನಿಂದಲೂ ಆಹಾರ ಮಾದರಿಗಳನ್ನು ಸಂಗ್ರಹಿಸಲಾಗಿದ್ದು, ನಿಯಮ ಉಲ್ಲಂಘನೆಗಾಗಿ ಸ್ಥಳದಲ್ಲೇ ರೂ.25,000 ದಂಡ ವಿಧಿಸಲಾಗಿದೆ.

ದುರ್ಗಮ್ಮ ಗುಡಿ ಸರ್ಕಲ್ ನಲ್ಲಿರುವ ಹೋಟೆಲ್ ರೇಣುಕಾ ದರ್ಶಿನಿಯಲ್ಲೂ ಪರವಾನಿಗೆ ಇಲ್ಲದೆ ವ್ಯಾಪಾರ ನಡೆಸುತ್ತಿರುವುದು ಕಂಡುಬಂದಿದೆ. ಆಹಾರ ತಯಾರಿಕಾ ಸ್ಥಳದಲ್ಲಿ ಶುಚಿತ್ವದ ಕೊರತೆ ಮತ್ತು ಧೂಳು ತುಂಬಿತ್ತು.ಕೆಲಸಗಾರರು ಮಾಸ್ಕ್ ಹಾಗೂ ಗ್ಲೌಸ್ ಬಳಸುತ್ತಿರಲಿಲ್ಲ.

ಮೆಸ್ಕಾಂ ಇಲಾಖೆಯ ವೈಫಲ್ಯ ಖಂಡಿಸಿ ಪಂಜಿನ ಮೆರವಣಿಗೆ

• **ಉದಯವಾಹಿನಿ, ಉಡುಪಿ**

ಭಾರತೀಯ ಜನತಾ ಪಾರ್ಟಿ ಉಡುಪಿ ನಗರ ವತಿಯಿಂದ ಉಡುಪಿ ಶಾಸಕ ಯಶ್ ಪಾಲ್ ಸುವರ್ಣ ನೇತೃತ್ವದಲ್ಲಿ ಮೆಸ್ಕಾಂ ವೈಫಲ್ಯ ಖಂಡಿಸಿ ಪಂಜಿನ ಮೆರವಣಿಗೆ ಪ್ರತಿಭಟನಾ ಜಾಥ ನಡೆಸುವುದಾಗಿ ಉಡುಪಿ ನಗರ ಬಿಜೆಪಿ ಅಧ್ಯಕ್ಷ ದಿನೇಶ್ ಅಮೀನ್ ಹೇಳಿದ್ದಾರೆ.

ಅಕ್ಟೋಬರ್ 28 ಬುಧವಾರ ಸಂಜೆ 6.30ಕ್ಕೆ ಉಡುಪಿ ಬೋರ್ಡ್ ಹೈಸ್ಕೂಲ್ ಬಳಿಯಿಂದ ಆರಂಭಗೊಳ್ಳುವ ಪಂಜಿನ ಮೆರವಣಿಗೆ ಕೆ. ಎಂ. ಮಾರ್ಗವಾಗಿ ಸಾಗಿ ಡಯಾನಾ

ಉದಯವಾಹಿನಿ ಚಿತ್ರ

ಸರ್ಕಲ್ ನಿಂದ ಮೆಸ್ಕಾಂ ಕಚೇರಿ ಬಳಿ ಸಮಾಪನಗೊಳ್ಳಲಿದೆ. ಉಡುಪಿ ಜಿಲ್ಲೆಯಾದ್ಯಂತ ನಿರಂತರ ಪವರ್ ಕಟ್, ಲೋ ವೋಲ್ಟೇಜ್ ಸಮಸ್ಯೆ, ವಿದ್ಯುತ್ ಕಣ್ಣಾಮುಚ್ಚಾಲೆ, ಟ್ರಾನ್ಸ್ ಫಾರ್ಮರ್ ಕೊರತೆ, ಕಳಪೆ ನಿರ್ವಹಣೆ, ಮೆಸ್ಕಾಂ ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಮೊದಲಾದ ಸಂಸ್ಯೆಗಳಿಂದ ಜಿಲ್ಲೆಯ ಜನತೆ ಸಮಸ್ಯೆ ಎದುರಿಸುವಂತಾಗಿದೆ. ರಾಜ್ಯ ಸರ್ಕಾರ ತಕ್ಷಣ ಮೆಸ್ಕಾಂ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸಿ ಜಿಲ್ಲೆಯ ಜನತೆಗೆ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವಂತೆ ಆಗ್ರಹಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಈ ಪಂಜಿನ ಮೆರವಣಿಗೆಯಲ್ಲಿ ಪಕ್ಷದ ನಾಯಕರು, ಕಾರ್ಯಕರ್ತರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ದಿನೇಶ್ ಅಮೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಅಂಕ ಗಳಿಕೆಗೆ ಸೀಮಿತ ಬೇಡ' ವಿದ್ಯಾರ್ಥಿಗಳಿಗೆ ವೆಂಕಟೇಶ ದೇಶಪಾಂಡೆ ಸಲಹೆ

• **ಉದಯವಾಹಿನಿ, ಹುಬ್ಬಳ್ಳಿ:**

'ವಿದ್ಯಾರ್ಥಿಗಳು ಕೇವಲ ಅಂಕ ಗಳಿಸುವುದಕ್ಕಷ್ಟೇ ಸೀಮಿತವಾಗದೇ, ಶಿಸ್ತು, ಆತ್ಮವಿಶ್ವಾಸ, ಸೃಜನಶೀಲತೆ, ಮಾನವೀಯ ಮೌಲ್ಯಗಳು ಹಾಗೂ ನೂತನ ಕೌಶಲಗಳನ್ನು ಬೆಳೆಸಿಕೊಳ್ಳಬೇಕು' ಎಂದು ಕರ್ನಾಟಕ ಡಿಜಿಟಲ್ ಎಕ್‌ನಾಮಿ ಮಿಷನ್ ವೆಂಕಟೇಶ ದೇಶಪಾಂಡೆ ಹೇಳಿದರು.

ಕೆಎಲ್‌ಇ ಸಂಸ್ಥೆಯ ಪಿ.ಸಿ. ಜಾಬಿನ್ ವಿಜ್ಞಾನ ಕಾಲೇಜಿನ ಎಂ.ಸಿ.ಎ. ವಿದ್ಯಾರ್ಥಿಗಳ ಓರಿಯಂಟೇಷನ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಇಂದಿನ ತಂತ್ರಜ್ಞಾನ ಯುಗದಲ್ಲಿ ಕೃತಕ ಬುದ್ಧಿಮತ್ತೆ (ಎಐ), ಡೇಟಾಸೈನ್ಸ್, ಸೈಬರ್ ಸೆಕ್ಯೂರಿಟಿ ಕ್ಷೇತ್ರವೂ ವೇಗವಾಗಿ ಬೆಳೆಯುತ್ತಿವೆ. ಈ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ನಿರಂತರವಾಗಿ ಅಧ್ಯಯನ ಮಾಡಬೇಕು. ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಯುಗಕ್ಕೆ ಸನ್ನದ್ಧರಾಗಬೇಕು. ಪೋಷಕರ ಕನಸಗಳನ್ನು ನನಸಾಗಲು ಪ್ರಯತ್ನಿಸಬೇಕು' ಎಂದರು. ಪಿ.ಸಿ.ಜಾಬಿನ್ ವಿಜ್ಞಾನ ಕಾಲೇಜಿನ ಪ್ರಾಚಾರ್ಯೆ ಸಂಧ್ಯಾ ಕುಲಕರ್ಣಿ, ಸಿದ್ದಲಿಂಗಪ್ಪ ಸಿ. ಕಡಕೋಳ, ಪ್ರಿಯಾಂಕಾ ಕುರಹಟ್ಟಿ ಪ್ರಾರ್ಥಿಸಿದರು. ಸಂಜಯ ಕುಲಕರ್ಣಿ ಪರಿಚಯಿಸಿದರು. ಹೇಮಾ ಚಕರಡ್ಡಿ ವಂದಿಸಿದರು. ಅನುಶಾ ಎಚ್. ನಿರೂಪಿಸಿದರು.

ಬಿಜೆಪಿ ಅಭ್ಯರ್ಥಿ ಸಂಕನೂರಗೆ 'ಹ್ಯಾಟ್ರಿಕ್' ಗೆಲುವು

• **ಉದಯವಾಹಿನಿ, ಧಾರವಾಡ:**

ವಿಧಾನ ಪರಿಷತ್ತಿನ ಪಶ್ಚಿಮ ಪದವೀಧರರ ಕ್ಷೇತ್ರದ ಚುನಾವಣೆ ಮತ ಎಣಿಕೆ ಮುಗಿದಿದದ್ದು ಬಿಜೆಪಿ ಅಭ್ಯರ್ಥಿ ಎಸ್.ವಿ.ಸಂಕನೂರ 33,711 ಮತ ಗಳಿಸಿ ಗೆಲುವು ಸಾಧಿಸಿದ್ದಾರೆ. ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್ ಮೋಹನ ಲಿಂಬಿಕಾಯಿ ಅವರನ್ನು 9,323 ಮತಗಳ ಅಂತರದಿಂದ ಸೋಲಿಸಿದ್ದಾರೆ.ರಾತ್ರಿ 2 ಗಂಟೆ ಹೊತ್ತಿಗೆ ಸಂಕನೂರ ಅವರು ಮೂರನೇ ಬಾರಿಗೆ ಗೆಲುವು ಸಾಧಿಸಿದರು. ಮತ ಎಣಿಕೆ ಕೊನೆ ಸುತ್ತು ಮುಗಿದಾಗ ಎಸ್.ವಿ.ಸಂಕನೂರ ಅವರು 33,711, ಕಾಂಗ್ರೆಸ್‌ನ ಮೋಹನ ಲಿಂಬಿಕಾಯಿ 24,388 ಅವರು ಮತಗಳನ್ನು ಪಡೆದರು.

ಪಕ್ಷೇತರ ಅಭ್ಯರ್ಥಿ ಕಾಂತಕುಮಾರ್ ಅವರು 4,055 ಮತಗಳನ್ನು ಪಡೆದರು. ಮತ ಗಳಿಕೆಯಲ್ಲಿ ಐದು ಅಭ್ಯರ್ಥಿಗಳು ಮೂರಂಕಿ ಹಾಗೂ ಆರು ಅಭ್ಯರ್ಥಿಗಳು ಎರಡಂಕಿ ದಾಟಲಿಲ್ಲ.10,245 ಮತ ಅಸಿಂಧು: ಒಟ್ಟು 73,691 ಮತ ಎಣಿಕೆಯಲ್ಲಿ 10,245 ಮತಗಳು ಅಸಿಂಧುವಾಗಿವೆ. 63,446 ಮತಗಳು ಸಿಂಧುವಾಗಿವೆ.ಎಸ್.ವಿ.ಸಂಕನೂರ ಸುದ್ದಿಗಾರರೊಂದಿಗೆ ಮಾತನಾಡಿ, :ಬಿಜೆಪಿ ಮತದಾರರ ಗೆಲುವು ಇದು. ಪಕ್ಷದ ನಾಯಕರು, ಕಾರ್ಯಕರ್ತರ ಶ್ರಮ ಗೆಲುವಿಗೆ ಕಾರಣ' ಎಂದು ಸಂತಸ ಹಂಚಿಕೊಂಡರು ಶಾಸಕ ಮಹೇಶ ಟೆಂಗಿನಕಾಯಿ ಮಾತನಾಡಿ, 'ಕಾಂಗ್ರೆಸ್‌ನವರು ಇವಿಎಂ ಸರಿಯಿಲ್ಲ ಎಂದು ಆಪಾದಿಸಿ, ಬ್ಯಾಲೆಟ್ ಪೇಪರ್ ಬೇಕು ಎಂದು ಹೇಳಿದ್ದರು. ಮತದಾರರು ಬ್ಯಾಲೆಟ್ ಪೇಪರ್ ಮೂಲಕ ನಡೆದ ಈ ಚುನಾವಣೆಯಲ್ಲೂ ಬಿಜೆಪಿಯನ್ನು ಬೆಂಬಲಿಸಿದ್ದಾರೆ. ಕುಣಿಯಲಾರದವರು ನೆಲ ಡೊಂಕು ಎಂದಂತೆ ಕಾಂಗ್ರೆಸ್‌ನವರು ಆಡುತ್ತಾರೆ' ಎಂದು ಟೀಕಿಸಿದರು.

ಬದುಕಿಗಾಗಿ ನಗರಗಳತ್ತ ಮುಖ ಮಾಡಿದ ಅನ್ನದಾತ..!
ಕೆಲವರು ಮಳೆ ಬಂದರೆ ಮಣ್ಣಿನಲ್ಲಿನ ತೇವಾಂಶ ಬೇಗ ಆವಿಯಾಗದಿರಲಿ ಎಂಬ ನಿರೀಕ್ಷೆಯಲ್ಲಿ ಮೇಲ್ಮಣ್ಣಿನ ಮೇಲೆ ಮರಳು ಮತ್ತು ಸಣ್ಣ ಕಲ್ಲುಗಳನ್ನು ಹರಡಿದ್ದಾರೆ.

• **ಉದಯವಾಹಿನಿ, ಗದಗ ಜಿಲ್ಲೆ:**

ರಾಜ್ಯದಲ್ಲಿ ಮುಂಗಾರು ಸಂಪೂರ್ಣ ವಿಫಲವಾಗಿದ್ದು, ಗದಗ ಜಿಲ್ಲೆಯಾದ್ಯಂತ ಭೀಕರ ಬರಗಾಲ ಆವರಿಸಿದೆ.ಜಿಲ್ಲೆಯ ಅತಿ ಹೆಚ್ಚು ಹಾನಿಗೊಳಗಾದ ಪ್ರದೇಶಗಳಲ್ಲಿ ಒಂದಾದ ಹೊಂಬಾಳ ಗ್ರಾಮದಲ್ಲಿ ಪರಿಸ್ಥಿತಿ ಅತ್ಯಂತ ಗಂಭೀರವಾಗಿದ್ದು, ಅನ್ನದಾತರು ಹತಾಶೆಯ ಅಂಚಿಗೆ ತಲುಪಿದ್ದಾರೆ.

1 : ಬೆಳೆಗಳನ್ನು ಉಳಿಸಿಕೊಳ್ಳುವ ಅವಕಾಶವಿದೆ
2 : ಮಳೆಯ ಅನಿಶ್ಚಿತತೆ ಅವರನ್ನು ಕಾಡುತ್ತಿದೆ
3 : ಅತಿವೃಷ್ಟಿ ಬರ ಅವರ ಆಸೆಗೆ ತಣ್ಣೀರೆರಚಿವೆ

ಜನವರಿಯಿಂದ ಜಿಲ್ಲೆಯಲ್ಲಿ ವಾಡಿಕೆಯಂತೆ ಮಳೆಯಾಗದ ಹಿನ್ನೆಲೆಯಲ್ಲಿ ಇಡೀ ಕೃಷಿ ಕ್ಷೇತ್ರ ಸಂಪೂರ್ಣವಾಗಿ ನೆಲಕಚ್ಚಿದೆ. ಜನವರಿಯಿಂದಲೂ ಹೊಂಬಾಳ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಷ್ಟಾಗಿ ಮಳೆಯಾಗಿಲ್ಲ. ಹೀಗಾಗಿ ರೈತರು ಹೊಲಗಳನ್ನು ಖಾಲಿ ಬಿಟ್ಟಿದ್ದು, ಕೆಲವರು ಮಳೆ ಬಂದರೆ ಮಣ್ಣಿನಲ್ಲಿನ ತೇವಾಂಶ ಬೇಗ ಆವಿಯಾಗದಿರಲಿ ಎಂಬ ನಿರೀಕ್ಷೆಯಲ್ಲಿ ಮೇಲ್ಮಣ್ಣಿನ ಮೇಲೆ ಮರಳು ಮತ್ತು ಸಣ್ಣ ಕಲ್ಲುಗಳನ್ನು ಹರಡಿದ್ದಾರೆ.

ಗದಗದ ನಿವಾಸಿ ಪ್ರಕಾಶ್ ಅಣ್ಣಿಗೇರಿ ಅವರ ಸ್ಥಿತಿಯೂ

ಉದಯವಾಹಿನಿ ಚಿತ್ರ

ಇದಕ್ಕಿಂತ ಭಿನ್ನವಾಗಿಲ್ಲ. ಹೊಂಬಾಳದಲ್ಲಿ ಅವರಿಗೆ ನಾಲ್ಕು ಎಕರೆ ಜಮೀನಿದ್ದು, ಕಳೆದ ಎರಡು ವರ್ಷಗಳಿಂದ ಸಹೋದರರ ನೆರವಿನೊಂದಿಗೆ ಮಲೇಷ್ಯಾ ತಳಿಯ ಸೀತಾಫಲ ಮತ್ತು ತೆಂಗು ಬೆಳೆಸುತ್ತಿದ್ದಾರೆ. ಆದರೆ, ಈ ವರ್ಷದ ಬರ ಅವರ ಯೋಜನೆಗಳಿಗೆ ಅಡ್ಡಿಯಾಗಿದೆ. ಮುಂದಿನ ದಿನಗಳಲ್ಲಿ ಮಳೆಯಾದರೆ ಬೆಳೆಗಳನ್ನು ಉಳಿಸಿಕೊಳ್ಳುವ ಅವಕಾಶವಿದೆ ಎಂಬ ನಿರೀಕ್ಷೆಯಲ್ಲಿದ್ದಾರೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಚಾಲಕರಾಗಿ ಕೆಲಸ

> **ಮೂರು ವರ್ಷಗಳ ಹಿಂದೆ ಬದನೆಕಾಯಿ, ಟೊಮೆಟೊ ಸೇರಿದಂತೆ ವಿವಿಧ ತರಕಾರಿ ಬೆಳೆಗಳನ್ನು ಬೆಳೆದು ಉತ್ತಮ ಇಳುವರಿ ಪಡೆದಿದ್ದರು. ಬಳಿಕ ವಾಣಿಜ್ಯ ಬೆಳೆಗಳತ್ತ ಹೊರಳುವ ಯೋಜನೆಯನ್ನೂ ರೂಪಿಸಿದ್ದರು. ಆದರೆ ಅತಿವೃಷ್ಟಿ ಮತ್ತು ಬರ ಅವರ ಆಸೆಗೆ ತಣ್ಣೀರೆರಚಿವೆ.** -ಅಣ್ಣಿಗೇರಿ

ಮಾಡುತ್ತಿದ್ದ ಅಣ್ಣಿಗೇರಿ, ಕೋವಿಡ್ ಬಳಿಕ ಪೂರ್ಣಾವಧಿ ಕೃಷಿಯಲ್ಲಿ ತೊಡಗಿಸಿಕೊಂಡಿದ್ದರು. ಆದರೆ, ಮಳೆಯ ಅನಿಶ್ಚಿತತೆ ಅವರನ್ನು ಕಾಡುತ್ತಿದೆ. ಕೆಲವೊಮ್ಮೆ ಅತಿಯಾದ ಮಳೆಯಾದರೆ, ಇನ್ನೂ ಕೆಲ ಋತುಗಳಲ್ಲಿ ಹನಿ ಮಳೆಯೂ ಇರುವುದಿಲ್ಲ. ಬೆಳೆ ನಷ್ಟದಿಂದ ಅಣ್ಣಿಗೇರಿ ಸೇರಿದಂತೆ ಹಲವು ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ನಷ್ಟವನ್ನು ಭರಿಸಲು ರಾಜ್ಯ, ಕೇಂದ್ರ ಸರ್ಕಾರಗಳು ಪರಿಹಾರ ನೀಡಬೇಕು ಎಂದು ಅವರು ಒತ್ತಾಯಿಸುತ್ತಿದ್ದಾರೆ. ''ಅನೇಕರು ಕೃಷಿಗೆ ಮರಳುವುದನ್ನು ನೋಡಿ ನಾನೂ ಕೃಷಿ ಆರಂಭಿಸಿದೆ. ಆರಂಭದಲ್ಲಿ ಸಂತೋಷವಾಗಿತ್ತು.

ಆದರೆ, ಬರದಿಂದಾಗಿ ಕೃಷಿ ಚಟುವಟಿಕೆಗಳನ್ನು ಸ್ಥಗಿತಗೊಳಿಸಿದ್ದೇವೆ. ಮಲೇಷ್ಯಾ ತಳಿಯ ತೆಂಗು ಮತ್ತು ಸೀತಾಫಲ ಬೆಳೆಯಲು

> **ಅಣ್ಣಿಗೇರಿ ಸೇರಿದಂತೆ ಈ ಭಾಗದ ರೈತರು ಕಳೆದ ಮೂರು ವರ್ಷಗಳಿಂದ ಸತತ ನಷ್ಟ ಅನುಭವಿಸುತ್ತಿದ್ದಾರೆ. 2024 ಮತ್ತು 2025ರಲ್ಲಿ ಈ ಪ್ರದೇಶದಲ್ಲಿ ಅತಿಯಾದ ಮಳೆಯಾಗಿ, ಹೊಲಗಳಲ್ಲಿ ನೀರು ನಿಂತು ಬೆಳೆಗಳು ಕೊಳೆತು ಹೋಗಿದ್ದವು. ಆದರೆ ಈ ವರ್ಷ ಮಳೆಯೇ ಇಲ್ಲದಂತಾಗಿದೆ.**

ಸಾವಿರಾರು ರೂಪಾಯಿ ಹೂಡಿಕೆ ಮಾಡಿದ್ದೇನೆ. ಆದರೆ, ಎಲ್ಲವೂ ವ್ಯರ್ಥವಾಗಿದೆ. ಮುಂದಿನ ದಿನಗಳಲ್ಲಿ ಮಳೆಯಾದರೆ ನನಗೆ ಅನುಕೂಲವಾಗಬಹುದು. ಕೊಳವೆಬಾವಿ ಹೊಂದಿರುವ ರೈತರೂ ಸಂಕಷ್ಟ ಎದುರಿಸುತ್ತಿದ್ದಾರೆ ಎಂದು ಅಣ್ಣಿಗೇರಿ ಅಳಲು ತೋಡಿಕೊಂಡರು. 53 ವರ್ಷದ ಸಂಗಯ್ಯ ಕಲ್ಲಕಯ್ಯ ಹಿರೇಮಠ ಅವರು ವಿಷ ಸೇವಿಸಿದ ಬಳಿಕ ಆಸ್ಪತ್ರೆಗೆ ದಾಖಲಿಸಲಾಗಿತ್ತು.ಆದರೆ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಕುಟುಂಬದ ಮೂಲಗಳ ಪ್ರಕಾರ, ಸಂಗಯ್ಯ ಅವರು ಖಾಸಗಿ ಸಂಸ್ಥೆಗಳು ಮತ್ತು ಸಹಕಾರಿ ಸಂಘಗಳಿಂದ ಒಟ್ಟು ರೂ.16 ಲಕ್ಷ ಸಾಲ ಪಡೆದಿದ್ದರು. ಸತತ ಎರಡು ಬಾರಿ ಬೆಳೆ ನಷ್ಟ ಅನುಭವಿಸಿದ್ದರಿಂದ ಸಾಲ ಮರುಪಾವತಿ ಮಾಡಲು ಸಾಧ್ಯವಾಗಿರಲಿಲ್ಲ. ಅವರು ವಿಬಿಜಿ-ರಾಮ್-ಜಿ ಉದ್ಯೋಗ ಯೋಜನೆಯಲ್ಲಿಯೂ ನೋಂದಾಯಿಸಿಕೊಂಡಿದ್ದರು.